Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 116
ಸೋಮವಾರ, 27 ಏಪ್ರಿಲ್ 2026 | ಪುಟಗಳು: 11 | ಬೆಲೆ: ₹ 5.00
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಬೆಂಗಳೂರಿನಲ್ಲಿ ನಡೆದ ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್‌ನಲ್ಲಿ ಯದುವೀರ್ ಒಡೆಯರ್ ಹೆಜ್ಜೆ

ಐಪಿಎಲ್: ಇಂದು ದಿಲ್ಲಿಯಲ್ಲಿ ಆರ್‌ಸಿಬಿ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವೆ ಪಂದ್ಯ

ಮದುವೆ ನೆಪದಲ್ಲಿ ಟೆಕ್ಕಿಗೆ 10 ಕೋಟಿ ರೂ. ವಂಚನೆ: ತೆಲುಗು ನಟಿ ಆಶು ರೆಡ್ಡಿ ವಿರುದ್ಧ ಎಫ್‌ಐಆರ್

KLE TECH
KLE Technological University
Creating Value, Leveraging Knowledge

HUBBALLI | BENGALURU | BELAGAVI

Ideas. Built. Here.
For an intelligent World..

The KLE TECH. ADVANTAGE

- Deep Academic Legacy with Future-Ready Curriculum
- AI-Integrated, Multidisciplinary Learning Environment
- Hands-On, Project-Driven Education Approach
- Industry-Connected Learning with Real-World Exposure
- Research-Led Education Powered by STAR Lab
- Thriving Innovation & Startup Culture
- Modern Campus with Advanced Infrastructure
- Global Alumni Network Across Industries

250+	46.38	40K+	11 STAR* Labs
Prominent Recruiting Partners	LPA Highest Package 2024	Alumni Network Across The Globe	(*Science & Technology Advanced Research)

Massachusetts Institute of Technology Report Identifies BVB (KLE Tech) as one of the Five Places to Watch Globally for future leadership in Engineering Education

Ranked 1 for Outstanding Institutional Transformation in Engineering Education by IUCEE

NAAC GRADE A

ASSOCHAM INDIA UNIVERSITY of the Year 2021 South (Science & Technology)

ARIIA RANKED AMONG TOP 25 UNIVERSITIES IN THE COUNTRY IN ARIIA 2020 RANKINGS BY GOVT. OF INDIA

nirf NATIONAL INSTITUTIONAL RANKING FRAMEWORK

PROGRAMS OFFERED

B.V. Bhoomaraddi Campus, Hubballi
CET Code - E241 | COMED-K Code - E016

Mechanical | Civil | ECE | EEE | Architecture | Computer Science | Computer Science (AI) | EE (VLSI Design & Technology) | Biotechnology | Automation & Robotics | BCA | BBA | B.Com with ACCA | B.Sc. Fashion and Apparel Design | Integrated MBA | Integrated MCA | LL.B. | BBA LL. B. | LL.M. | B.Sc. in Hotel and Catering Technology

Dr. M. S. Sheshgiri Campus, Belagavi
CET Code - E036 | COMED-K Code - E065

Bio-Medical | Chemical | Mechanical | Civil | Computer Science | Computer Science (AI) | ECE | EEE | BCA

info@kletech.ac.in
www.kletech.ac.in

ADMISSIONS OPEN 2026

For Admissions, Contact:
- Office of Admissions, B. V. Bhoomaraddi Campus, Hubballi - 580 031
- Gokul Campus, Opposite Airport, Gokul, Hubballi - 580 027
- Dr. M. S. Sheshgiri Campus, Udyambag, Belagavi - 590 008

63633 91819 | 0836-2378103 / 106
0831-2443881/82/83

Bennett & Coleman THE TIMES OF INDIA

ಸಂಪಾದಕೀಯ EDITORIAL

ಪಠ್ಯಪುಸ್ತಕ ವಿಳಂಬ ಸಲ್ಲದು
ಮಕ್ಕಳ ಭವಿಷ್ಯದ ಜತೆ ಆಟ ಬೇಡ

ನೂತನ ಶೈಕ್ಷಣಿಕ ವರ್ಷದ ಆರಂಭ ಸನ್ನಿಹಿತವಾಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ ಶಾಲಾ ವಿದ್ಯಾರ್ಥಿಗಳ ಮೇಲೆ ಮತ್ತದೇ ಪಠ್ಯಪುಸ್ತಕ ವಿಳಂಬದ ಕಾರ್ಮೋಡ ಆವರಿಸಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆಯ ಭರವಸೆಗಳ ಹೊರತಾಗಿಯೂ, ಗಣನೀಯ ಪ್ರಮಾಣದ ಪಠ್ಯಪುಸ್ತಕಗಳು ಇನ್ನೂ ಮುದ್ರಣಾಲಯಗಳಲ್ಲಿಯೇ ಸಿಲುಕಿಕೊಂಡಿವೆ ಎಂಬ ವರದಿಗಳು ಕೇಳಿಬಂದಿವೆ. ಇನ್ನೂ ಕೆಲವೆಡೆ ವಿತರಣಾ ಹಂತದಲ್ಲಿ ಸವಾಲು ಎದುರಾಗಿದೆ. ವಿಶೇಷವಾಗಿ ಸರಕಾರಿ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ಜ್ಞಾನದ ಏಕೈಕ ಮೂಲವಾಗಿದ್ದು, ಶಾಲೆಯ ಗಂಟೆ ಬಾರಿಸಿದರೂ ಅವರ ಕೈಯಲ್ಲಿ ಪುಸ್ತಕಗಳು ಸಿಗುವುದು ಅನುಮಾನ ಎನ್ನುವಂತಾಗಿದೆ. ಸರಕಾರಿ ಶಾಲೆಗಳಿಂದ ಮಕ್ಕಳು ವಿಮುಖರಾಗುತ್ತಿರುವ ಹೊತ್ತಲ್ಲಿ ಪಠ್ಯಪುಸ್ತಕ ವಿಳಂಬದಂಥ ಸಮಸ್ಯೆಗಳಿಂದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆಯಷ್ಟೆ. ಅಲ್ಲದೆ, ಖಾಸಗಿ ಹಾಗೂ ಸರಕಾರಿ ಶಾಲೆಗಳ ನಡುವಿನ ಕಲಿಕೆಯ ಅಂತರವು ಕಂದಕದಂತೆ ಬೆಳೆಯುತ್ತಾ ಹೋಗುವ ಸಾಧ್ಯತೆ ಇದೆ. ಶಾಲಾ ಪುಸ್ತಕಗಳ ಜತೆಗೆ ಪಿಯು ಕಾಲೇಜು ಪಠ್ಯಪುಸ್ತಕಗಳ ಮುದ್ರಣದ ಜವಾಬ್ದಾರಿಯೂ ಈ ಬಾರಿ ಕರ್ನಾಟಕ ಪಠ್ಯಪುಸ್ತಕ ಸಂಘದ ಮೇಲೆ ಬಿದ್ದಿದೆ. ಸಂಘವು ಕಡಿಮೆ ಸಮಯದಲ್ಲಿ ಯಾವುದೇ ಲೋಪದೋಷ ಇಲ್ಲದಂತೆ ತನ್ನ ಎಲ್ಲಾ ಜವಾಬ್ದಾರಿ ನಿರ್ವಹಿಸುವುದೇ ಎನ್ನುವ ಪ್ರಶ್ನೆಯೂ ಮೂಡಿದೆ.

ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ತಲುಪಿಸುವುದು ಕೇವಲ ಆಡಳಿತಾತ್ಮಕ ಪ್ರಕ್ರಿಯೆಯಲ್ಲ; ಇದು ಸಮಾನ ಶಿಕ್ಷಣ ವ್ಯವಸ್ಥೆಯ ಮೂಲಾಧಾರ. ಮಗುವಿನ ಪಾಲಿಗೆ ಪಠ್ಯಪುಸ್ತಕವು ಕೇವಲ ಕಾಗದದ ಕಟ್ಟಲ್ಲ. ಅದು ಇಡೀ ವರ್ಷದ ಶೈಕ್ಷಣಿಕ ನಕ್ಷೆ ಮತ್ತು ಸ್ವತಂತ್ರ ಕಲಿಕೆಯ ಸಾಧನ. ಪಠ್ಯಪುಸ್ತಕಗಳು ಇಲ್ಲದಿದ್ದಾಗ, ಶಿಕ್ಷಕ ಮತ್ತು ವಿದ್ಯಾರ್ಥಿ ನಡುವಿನ ಕಲಿಕಾ ಪ್ರಕ್ರಿಯೆಯು ಕುಂಠಿತಗೊಳ್ಳುತ್ತದೆ. ತರಗತಿಗಳು ಔಪಚಾರಿಕವಾಗಿ ನಡೆಯುತ್ತವೆ. ಇದರಿಂದ ಮಕ್ಕಳ ಮೇಲಾಗುವ ಮಾನಸಿಕ ಪರಿಣಾಮವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅಗತ್ಯ ಪರಿಕರಗಳಿಲ್ಲದೆ ಕಲಿಕೆ ಪ್ರಾರಂಭಿಸುವುದು ಮಕ್ಕಳಲ್ಲಿ ಶಾಲಾ ಶಿಕ್ಷಣ ಕುರಿತು ಅಲಕ್ಷ್ಯದ ಭಾವನೆಯನ್ನು ಮೂಡಿಸುತ್ತದೆ.

ರಾಜ್ಯ ಸರಕಾರವು ಈ ವಿಳಂಬವನ್ನು ಸಹಿಸಿಕೊಳ್ಳಬಾರದು. ನಮ್ಮ ವಿದ್ಯಾರ್ಥಿಗಳು ಸರಕಾರದ ವೈಫಲ್ಯದಿಂದಾಗಿ ಕುಂಟುತ್ತಾ ಸಾಗುವಂತಾಗಬಾರದು. ಪಠ್ಯಪುಸ್ತಕ ವಿಳಂಬವು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ, ಇದು ಶಿಕ್ಷಣ ಕ್ಷೇತ್ರದ ಕುರಿತ ಅಸಡ್ಡೆಯೂ ಹೌದು. ಇಲಾಖೆಯು ಅಧಿಕಾರಶಾಹಿ ವಿಳಂಬವನ್ನು ಬದಿಗಿಟ್ಟು, ಟೆಂಡರ್ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕು ಮತ್ತು ವಿಳಂಬಕ್ಕೆ ತೊಡಕಾಗುವವರನ್ನು ಗುರುತಿಸಿ ಹೊಣೆಗಾರರನ್ನಾಗಿ ಮಾಡಬೇಕು. ಪ್ರತಿಯೊಂದು ಮಗುವಿನ ಕೈಗೆ ಪುಸ್ತಕ ತಲುಪಿಸುವುದು ಸರಕಾರದ ಹೊಣೆಗಾರಿಕೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು. ಮಕ್ಕಳ ಭವಿಷ್ಯವು ಮುದ್ರಣಾಲಯಗಳಿಂದ, ಆಡಳಿತಾತ್ಮಕ ಬೇಜವಾಬ್ದಾರಿತನದಿಂದ ಕುಂಠಿತಗೊಳ್ಳುವಂತಾಗಬಾರದು. ಈ ಸಮಸ್ಯೆ ಶೀಘ್ರ ಪರಿಹಾರಗೊಳ್ಳಲಿ.

ಬೋಧಿ ವೃಕ್ಷ

ತಪೋಮೂರ್ತಿ ಅಗಸ್ತ್ಯರು



ಅಗಸ್ತ್ಯ ತಪಸ್ಸು ಅದ್ಭುತವಾದದ್ದು. ಲೋಕವಿಲಕ್ಷಣವಾದದ್ದು ಮತ್ತು ಅವರ ತಪಸ್ಸು ಕೇವಲ ಅವರ ವೈಯಕ್ತಿಕ ಸಾಧನೆ ಅಷ್ಟೇ ಆಗಿರಲಿಲ್ಲ, ಕಿಂತು ಜಗತ್ತಿಗೇ ಕ್ಷೇಮಕರವಾಗಿತ್ತು.

ಸೂರ್ಯ ಪ್ರತಿನಿತ್ಯ ಮೇರುಪರ್ವತಕ್ಕೆ ಪ್ರದಕ್ಷಿಣೆ ಹಾಕುತ್ತಾ ಜಗತ್ತಿಗೇ ಬೆಳಕನ್ನು ನೀಡುತ್ತಾನೆ. ಇದು ಸೂರ್ಯನಿಗೆ ವಿಷ್ಣು ಮಾಡಿದ ಆದೇಶ. ಇದನ್ನು ಅರಿತ ವಿಂಧ್ಯ ಪರ್ವತ (ಅಭಿಮಾನಿದೇವತೆ) ''ಸೂರ್ಯನ ಬಳಿ ತೆರಳಿ ಮೇರುವಿಗೆ ಪ್ರದಕ್ಷಿಣೆ ಹಾಕುವಂತೆ ನನಗೂ ಪ್ರದಕ್ಷಿಣೆ ಹಾಕು,'' ಎಂದು ಹೇಳಿದ. ''ನಾನು ಸಂಚರಿಸುವುದು ನನ್ನ ವೈಯಕ್ತಿಕ ಸಂಚಾರ ಅಲ್ಲ, ಮೇರುಪರ್ವತಕ್ಕೆ ಪ್ರದಕ್ಷಿಣೆ ಹಾಕಿ ಜಗತ್ತಿಗೆ ಬೆಳಕು ನೀಡಬೇಕೆಂದು ವಿಷ್ಣುವಿನ ಆದೇಶ ಇದೆ. ಹೀಗಾಗಿ ನಿನಗೆ ಪ್ರದಕ್ಷಿಣೆ ಹಾಕಲು ಸಾಧ್ಯವಿಲ್ಲ,'' ಎಂದ ಸೂರ್ಯ. ಕೋಪಗೊಂಡ ವಿಂಧ್ಯ ಪರ್ವತ (ಅಭಿಮಾನಿದೇವತೆ) ಸೂರ್ಯನಿಗೇ ಅಡ್ಡಿಯಾಗುವಂತೆ ಬೆಳೆದು ಜಗತ್ತಿಗೆ ಸೂರ್ಯನ ಬೆಳಕೇ ಹೋಗದಂತೆ ಮಾಡೋಣ ಎಂದು ಯೋಚಿಸಿ, ಬಹಳ ಎತ್ತರ ಬೆಳೆಯಲು ಆರಂಭಿಸಿದ.

ದೇವತೆಗಳು ಸ್ವಯಂ ಸಮರ್ಥರಾದರೂ ಅಗಸ್ತ್ಯ ಕೀರ್ತಿ ಕೊಡುವ ಉದ್ದೇಶದಿಂದ ಅಗಸ್ತ್ಯ ಬಳಿ ಬಂದು, ವಿಂಧ್ಯ ಪರ್ವತ ಬೆಳೆಯದಂತೆ ತಡೆಯಲು ವಿನಂತಿಸಿದರು. ದೇವತೆಗಳ ವಿನಂತಿಯಂತೆ ಅಗಸ್ತ್ಯ ವಿಂಧ್ಯ ಪರ್ವತದ ಬಳಿ ಬಂದು ನಾನು ನಿನ್ನನ್ನು ದಾಟಿ ದಕ್ಷಿಣದಿಕ್ಕಿನ ಕಡೆ ಹೋಗುತ್ತೇನೆ. ಮರಳಿ ನಾನು ಬರುವವರೆಗೂ ನೀನು ಬೆಳೆಯಬೇಡ ಎಂದು ಆದೇಶ ಮಾಡಿ, ವಿಂಧ್ಯ ಪರ್ವತ ದಾಟಿ ದಕ್ಷಿಣದತ್ತ ಬಂದರು. ಅಂದು ದಕ್ಷಿಣದತ್ತ ಬಂದ ಅಗಸ್ತ್ಯ ಇಂದಿಗೂ ದಕ್ಷಿಣದಲ್ಲಿಯೇ ಇದ್ದಾರೆ. ಅಗಸ್ತ್ಯರ ಆದೇಶಕ್ಕೆ ಹೆದರಿ ವಿಂಧ್ಯ ಪರ್ವತ ಬೆಳೆಯುವುದು ನಿಲ್ಲಿಸಿತು. ಇಂದು ನಮಗೆಲ್ಲ ಸೂರ್ಯನ ಬೆಳಕು ನಿರಾತಂಕವಾಗಿ ಬರುತ್ತಿದೆ ಎಂದರೆ ಅದರಲ್ಲಿ ಅಗಸ್ತ್ಯ ಪಾತ್ರ ದೊಡ್ಡದಿದೆ.

ಅಗಸ್ತ್ಯರು ವಿಂಧ್ಯ ಪರ್ವತ ಬೆಳೆಯುವುದನ್ನು ನಿಲ್ಲಿಸಿದಂತೆ, ಅಗಸ್ತ್ಯರ ಅನುಗ್ರಹದಿಂದ ನಮ್ಮ ಪಾಪದ ಬೆಟ್ಟ ಬೆಳೆಯುವುದೂ ನಿಲ್ಲಬೇಕಿದೆ. 'ಇಷ್ಟು ಪಾಪವನು ಮಾಡಿದ್ದೇ ಸಾಕೋ' ಎಂಬುದಾಗಿ ದಾಸರು ಹೇಳಿದಂತೆ ಪ್ರತಿನಿತ್ಯ ನಾವು ಮಾಡುವ ಪಾಪಗಳೂ ಬೆಟ್ಟದಷ್ಟು ಏರುತ್ತಲೇ ಇವೆ. ವಿಂಧ್ಯ ಪರ್ವತ ಸೂರ್ಯನ ಬೆಳಕೇ ಬಾರದಂತೆ ಅಡ್ಡಿಯಾಗಿ ಬೆಳೆಯುತ್ತಿತ್ತು. ಈಶಾವಾಸ್ಯಭಾಷ್ಯ ಟೀಕೆಯಲ್ಲಿ ಶ್ರೀ ಜಯತೀರ್ಥರು ತಿಳಿಸಿದಂತೆ ನಮ್ಮ ಪಾಪಗಳೂ ಜೀವನದ ಬೆಳಕಿಗೆ (ಭಗವಂತನ ಸಾಕ್ಷಾತ್ಕಾರಕ್ಕೆ) ಅಡ್ಡಿಯಾಗಿ ನಿಲ್ಲುತ್ತಿವೆ. ಅಗಸ್ತ್ಯ ವಿಂಧ್ಯ ಪರ್ವತ ಬೆಳೆಯುವುದನ್ನು ನಿಲ್ಲಿಸಿ ಜಗತ್ತಿಗೆ ಸೂರ್ಯನ ಬೆಳಕು ಕೊಟ್ಟಂತೆ, ಅಗಸ್ತ್ಯ ಅನುಗ್ರಹದಿಂದ ನಮ್ಮ ಪಾಪಗಳ ಪರ್ವತವೂ ಬೆಳೆಯದಂತೆ ನಿಂತು, ಜೀವನದಲ್ಲಿ ಬೆಳಕು ಬರುವಂತೆ (ಭಗವಂತನ ಸಾಕ್ಷಾತ್ಕಾರ ಆಗುವಂತೆ) ಆಗಲಿ. ಈ ನಿಟ್ಟಿನಲ್ಲಿ ಮಹಾತಪೋಮೂರ್ತಿಗಳಾದ ಅಗಸ್ತ್ಯ ಅನುಗ್ರಹ ನಮ್ಮೆಲ್ಲರ ಮೇಲೆ ಸದಾ ಇರಲಿ.

ಶ್ರೀಸತ್ಯಾತ್ಮತೀರ್ಥ ಸ್ವಾಮೀಜಿ, ಉತ್ತರಾದಿಮಠ

ವಿಕ ತಗೋ ಕನ್ನಡ

ಅವ್ವಲ್, ಅವಲ್, ಅವಲು

ಇದಕ್ಕೆ ಮೊದಲನೇ ದರ್ಜೆಯ, ಅತ್ಯುತ್ತಮವಾದ, ಉತ್ಕೃಷ್ಟವಾದ, ಹಸನಾದ, ಮಿಶ್ರವಲ್ಲದ, ಸರ್ವೋತ್ತಮವಾದ, ಶ್ರೇಷ್ಠವಾದ ಮುಂತಾದ ಅರ್ಥಗಳಿವೆ. ಇದು ಈಗ ಮತ್ತೆ ಮುನ್ನೆಲೆಗೆ ಬರುವ ಎಲ್ಲ ತಾಕತ್ತನ್ನೂ ಹೊಂದಿದೆ.

ಬಹಮನಿ, ಆದಿಲ್ ಶಾಹಿ, ಮೈಸೂರಿನ ಸುಲ್ತಾನರು, ನಿಜಾಮರು ಮುಂತಾದವರ ಆಳ್ವಿಕೆಯಲ್ಲಿ ಅರಬ್ಬಿ ಭಾಷೆಯ ಈ ಪದ ನುಗ್ಗಿ ನಮ್ಮ ಭಾಷೆಯಲ್ಲಿ ಸೇರಿಕೊಂಡಿತು. ಅದರ ಪ್ರಾಮುಖ್ಯತೆ ಎಷ್ಟಿತ್ತೆಂದರೆ ಮುಂದೆ ಬ್ರಿಟಿಷರೂ ಆ ಪದವನ್ನು ಬಳಸಿದರು. ಅವರ ಮುಖ್ಯ ಕಮಿಷನರ್ 'ಅವ್ವಲ್ ಕಮಿಷನರ್' ಆಗಿಹೋದರು! ಅವರ ಪ್ರಯಾಣಕ್ಕೆ 'ಅವ್ವಲ್ ಲವಾಜಮೆ' ಸರಬರಾಜಾಗುತ್ತಿದ್ದವು. ಅವರಿಗೆ 'ಅವ್ವಲ್ ರಾತೀಬು' - ಅತ್ಯುತ್ತಮವಾದ ಆಹಾರ ತಯಾರಾಗುತ್ತಿತ್ತು! ಕುಡಿಯಲು 'ಅವ್ವಲ್ ಮದ್ಯ' ಇರುತ್ತಿತ್ತು. ಆಗ ಜನಸಾಮಾನ್ಯರು, ತಾವೇನು ಕಮ್ಮಿ ಎಂದು, ಅತ್ಯುತ್ತಮ ಬೆಳೆ ಬೆಳೆಯುವ ಜಮೀನನ್ನು 'ಅವಲು ಭೂಮಿ' ಎಂದು ಕರೆದರು; ಶ್ರೀಮಂತರಿಗೆ 'ಅವ್ವಲ್ ಮಸ್ಲಿನ್' ಪಂಚೆ ಬೇಕಾಗಿತ್ತು.

- ಜಿ.ವಿ. ಅರುಣ

- ಪದ ಸೂಚಿಸಿದವರು: ರಾಜಲಕ್ಷ್ಮಿ, ಬೆಂಗಳೂರು

ಬತ್ತಳಿಕೆ





ವಿಕ ಜೋಕ್ FALLS

ಸಂಗಿ: ನಾನು ನಿಮ್ ಸೀರೆ ಅಂಗಡಿಯ ರೆಗ್ಯುಲರ್ ಕಸ್ಟಮರ್, ವರ್ಷಗಳಿಂದ ಬರ್ತಿದ್ದೀನಿ. ಈ ಸೀರೆಗೆ ಒಳ್ಳೆ ಡಿಸ್ಕೌಂಟ್ ಹಾಕಿ.

ಕ್ಯಾಷಿಯರ್: ಮೇಡಂ ಈ ಅಂಗಡಿ ಶುರು ಮಾಡಿ ಒಂದು ವಾರ ಆಯ್ತು.

■ ಹರ್ಷವರ್ಧನ್ ಸುಳ್ಯ

ಜಗತ್ತಿನ ಅತ್ಯಂತ ಅಪಾಯಕಾರಿ ಹುದ್ದೆ ಎಂದರೆ 'ಅಮೆರಿಕದ ಅಧ್ಯಕ್ಷ'ರ ಹುದ್ದೆ. ಏ.26ರಂದು ಡೊನಾಲ್ಡ್ ಟ್ರಂಪ್ ಔತಣಕೂಟದಲ್ಲಿ ಕೇಳಿಬಂದ ಗುಂಡಿನ ಮೊರೆತವು ಇದಕ್ಕೆ ಮತ್ತೊಂದು ನಿದರ್ಶನ. ಮೇಲ್ನೋಟಕ್ಕೆ ಈ ಮಾತು ಲಘು ಹಾಸ್ಯದಂತೆ ತೋರುತ್ತದೆ. ಆದರೆ, ಅಮೆರಿಕದ ಇತಿಹಾಸದತ್ತ ಒಮ್ಮೆ ಮುಖ ಮಾಡಿದರೆ ಅಲ್ಲಿನ ಅಧ್ಯಕ್ಷರ ಹತ್ಯೆ ಯತ್ನಗಳು ಈ ಹಿಂದೆಯೂ ನಡೆದಿರುವ ನಿದರ್ಶನಗಳ ನೆನಪು ಬಿಚ್ಚಿಕೊಳ್ಳುತ್ತದೆ.

ಅಮೆರಿಕ ಅಧ್ಯಕ್ಷರಿಗೆ ಗುಂಡಿನ ಕಂಟಕ

ಭಾನುವಾರ (26-04-2026) ಡೊನಾಲ್ಡ್ ಟ್ರಂಪ್ ಔತಣಕೂಟದಲ್ಲಿ ಕೇಳಿಬಂದ ಗುಂಡಿನ ಮೊರೆತವು ಇತಿಹಾಸ ಪುಟಗಳನ್ನು ದಾಟಿ ಅನುರಣಿಸಿದ ಸಂಘರ್ಷಕ್ಕೆ ಪ್ರತಿಧ್ವನಿಯಾಗಿದೆ. ಶ್ವೇತಭವನದ ಓವಲ್ ಕಚೇರಿಯ ಶಕ್ತಿ ಪೀಠದಲ್ಲಿ ಕುಳಿತುಕೊಳ್ಳುವ ಚಹರೆಗಳು ಬದಲಾಗುತ್ತಿದ್ದರೂ ಅವರ ಮೇಲಿನ ದಾಳಿ ಪ್ರಕರಣಗಳು ಮಾತ್ರ ನಿಂತಿಲ್ಲ.

ಅಧ್ಯಕ್ಷರಾದ ಅಬ್ರಹಾಂ ಲಿಂಕನ್, ಜೇಮ್ಸ್ ಗಾರ್‌ಫೀಲ್ಡ್, ವಿಲಿಯಂ ಮೆಕಿನ್ಲೆ, ಜಾನ್ ಎಫ್. ಕೆನಡಿಯವರು ಇಂತಹ ದಾಳಿಗಳಲ್ಲೇ ಮೃತಪಟ್ಟರೆ, ಥಿಯೋಡಾರ್ ರೂಸ್ವೆಲ್ಟ್, ರೊನಾಲ್ಡ್ ರೇಗನ್ ದಾಳಿಯಿಂದ ಕೂದಲೆಳೆಯ ಅಂತರದಲ್ಲಿ ಪಾರಾದ ಅದೃಷ್ಟವಂತರು. ಈ ಪೈಕಿ ಅಬ್ರಹಾಂ ಲಿಂಕನ್, ಜಾನ್ ಎಫ್. ಕೆನಡಿ, ಥಿಯೋಡಾರ್ ರೂಸ್ವೆಲ್ಟ್ ಮತ್ತು ರೊನಾಲ್ಡ್ ರೇಗನ್ ಅತ್ಯಂತ ಜನಪ್ರಿಯ ಅಧ್ಯಕ್ಷರಾಗಿದ್ದರು.

ಅಬ್ರಹಾಂ ಲಿಂಕನ್ (1865)



ಅಮೆರಿಕದ ರಾಜಕೀಯ ಚರಿತ್ರೆಯಲ್ಲಿ ದಾಳಿಯಿಂದ ಮೃತಪಟ್ಟ ಮೊದಲ ಅಧ್ಯಕ್ಷ ಅಬ್ರಹಾಂ ಲಿಂಕನ್. ಅವರು ನಾಟಕ ನೋಡುತ್ತಿದ್ದ ಸಮಯದಲ್ಲಿ ಜಾನ್ ಬೂತ್ ಎಂಬ ಜನಪ್ರಿಯ ನಟ ನಡೆಸಿದ ಗುಂಡಿನ ದಾಳಿಗೆ ಬಲಿಯಾಗಿದ್ದು ಇತಿಹಾಸ. ಅಲ್ಲಿಂದ ಶುರುವಾದ ರಾಜಕೀಯ ಹಿಂಸೆ ಅಮೆರಿಕದ ಇತಿಹಾಸ ಭಾಗವಾಗಿ ಬೇರೂರಿಬಿಟ್ಟಿರುವುದು ವಿಪರ್ಯಾಸ.

ಕಾರಣ: ರಾಜಕೀಯ ಸೇಡು ಮತ್ತು ಶ್ವೇತವರ್ಣೀಯರ ಪ್ರಾಬಲ್ಯದ ಗೀಳು

ನಾಗರಿಕ ದಂಗೆಯಲ್ಲಿ ದಕ್ಷಿಣದ ಸೋಲಿನಿಂದ ಬೂತ್ ಕಂಗಾಲಾಗಿದ್ದ. ಲಿಂಕನ್‌ರನ್ನು ಕೊಲ್ಲುವುದು ಅವನ ಮೂಲ ಉದ್ದೇಶವಾಗಿರಲಿಲ್ಲ. ಲಿಂಕನ್‌ರನ್ನು ಅಪಹರಿಸಿ ಸೆರೆಮನೆಯಲ್ಲಿದ್ದ ಕೈದಿಗಳ ಬಿಡುಗಡೆಗೆ ಒತ್ತಡ ಹೇರುವುದು ಬೂತ್ ಉದ್ದೇಶವಾಗಿತ್ತು. ಆದರೆ ಲಿಂಕನ್ ತಮ್ಮ ಕೊನೆಯ ಭಾಷಣದಲ್ಲಿ ಕಪ್ಪು ಜನಾಂಗೀಯರಿಗೆ ಮತದಾನ ಹಕ್ಕು ನೀಡುವುದನ್ನು ಬೆಂಬಲಿಸಿದರು. ಆ ಬಳಿಕವೇ ಬೂತ್ ಕೆಂಡಾಮಂಡಲನಾಗಿ ಅಪಹರಣದ ಸಂಚನ್ನು ಕೊಲೆಗೆ ಬದಲಾಯಿಸಿಕೊಂಡ.

ಜೇಮ್ಸ್ ಎ. ಗಾರ್‌ಫೀಲ್ಡ್ (1881)



ಅಧ್ಯಕ್ಷ ಗಾರ್‌ಫೀಲ್ಡ್ ಅವರು ಯಾವುದೇ ಸಂಘಟನೆ ಅಥವಾ ವ್ಯಕ್ತಿಯ ರಾಜಕೀಯ ಪ್ರೇರಿತ ಸಂಚಿಗೆ ಬಲಿಯಾಗಲಿಲ್ಲ. ಅವರು ಬಲಿಯಾಗಿದ್ದು ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ ಚಾರ್ಲ್ಸ್ ಜೆ. ಗುಟಿಯು ಎಂಬಾತನಿಗೆ. ಗಾರ್‌ಫೀಲ್ಡ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ತನ್ನಿಂದಲೇ ಎನ್ನುವ ಭ್ರಮೆ ಚಾರ್ಲ್ಸ್‌ಗಿತ್ತು.

ಕಾರಣ: ಭ್ರಮೆ

ಚಾರ್ಲ್ಸ್‌ಗೆ ಪ್ಯಾರಿಸ್‌ನ ಕಾನ್ಸುಲ್‌ಷಿಪ್ ಎನ್ನುವ ಪ್ರತಿಷ್ಠಿತ ಹುದ್ದೆ ಅಲಂಕರಿಸುವ ಅದಮ್ಯ ಹಂಬಲವಿತ್ತು. ಗಾರ್‌ಫೀಲ್ಡ್ ಅಧ್ಯಕ್ಷರಾಗುವಲ್ಲಿ ತನ್ನದೇ ಪ್ರಮುಖ ಪಾತ್ರ ಎಂದು ನಂಬಿದ್ದರಿಂದ ತನ್ನ ಆಸೆಯನ್ನು ಈಡೇರಿಸಿಕೊಡುವುದು ಅಧ್ಯಕ್ಷರ ಕರ್ತವ್ಯ ಎನ್ನುವುದು ಚಾರ್ಲ್ಸ್ ಯೋಚನೆಯಾಗಿತ್ತು. ಆತನ ಆಸೆ ಕೈಗೂಡದೇ ಇದ್ದಾಗ ಗಾರ್‌ಫೀಲ್ಡ್ ಮೇಲೆ ಕೋಪಗೊಂಡು ರೈಲು ನಿಲ್ದಾಣದಲ್ಲಿ ಅವರ ಮೇಲೆ ಗುಂಡಿನ ದಾಳಿ ನಡೆಸಿ ಕೊಂದುಹಾಕಿದ. ಬಳಿಕ ಅಧ್ಯಕ್ಷರನ್ನು ಕೊಲ್ಲಲು ದೇವರೇ ತನಗೆ ಹೇಳಿದ್ದಾಗಿ ತನ್ನ ಕೃತ್ಯವನ್ನು ಸಮರ್ಥಿಸಿಕೊಂಡ.

ವಿಕ ಫೋಕಸ್

ವಿಲಿಯಂ ಮೆಕಿನ್ಲೆ (1901)

'ಅಧ್ಯಕ್ಷ' ಎಂದರೆ ವ್ಯವಸ್ಥಿತ ದಬ್ಬಾಳಿಕೆಯ ಪ್ರತೀಕ ಎಂಬ ಅಭಿಪ್ರಾಯ ಹೊಂದಿದ್ದ ಲಿಯೋನ್ ಜೋಲ್ಗೊಜ್ ಎಂಬಾತ ಅಧ್ಯಕ್ಷ ವಿಲಿಯಂ ಮೆಕಿನ್ಲೆಯವರ ಬಲಿ ಪಡೆದ. ಹಸ್ತಲಾಘವದ ಉದ್ದೇಶದಿಂದ ಅಧ್ಯಕ್ಷರನ್ನು ಸಮೀಪಿಸಿದ ಲಿಯೋನ್ ಏಕಾಏಕಿ ಗುಂಡಿನ ದಾಳಿ ನಡೆಸಿದ. ಸಾರ್ವಜನಿಕವಾಗಿ ಬೆರೆಯುತ್ತಿದ್ದ ಅಮೆರಿಕನ್ ಅಧ್ಯಕ್ಷರ ಪ್ರವೃತ್ತಿ ಅಲ್ಲಿಗೆ ಕೊನೆಯಾಯಿತು. ಮೆಕಿನ್ಲೆ ಹತ್ಯೆ ಬಳಿಕ ಅಮೆರಿಕದ ಅಧ್ಯಕ್ಷರ ಭದ್ರತೆಗೆ ಸೀಕ್ರೆಟ್ ಸರ್ವಿಸ್ ಪಡೆಯನ್ನು ನೇಮಕಗೊಳಿಸಲಾಯಿತು.

ಕಾರಣ: ಸರಕಾರ ವಿರೋಧಿ ವಿಚಾರಧಾರೆ

ಅಧ್ಯಕ್ಷ ಮೆಕಿನ್ಲೆ ಕಾರ್ಪೊರೇಟ್ ಗುಲಾಮಗಿರಿಯನ್ನು ಹೇರುತ್ತಿದ್ದಾರೆ. ಅವರು ದೇಶದ ಒಳ್ಳೆಯ ಕೆಲಸಗಾರರ ಶತ್ರು ಎನ್ನುವ ಅಭಿಪ್ರಾಯ ಲಿಯೋನ್‌ದಾಗಿತ್ತು. ಯುರೋಪಿನ ಅರಾಜಕ ಚಳವಳಿಗಳಿಂದ ಪ್ರೇರಣೆ ಪಡೆದ ಆತ ಅಮೆರಿಕದಲ್ಲಿಯೂ ಅಂಥದ್ದೇ ಬದಲಾವಣೆ ತರುವ ಇರಾದೆ ಹೊಂದಿದ್ದ. ಅಮೆರಿಕ ಸರಕಾರದ ಮುಖಂಡನನ್ನೇ ಕೊಲ್ಲುವ ಮೂಲಕ ದೇಶದಲ್ಲಿ ಕ್ರಾಂತಿಯ ಅಲೆ ತರಬೇಕು ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ಬುಡಮೇಲು ಮಾಡಬೇಕು ಎನ್ನುವುದು ಅವನ ಉದ್ದೇಶವಾಗಿತ್ತು.

ಜಾನ್ ಎಫ್. ಕೆನಡಿ (1963)

ಅಮೆರಿಕ ಮಾತ್ರವಲ್ಲ ಜಗತ್ತನ್ನೇ ಕಾಡಿದ ಆಘಾತಕಾರಿ ಹತ್ಯೆ ಎಂದೇ ಜಾನ್ ಎಫ್. ಕೆನಡಿ ಪ್ರಕರಣ ಗುರುತಿಸಿಕೊಳ್ಳುತ್ತದೆ. ಪರೇಡ್‌ನಲ್ಲಿ ಕಾರಿನಲ್ಲಿ ತೆರೆದ ಕಾರಿನಲ್ಲಿ ಪತ್ನಿ ಜೊತೆ ಸಾಗುತ್ತಿದ್ದಾಗಲೇ ಕೆನಡಿ ಹತ್ಯೆ ನಡೆಯಿತು. ಕೆನಡಿ ಹತ್ಯೆ ಪ್ರಕರಣ ಕುರಿತು ಹಲವು ಊಹಾಪೋಹಗಳು ಇಂದಿಗೂ ಹರಿದಾಡುತ್ತಲೇ ಇರುವುದು ಅದರ ಪ್ರಾಮುಖ್ಯತೆಗೆ ಕೈಗನ್ನಡಿ ಹಿಡಿಯುತ್ತದೆ. ಓಸ್ವಾಲ್ಡ್ ಎಂಬಾತನನ್ನು ದೋಷಿಯನ್ನಾಗಿ ಗುರಿ ಮಾಡಲಾಯಿತಾದರೂ ಇಂದಿಗೂ ಈ ಪ್ರಕರಣ ಜನಮಾನಸದಲ್ಲಿ ವಿವಾದಾತ್ಮಕ ಎಂದೇ ಪರಿಗಣಿತವಾಗಿದೆ.

ಕಾರಣ: ಕಮ್ಯುನಿಸ್ಟ್ ಚಳವಳಿಯಲ್ಲಿ ಹೆಸರು ಮಾಡಲು

ಓಸ್ವಾಲ್ಡ್ ಮಾರ್ಕ್ಸ್‌ವಾದಿಯಾಗಿದ್ದ. ಕ್ಯೂಬಾ ಕ್ರಾಂತಿಯನ್ನು ಅವನು ಬೆಂಬಲಿಸಿದ್ದ. ರಷ್ಯಾದಲ್ಲಿ ಕೆಲ ಕಾಲ ನೆಲೆಸಿದ್ದಲ್ಲದೆ ಅಲ್ಲಿನ ಪೌರತ್ವ ಪಡೆಯುವ ಪ್ರಯತ್ನವನ್ನೂ ನಡೆಸಿದ್ದ. ಓಸ್ವಾಲ್ಡ್ ಪಾಲಿಗೆ ಕೆನಡಿ ಸಾಮ್ರಾಜ್ಯಶಾಹಿಯಂತೆ ಕಂಡಿದ್ದರು. ಕೆನಡಿಯನ್ನು ಕೊಂದರೆ ಜಾಗತಿಕ ಕಮ್ಯುನಿಸ್ಟ್ ಇತಿಹಾಸದಲ್ಲಿ ತನ್ನ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಅವನು ನಂಬಿದ್ದ.

ಥಿಯೋಡಾರ್ ರೂಸ್ವೆಲ್ಟ್ (1912)

ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದ್ದ ಸಂದರ್ಭ ಥಿಯೋಡಾರ್ ರೂಸ್ವೆಲ್ಟ್ ಎದೆಗೆ ಜಾನ್ ಸ್ಕ್ರಾಂಕ್ ಎಂಬ ಕ್ಷೌರಿಕ ಗುಂಡಿಕ್ಕಿದ್ದ. ಹಾಗೆ ನೋಡಿದರೆ ಯಾವುದೇ ಸಂದರ್ಭದಲ್ಲಾದರೂ ಎದೆಗೆ ಗುಂಡು ತಗುಲಿದ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಬೇಕಿತ್ತು. ಆದರೆ ಅಧ್ಯಕ್ಷ ರೂಸ್ವೆಲ್ಟ್‌ರ ಅದೃಷ್ಟ ಎಷ್ಟು ಗಟ್ಟಿಯಿತ್ತೆಂದರೆ ಎದೆಗೆ ಬಿದ್ದ ಬುಲೆಟ್‌ನ ವೇಗವನ್ನು 50 ಪುಟಗಳ ಭಾಷಣದ ಪ್ರತಿ ಮತ್ತು ಲೋಹದ ಕನ್ನಡಕ ಪೆಟ್ಟಿಗೆ ತಗ್ಗಿಸಿತು. ಇದರಿಂದ ಬುಲೆಟ್ ಎದೆಗೂಡನ್ನು ಸೀಳಿದರೂ ಪ್ರಾಣಹಾನಿ ಸಂಭವಿಸಲಿಲ್ಲ. ದಾಳಿ ಬಳಿಕ ರೂಸ್ವೆಲ್ಟ್ ಆಸ್ಪತ್ರೆಗೆ ಧಾವಿಸಲಿಲ್ಲ. ಭಾಷಣ ಮಾಡಿಯೇ ಹೊರಡುವುದಾಗಿ 90 ನಿಮಿಷಗಳ ಕಾಲ ಮಾತನಾಡಿ ನಂತರ ಹೊರಟರು.

ಕಾರಣ: ಭ್ರಮೆ

ಗುಂಡಿನ ದಾಳಿಗೆ ಬಲಿಯಾದ ಅಧ್ಯಕ್ಷ ವಿಲಿಯಂ ಮೆಕಿನ್ಲೆಯ ಆತ್ಮವು ತನ್ನ ಕನಸಿನಲ್ಲಿ ಬಂದು ರೂಸ್ವೆಲ್ಟ್ ತಮ್ಮನ್ನು ಕೊಂದಿದ್ದಾಗಿ ಹೇಳಿದೆ. ಆದರಿಂದಾಗಿ ಅವರನ್ನು ಕೊಲ್ಲಲು ಯತ್ನಿಸಿದ್ದಾಗಿ ಸ್ಕ್ರಾಂಕ್ ಹೇಳಿದ. ಅಧ್ಯಕ್ಷರು ಎರಡು ಅವಧಿಗಿಂತ ಹೆಚ್ಚು ಸೇವೆ ಸಲ್ಲಿಸಬಾರದು ಎಂದು ಸ್ಕ್ರಾಂಕ್ ನಂಬಿದ್ದ ಮತ್ತು ಮೂರನೇ ಅವಧಿಯ ಸರ್ವಾಧಿಕಾರ ತಡೆಯುವ ದೈವಿಕ ಏಜೆಂಟ್ ತಾನೆಂಬ ಭ್ರಮೆ ಅವನನ್ನು ಆವರಿಸಿತ್ತು.

ರೊನಾಲ್ಡ್ ರೇಗನ್ (1981)

ಅಮೆರಿಕದ ಜನಪ್ರಿಯ ಅಧ್ಯಕ್ಷರ ಪೈಕಿ ಗುರುತಿಸಿಕೊಳ್ಳುವ ರೊನಾಲ್ಡ್ ರೇಗನ್ ಹಾಲಿವುಡ್ ನಟಿ ಜೋಡಿ ಫಾಸ್ಟರ್‌ರನ್ನು ಇಂಪ್ರೆಸ್ ಮಾಡಲು ಫೋಟೊ ತೆಗೆಸಿಕೊಳ್ಳಲು ಹೋಟೆಲ್ ಎದುರು ಬಂದಿದ್ದರು. ಅದೇ ಸಮಯದಲ್ಲಿ ಮುಸುಕುಧಾರಿಯಿಂದ ಅವರ ಮೇಲೆ 6 ಬಾರಿ ಗುಂಡಿನ ದಾಳಿ ನಡೆಯಿತು. ಅವರ ಶ್ವಾಸಕೋಶಕ್ಕೆ ಗುಂಡು ತಗುಲಿತು. ಹತ್ಯೆ ಯತ್ನ ನಡೆಸಿದಾತ ಜಾನ್ ಹಿಂಕ್ಲೆ ಎಂದು ಬಳಿಕ ತಿಳಿದುಬಂದಿತು. ಸಾವಿಗೆ ಅತ್ಯಂತ ಸಮೀಪ ಬಂದು ಪಾರಾಗಿದ್ದಾಗಿ ವೈದ್ಯರು ಹೇಳಿದ ಮೇಲಷ್ಟೇ ರೇಗನ್‌ಗೆ ದಾಳಿಯ ಗಂಭೀರತೆ ಅರಿವಾಗಿದ್ದು. ಏಕೆಂದರೆ ತಮಗೆ ಚಿಕಿತ್ಸೆ ನೀಡುವಾಗಲೂ ವೈದ್ಯರ ಜೊತೆ ಹಾಸ್ಯದ ಮಾತುಗಳನ್ನಾಡಿದ್ದರು. ನೀವೆಲ್ಲರೂ ಯಾವ ರಾಜಕೀಯ ಪಕ್ಷವನ್ನು ಬೆಂಬಲಿಸುತ್ತೀರಿ ಎಂದೂ ತಮಾಷೆಗೆ ಪ್ರಶ್ನಿಸಿದ್ದರು.

ಕಾರಣ: ನಟಿಯ ಮೇಲಿನ ಅಂಧಾಭಿಮಾನ

ರೇಗನ್ ಯಾವ ನಟಿಯನ್ನು ಇಂಪ್ರೆಸ್ ಮಾಡಲೆಂದು ಬಯಸಿದ್ದರೋ, ದಾಳಿ ನಡೆಸಿದ ಜಾನ್ ಅದೇ ಜೋಡಿ ಫೋಸ್ಟರ್ ಅಭಿಮಾನಿಯಾಗಿದ್ದ. ಟ್ಯಾಕ್ಸಿ ಡ್ರೈವರ್ ಎಂಬ ಸಿನಿಮಾ ನೋಡಿ ಅದರಲ್ಲಿ ನಟಿಸಿದ್ದ ಜೋಡಿ ಫೋಸ್ಟರ್ ಮೇಲೆ ಜಾನ್ ಹಿಂಕ್ಲೆ ವ್ಯಾಮೋಹ ಬೆಳೆಸಿಕೊಂಡಿದ್ದ. ಆ ಸಿನಿಮಾದ ಕಥಾನಾಯಕ ರಾಜಕಾರಣಿಯನ್ನು ಹತ್ಯೆ ಮಾಡಲು ಯತ್ನಿಸುತ್ತಾನೆ. ಅವನೊಂದಿಗೆ ಹಿಂಕ್ಲೆ ತನ್ನನ್ನು ಹೋಲಿಸಿಕೊಂಡಿದ್ದ. ಅಧ್ಯಕ್ಷರನ್ನು ಕೊಂದು ನಟಿ ಫೋಸ್ಟರ್ ಮೇಲಿನ ತನ್ನ ಪ್ರೇಮವನ್ನು ಜಗಜ್ಜಾಹೀರು ಮಾಡುವುದು ಅವನ ಉದ್ದೇಶವಾಗಿತ್ತು.

harshavardhan.m@timesofindia.com

ಉದ್ಯಾನ ನಗರಿಯಲಿ ಕಣ್ಮರೆಯಾಗುತ್ತಿರುವ ಹಸಿರು ಹೊದಿಕೆ, ಕುಸಿಯುತ್ತಿರುವ ಅಂತರ್ಜಲ

ಉಷ್ಣದಲಿ ಬೆದರುತಿರುವ ಬೆಂದಕಾಳೂರ ಕಥೆ!

ಲೋಕಲ್ ಸಂಚಾರ
ಶಿವರಾಂ

ಉದ್ಯಾನನಗರಿ ಬೆಂಗಳೂರು ಅಕ್ಷರಶಃ ಇದೀಗ 'ಬೆಂದ'ಕಾಳೂರು'! ನಗರದ ತಾಪಮಾನ 37 ಡಿಗ್ರಿ ಸೆಲ್ಸಿಯಸ್‌ನ ಆಸುಪಾಸಿನಲ್ಲಿರುವುದು ಇದಕ್ಕೆ ಪ್ರಮುಖ ಕಾರಣ. ಈ ಬಾರಿ ಏಪ್ರಿಲ್ ಮುಗಿಯುತ್ತಾ ಬಂದರೂ ಮಳೆ ರಾಯ ರಾಜಧಾನಿಯ ಜನರಿಗೆ ಕೃಪೆ ತೋರಿಲ್ಲ. ಹೀಗಾಗಿ, ಬಿಸಿಲಿನ ಝಳದಿಂದ ಬೆಂಗಳೂರಿಗರ ಬೆವರಿಳಿಯುತ್ತಿದೆ. ಬೆಂಗಳೂರಿನ ಶ್ವಾಸಕೋಶದಂತಿರುವ ಕಬ್ಬನ್‌ಪಾರ್ಕ್, ಲಾಲ್ ಬಾಗ್ ಉದ್ಯಾನಗಳಿಲ್ಲದಿದ್ದರೆ ನಗರದ ಪರಿಸ್ಥಿತಿಯನ್ನು ಊಹಿಸಿಕೊಳ್ಳಲು ಕೂಡ ಭಯವಾಗುತ್ತಿತ್ತು.

ಮೂರ್ನಾಲ್ಕು ದಶಕಗಳ ಹಿಂದೆ ಬೆಂಗಳೂರಿನ ಭೌಗೋಳಿಕ ಚಿತ್ರಣವೇ ಭಿನ್ನವಾಗಿತ್ತು. ಎಲ್ಲೆಲ್ಲೂ ಹಸಿರು ರಾಶಿ, ಕೆರೆ-ಕಟ್ಟೆಗಳು, ನಗರದ ಸುತ್ತಲಿನ ತೋಟಗಳಿಂದ ಸಿಲಿಕಾನ್ ಸಿಟಿಯ ವಾತಾವರಣ ಆಹ್ಲಾದಕರವಾಗಿರುತ್ತಿತ್ತು. ಪ್ರಸ್ತುತ ಅಭಿವೃದ್ಧಿಯ ಹೊಡೆತಕ್ಕೆ ಸಿಲುಕಿ ಹಸಿರು ಹೊದಿಕೆ ಪ್ರಮಾಣ ಗಣನೀಯವಾಗಿ ಕುಗ್ಗಿದೆ. ಕೆರೆ-ಕಟ್ಟೆಗಳು ಒಣಗಿ ನಿಂತಿವೆ, ಇಲ್ಲವೇ ಒತ್ತುವರಿಯಿಂದ ಕೆರೆಗಳ ಚಹರೆಯೇ ಬದಲಾಗಿದೆ. ರೈತರ ತೋಟಗಳು ಬಡಾವಣೆಗಳಾಗಿ ಮಾರ್ಪಟ್ಟಿವೆ.

ಇನ್ನು, ಮುಗಿಲೆತ್ತರದ ಕಟ್ಟಡಗಳಿಗೂ ಗಾಜಿನ ಹೊದಿಕೆ, ಡಾಂಬರು ರಸ್ತೆಗಳು ಕಾಂಕ್ರೀಟ್‌ಮಯ, ಮೆಟ್ರೊ, ಗ್ರೇಡ್ ಸೆಪರೇಟರ್, ಡಬ್ಬಲ್ ಡೆಕ್ಕರ್ ರಸ್ತೆ, ಸುರಂಗ ಮಾರ್ಗ ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾಮಗಾರಿಗಳಿಂದ ಲೆಕ್ಕವಿಲ್ಲದಷ್ಟು ಮರಗಳನ್ನು ಧರೆಗುರುಳಿಸಲಾಗಿದೆ. ಆದರೆ, ಅದಕ್ಕೆ ಪರ್ಯಾಯವಾಗಿ ಬೆಳೆಸಿದ ಗಿಡ ಹಾಗೂ ಸ್ಥಳಾಂತರಿಸಿದ ಮರಗಳಲ್ಲಿ ಬದುಕುಳಿದವೆಷ್ಟು ಎಂಬುದರ ಲೆಕ್ಕ ಇಲ್ಲ!

ಮರ ಗಣತಿಗೂ ಅಸಡ್ಡೆ: ಒಬ್ಬ ಮನುಷ್ಯನ ಉಸಿರಾಟಕ್ಕೆ ಆಮ್ಲಜನಕ ಉತ್ಪಾದಿಸುವ ಕನಿಷ್ಠ ಏಳು ಮರಗಳಿರಬೇಕು ಎಂಬುದು ಪರಿಸರ ತಜ್ಞರ ಲೆಕ್ಕಾಚಾರ. ಆದರೆ, ಬೆಂಗಳೂರಿನಲ್ಲಿ 2024ರ ಜನವರಿಯಲ್ಲಿ ಪ್ರಾರಂಭವಾದ ಮರ ಗಣತಿ ಇನ್ನೂ ಮುಗಿದಿಲ್ಲ, ನಾನಾ ಕಾರಣಗಳಿಂದ ಮರ ಗಣತಿ ಆರು ಬಾರಿ ಮುಂದೂಡಲ್ಪಟ್ಟಿದೆ. ಬಿಬಿಎಂಪಿಯ (ಈಗ ಜಿಬಿಎ) ಎಂಟು ವಲಯಗಳ ಪೈಕಿ ಆರು ವಲಯಗಳಲ್ಲಿ ಮರ ಗಣತಿ ಮುಗಿದಿದ್ದು, 7.7 ಲಕ್ಷ ಮರಗಳನ್ನು ಲೆಕ್ಕ ಹಾಕಲಾಗಿದೆ. ಇನ್ನೆರಡು ವಲಯಗಳ ಗಣತಿ ಮುಗಿದರೆ ನಗರದಲ್ಲಿ ಅಂದಾಜು 10 ಲಕ್ಷ ಮರಗಳ ಲೆಕ್ಕ ಸಿಗಬಹುದು ಎಂದು ಪರಿಸರ ತಜ್ಞರು ಅಭಿಪ್ರಾಯಪಡುತ್ತಾರೆ.

ಇನ್ನು, ಬಿಎಂಆರ್‌ಸಿಎಲ್ 96.10 ಕಿ.ಮೀ. ಮೆಟ್ರೊ ಮಾರ್ಗ ನಿರ್ಮಾಣಕ್ಕಾಗಿ 9,154 ಮರಗಳನ್ನು ಕತ್ತರಿಸಿದೆ. ಮೂರನೇ ಹಂತದ ಯೋಜನೆಗಾಗಿ 6,800 ಮರಗಳನ್ನು ಕಡಿಯಬೇಕಾಗುತ್ತದೆ. ಇದಕ್ಕೆ ಪರ್ಯಾಯವಾಗಿ 17 ಸಾವಿರ ಗಿಡ-ಮರಗಳನ್ನು ಬೆಳೆಸಿರುವುದಾಗಿ ಸಂಸ್ಥೆ ಹೇಳಿಕೊಂಡಿದೆ. ಸಬ್-ಅರ್ಬನ್ ರೈಲು ಯೋಜನೆಗಾಗಿ 3,500 ಮರಗಳನ್ನು ಕಡಿಯಲಾಗಿದೆ. ಹೀಗೆ, ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಮರಗಳನ್ನು ಕಡಿಯುತ್ತಿರುವುದರಿಂದ ನಗರದಲ್ಲಿ ಹಸಿರು ವಾತಾವರಣ ಕ್ರಮೇಣ ಕಣ್ಮರೆಯಾಗುತ್ತಿದೆ.

ಹಾಗೆಯೇ, ನಗರದಲ್ಲಿ ಜನಸಂಖ್ಯೆ, ವಾಹನಗಳ ಸಂಖ್ಯೆ ಒಂದೂವರೆ ಕೋಟಿ ಸನಿಹದಲ್ಲಿದೆ. ಮುಂದಿನ ಮೂರು ವರ್ಷದೊಳಗೆ ದ್ವಿಚಕ್ರ ವಾಹನಗಳ ಸಂಖ್ಯೆಯೇ ಮೂರು ಕೋಟಿಯ ಗಡಿ ದಾಟಬಹುದೆಂದು ಅಂದಾಜಿಸಲಾಗಿದೆ. ಇದರಿಂದ ಪ್ರತಿನಿತ್ಯ ಕಚೇರಿಗೆ ತೆರಳುವವರು ಸಮೂಹ ಸಾರಿಗೆಗಿಂತ ಸ್ವಂತ ವಾಹನ ಬಳಸಲು ಒಲವು ತೋರುತ್ತಿರುವುದು ಕಂಡುಬಂದಿದೆ.

ಬೆಂಗಳೂರಿನ ಬೆಳವಣಿಗೆಯನ್ನು ಕಡೆಗಣಿಸಲಾಗದು. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳುವುದು ಜವಾಬ್ದಾರಿಯುತ ಸರಕಾರ ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳ ಜವಾಬ್ದಾರಿ. ಆದರೆ, ಜಿಬಿಎ, ಜಲಮಂಡಳಿ, ಬಿಡಿಎ, ಬೆಸ್ಕಾಂ ಸೇರಿದಂತೆ ಸರಕಾರಿ ಸ್ವಾಮ್ಯದ ಸಂಸ್ಥೆಗಳ ನಡುವೆ ಪರಸ್ಪರ ಸಮನ್ವಯ ಇಲ್ಲದಿರುವುದು ನಗರದ ಅಧ್ವಾನಕ್ಕೆ ಕಾರಣವಾಗಿದೆ.

ಅಂತರ್ಜಲ ಮಟ್ಟ ತೀವ್ರ ಕುಸಿತ : ನಗರದಲ್ಲಿ ಅಂತರ್ಜಲ ಮಟ್ಟ ತೀವ್ರ ಕುಸಿಯುತ್ತಿರುವುದರಿಂದ ಬೇಸಿಗೆಯಲ್ಲಿ ನೀರಿಗೆ ಹಾಹಾಕಾರ ಉಂಟಾಗುತ್ತಿದೆ. ಕೆರೆ-ಕಟ್ಟೆಗಳು ಒಣಗಿ, ಕೊಳವೆ ಬಾವಿಗಳು ಬತ್ತಿ ಹೋಗಿರುವುದರಿಂದ ಜಲಮಂಡಳಿಯು ಸಂಚಾರಿ ಕಾವೇರಿ ಟ್ಯಾಂಕರ್‌ಗಳನ್ನು ಬಳಸಿ ನಾಗರಿಕರಿಗೆ ಕುಡಿಯುವ ನೀರು ಪೂರೈಸುತ್ತಿದೆ.

ಜಲಮಂಡಳಿಯು ಕೆರೆಗಳಿಗೆ ಸಂಸ್ಕರಿತ ನೀರು ತುಂಬುವ ಚಟುವಟಿಕೆಗಳಿಂದ ಕೊಂಚ ಸುಧಾರಿಸಿದ್ದ ಅಂತರ್ಜಲ ಮಟ್ಟ ಈ ಬಾರಿ ಮತ್ತೆ ಕ್ಷೀಣಿಸಿದೆ. ಇತ್ತೀಚೆಗಷ್ಟೇ ಬಿಡುಗಡೆಯಾದ ಅಂತರ್ಜಲ ಮೌಲ್ಯಮಾಪನ ವರದಿ-2025ರಲ್ಲಿ ಅತಿಯಾದ ಅಂತರ್ಜಲ ಶೋಷಣೆಯ ಪಟ್ಟಿಯಲ್ಲಿ ಬೆಂಗಳೂರು ಮುಂದುವರಿದಿದೆ. ವಾರ್ಷಿಕ 308.39 ಎಂಸಿಎಂನಷ್ಟು (ಶೇ.100ರಷ್ಟು) ಅಂತರ್ಜಲ ಹೊರ ತೆಗೆಯಲಾಗುತ್ತಿದೆ ಎಂದು ವರದಿ ಹೇಳಿದೆ. 65 ವಾರ್ಡ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ ಎಂದು ಐಐಎಸ್ಸಿ ಕೂಡ ವರದಿ ನೀಡಿರುವುದು ಆತಂಕಕಾರಿಯಾಗಿದೆ.

ಕಾವೇರಿ ನೀರು ಅತಿ ದುಬಾರಿ: ಬೆಂಗಳೂರಿಗೆ ಪೂರೈಕೆಯಾಗುವ ಕಾವೇರಿ ನೀರು ಅತಿ ದುಬಾರಿ. ಸುಮಾರು 110 ಕಿ.ಮೀ. ದೂರದಿಂದ ಕಾವೇರಿ ನೀರನ್ನು ಪಂಪ್ ಮಾಡಿ ಮನೆ-ಮನೆಗೆ ಪೂರೈಸಲು ಜಲಮಂಡಳಿ ಕೋಟ್ಯಂತರ ರೂ. ಖರ್ಚು ಮಾಡಿದೆ. ಕಾವೇರಿ ಐದನೇ ಹಂತದ ಯೋಜನೆಗೆ ಜಲಮಂಡಳಿ 5,500 ಕೋಟಿ ರೂ. ಖರ್ಚು ಮಾಡಿದೆ. ಹೀಗಾಗಿ, ಬೆಂಗಳೂರಿಗರು ಕುಡಿಯುತ್ತಿರುವ ಕಾವೇರಿ ನೀರು ದೇಶದಲ್ಲೇ ದುಬಾರಿ. ಹಾಗೆಯೇ, ಹನಿ-ಹನಿ ನೀರಿನ ಬಳಕೆ ಬಗ್ಗೆಯೂ ಜನ ಯೋಚಿಸಬೇಕು ಎನ್ನುತ್ತಾರೆ ಜಲತಜ್ಞರು.

ಇಷ್ಟಾದರೂ, ಬೆಂಗಳೂರಿಗರು ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸಿಕೊಳ್ಳಲು ನಿರಾಸಕ್ತಿ ತಳೆದಿದ್ದಾರೆ. 2025ರಲ್ಲಿ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸಿಕೊಳ್ಳುವ ಬದಲು ನಾಗರಿಕರು ನಿತ್ಯ 13 ಲಕ್ಷ ರೂ. ದಂಡ ಪಾವತಿಸಿದ್ದಾರೆ. 2025ರ ಜನವರಿಯಿಂದ ಡಿಸೆಂಬರ್‌ವರೆಗೆ ಜಲಮಂಡಳಿ 46.81 ಕೋಟಿ ರೂ. ದಂಡ ಸಂಗ್ರಹಿಸಿದೆ. 'ಬೆಂಗಳೂರಿನ ಜನ ದಂಡ ಪಾವತಿಸಲು ಸಿದ್ಧರಿದ್ದಾರೆ, ಆದರೆ, ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸಿಕೊಳ್ಳುವುದಕ್ಕೆ ಆಸಕ್ತಿ ತೋರುವುದಿಲ್ಲ. ಇದು ನಾಗರಿಕರ ಮನಸ್ಥಿತಿ' ಎಂಬುದು ಜಲಮಂಡಳಿ ಅಧಿಕಾರಿಗಳ ವಿಷಾದದ ಮಾತು.

ಮಹಾ ಯೋಜನೆ ರೂಪಿಸಲು ತಾತ್ಸಾರ: ಯಾವುದೇ ನಗರದ ಬೆಳವಣಿಗೆಗೆ ಮಹಾ ಯೋಜನೆಯೇ ದಿಕ್ಸೂಚಿ. ಆದರೆ, ಸಕಾಲದಲ್ಲಿ ಬಿಡಿಎ ಅಥವಾ ಪಾಲಿಕೆ (ಜಿಬಿಎ) ಮಾಸ್ಟರ್ ಪ್ಲಾನ್ ರೂಪಿಸದಿರುವುದರಿಂದ ಬೆಂಗಳೂರಿನ ಯದ್ವಾತದ್ವಾ ಬೆಳವಣಿಗೆಗೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ.

ಸುಮಾರು 10 ವರ್ಷಗಳ ನಂತರ ಇದೀಗ ರಾಜ್ಯ ಸರಕಾರವು ಭವಿಷ್ಯದ ಪರಿಷ್ಕೃತ ನಗರ ಮಹಾಯೋಜನೆ ಸಿದ್ಧಪಡಿಸುವ ಹೊಣೆಯನ್ನು ಜಿಬಿಎ ಮತ್ತು ಬಿಡಿಎ ನಡುವೆ ಹಂಚಿಕೆ ಮಾಡಿದೆ. ಒಂದೇ ನಗರದಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವ ಎರಡು ಪ್ರಾಧಿಕಾರಗಳು ಪರಸ್ಪರ ಪ್ರತ್ಯೇಕ ಯೋಜನೆಗಳನ್ನು ರೂಪಿಸುತ್ತಿವೆ. ಬಿಡಿಎ ಮಾದರಿಯಲ್ಲೇ ಜಿಬಿಎ ಕೂಡ ಪರಿಷ್ಕೃತ ಮಾಸ್ಟರ್‌ಪ್ಲಾನ್ ಸಿದ್ಧಪಡಿಸಲು ಟೆಂಡರ್ ಕರೆದಿದೆ.

ಇದಲ್ಲದೆ, ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರವು (ಬಿಎಂಐಸಿಎಪಿಎ) ಕೂಡ ತನ್ನ ಸುಪರ್ದಿಯಲ್ಲಿರುವ 90 ಚ.ಕಿ.ಮೀ. ವ್ಯಾಪ್ತಿಯ ಪ್ರದೇಶಕ್ಕೆ ಪ್ರತ್ಯೇಕ ಯೋಜನೆ ಸಿದ್ಧಪಡಿಸುತ್ತಿದೆ. ನಗರವು ಮೂರು ಪ್ರಾಧಿಕಾರಗಳಿಂದ ಸಿದ್ಧವಾದ ಮೂರು ಪ್ರತ್ಯೇಕ ಯೋಜನೆಗಳ ನಿಯಂತ್ರಣಕ್ಕೆ ಒಳಪಡಲಿದೆ. ಈ ರೀತಿಯ ತುಂಡು, ತುಂಡಾದ ಮಾಸ್ಟರ್ ಪ್ಲಾನ್‌ಗಳು ನಗರದ ಭವಿಷ್ಯದ ಬೆಳವಣಿಗೆಗೆ ಮಾರಕವಾಗಲಿವೆ ಎಂಬುದು ನಗರ ಯೋಜನಾ ತಜ್ಞರ ಅಭಿಮತ.

ನಗರದ ಭವಿಷ್ಯದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 'ಪರಿಷ್ಕೃತ ಮಾಸ್ಟರ್ ಪ್ಲಾನ್-2041' ಸಿದ್ಧಪಡಿಸಲು ಜಾಗತಿಕ ಟೆಂಡರ್ ಆಹ್ವಾನಿಸಿದೆ. ಜಿಬಿಎ ವ್ಯಾಪ್ತಿ ಹೊರತುಪಡಿಸಿ 545.34 ಚ.ಕಿ.ಮೀ. ಪ್ರದೇಶವು ಬಿಡಿಎ ಅಧೀನಕ್ಕೆ ಬರುತ್ತದೆ. ಇದಕ್ಕಾಗಿ ನೂತನ ನಗರ ಮಹಾಯೋಜನೆ ಸಿದ್ಧಪಡಿಸಲು ಉದ್ದೇಶಿಸಲಾಗಿದೆ. ಕಾಲ ಕಾಲಕ್ಕೆ ಮಹಾ ಯೋಜನೆ ರೂಪಿಸಿದಲ್ಲಿ ಭವಿಷ್ಯದ ಬೆಂಗಳೂರನ್ನು ಯೋಜನಾಬದ್ಧವಾಗಿ ಕಟ್ಟಲು ಸಹಕಾರಿಯಾಗಲಿದೆ. ನಿಜ, ಬೆಂಗಳೂರಿನ ಬೆಳವಣಿಗೆ ಅನಿವಾರ್ಯ, ಆದರೆ ಅದು ಹಸಿರು ಸಮಾಧಿಯ ಮೇಲೆ ಇರಬಾರದು. ಹನಿ ಹನಿ ನೀರಿನ ಉಳಿತಾಯ ಮತ್ತು ಕಳೆದುಹೋಗುತ್ತಿರುವ ಹಸಿರನ್ನು ಮರಳಿ ಪಡೆಯುವಲ್ಲಿ ಸರಕಾರ ಮತ್ತು ನಾಗರಿಕರು ಕೈಜೋಡಿಸದಿದ್ದರೆ, ಉದ್ಯಾನನಗರಿ ಎಂಬ ಹೆಗ್ಗಳಿಕೆ ಇತಿಹಾಸದ ಪುಟ ಸೇರುವುದರಲ್ಲಿ ಸಂಶಯವಿಲ್ಲ.

(ಲೇಖಕರು: ಬೆಂಗಳೂರು ಆವೃತ್ತಿಯ ಸ್ಥಾನಿಕ ಸಂಪಾದಕರು)

ಪರಿಸರದ ಸ್ವಚ್ಛಬಂಧು ಹೈನಾ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಲಿ

■ ಮಂಜುನಾಥ ಎಸ್. ನಾಯಕ



ಏಪ್ರಿಲ್ 27ರಂದು ಅಂತಾರಾಷ್ಟ್ರೀಯ ಕತ್ತೆಕಿರುಬ (ಹೈನಾ) ದಿನವನ್ನಾಗಿ ಆಚರಿಸಲಾಗುತ್ತದೆ. ಹೈನಾ, ಅನೇಕ ಮೂಢನಂಬಿಕೆಗಳಿಂದಾಗಿ ಅಪಖ್ಯಾತಿಗೊಳಗಾದ ಸಸ್ತನಿಯಾಗಿದ್ದು ಆಫ್ರಿಕಾ ಮತ್ತು ಏಷ್ಯಾ ಖಂಡದಾದ್ಯಂತ ಹೈನಾಗಳನ್ನು ಕಾಣಬಹುದಾಗಿದೆ. ಹೈನಾಗಳ ಬಗ್ಗೆ ಸಾರ್ವಜನಿಕರ ದೃಷ್ಟಿಕೋನವನ್ನು ಸಕಾರಾತ್ಮಕವಾಗಿ ಬದಲಾಯಿಸುವುದು ಮತ್ತು ಭೂಮಿಯ ಮೇಲೆ ಅವುಗಳ ಪ್ರಾಮುಖ್ಯತೆಯನ್ನು ಸಾರುವುದು ಈ ದಿನಾಚರಣೆಯ ಉದ್ದೇಶವಾಗಿದೆ.

ವಿಕ ಪ್ರಸ್ತುತ

ಭಾರತೀಯ ಪಟ್ಟೆ ಕತ್ತೆಕಿರುಬ ಅಳಿವಿನಂಚಿನಲ್ಲಿರುವ ಪ್ರಭೇದವಾಗಿದೆ. ಇವು ಕೊಳೆತ ಪ್ರಾಣಿಗಳನ್ನು ತಿಂದು ಪರಿಸರವನ್ನು ಸ್ವಚ್ಛವಾಗಿಡುವ ಕೆಲಸ ಮಾಡುತ್ತವೆ. ಆ ಮೂಲಕ ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇದರಿಂದಾಗಿ ಹೈನಾಗಳಿಗೆ ಸ್ವಚ್ಛಬಂಧು ಎನ್ನುವ ವಿಶೇಷಣ ಪ್ರಾಪ್ತವಾಗಿದೆ.

ಕತ್ತೆಕಿರುಬವು 4 ಕಿ.ಮೀ ದೂರದಲ್ಲಿರುವ ಕೊಳತ ದೇಹದ ವಾಸನೆಯನ್ನೂ ಗ್ರಹಿಸುವಷ್ಟು ಸಾಮರ್ಥ್ಯ ಹೊಂದಿದೆ. ಹೈನಾ ಬುದ್ಧಿವಂತ ಸೂಕ್ಷ್ಮ ಪ್ರಾಣಿಯಾಗಿದೆ. ಭಾರತದ ವನ್ಯಜೀವಿ ಕಾಯಿದೆ 1972 ಶೆಡ್ಯೂಲ್-1 ರ ಅಡಿ ಇವುಗಳು ಕಾನೂನು ಸಂರಕ್ಷಣೆ ಪಡೆದುಕೊಂಡಿವೆ. ಹಾಗಿದ್ದರೂ ಕಳ್ಳಬೇಟೆಗಾರರ ಕಿರುಕುಳ ಮತ್ತು ಆವಾಸಸ್ಥಾನ ನಾಶದಿಂದ ಹೈನಾಗಳು ಅಳಿವಿನಂಚು ತಲುಪಿವೆ.

ಹೈನಾಗಳು ಒತ್ತಡಕ್ಕೊಳಗಾದಾಗ ವಿಚಿತ್ರವಾಗಿ ಶಬ್ದ ಮಾಡುತ್ತವೆ ಇದನ್ನು 'ದೆವ್ವದ ನಗು' (ಡಿಮೋನಿಕ್ ಲಾಫ್) ಎಂದು ಕರೆಯುವರು. ಇದರಿಂದಾಗಿ ಅವುಗಳ ಕುರಿತು ಹಲವು ಮೂಢನಂಬಿಕೆಗಳು ಬೇರೂರಿವೆ. ಹೈನಾಗಳು ಮಾನವ ಶವವನ್ನು ಸಮಾಧಿಯಿಂದ ಹೊರತೆಗೆದು ತಿನ್ನುತ್ತವೆಂದು ನಮ್ಮ ಪೂರ್ವಜರು ತಪ್ಪಾಗಿ ತಿಳಿದುಕೊಂಡಿದ್ದರು. ಆದರೆ ಈವರೆಗೆ ಆ ರೀತಿಯ ಯಾವುದೇ ವರದಿಗಳು ದಾಖಲಾಗಿಲ್ಲ, ಹೈನಾಗಳ ಮಾಂಸವನ್ನು ಸಾಂಪ್ರದಾಯಿಕ ಔಷಧ ತಯಾರಿಸಲು ಮತ್ತು ಅವುಗಳ ಉಗುರುಗಳನ್ನು ಕೊರಳಲ್ಲಿ ಧರಿಸಲು ಬೇಟೆಯಾಡಲಾಗುತ್ತದೆ. ಆದರೆ ಅದರಲ್ಲಿ ಯಾವುದೇ ಔಷಧಿಯ ಗುಣ ಇಲ್ಲ. ಅಲ್ಲದೆ ಉಗುರುಗಳನ್ನು ಧರಿಸುವುದು ಕೂಡಾ ಮೂಢನಂಬಿಕೆಯಾಗಿದೆ.

ರಾಜ್ಯದಲ್ಲಿ ಅಳಿವಿನಂಚಿನಲ್ಲಿರುವ ಹೈನಾ ಸಂತತಿಯ ರಕ್ಷಣೆಗೆಂದು ಬೆಳಗಾವಿ ಜಿಲ್ಲೆಯ ಗೋಕಾಕ, ಸವದತ್ತಿ, ರಾಮದುರ್ಗ ತಾಲೂಕಿನ ಒಂದಿಷ್ಟು ಅರಣ್ಯಪ್ರದೇಶವನ್ನು ಹೈನಾ ಸಂರಕ್ಷಿತ ಅಭಯಾರಣ್ಯಕ್ಕಾಗಿ ಪ್ರಸ್ತಾವನೆ ಸಲ್ಲಿಸಬೇಕಿದೆ. ಏಕೆಂದರೆ ರಾಜ್ಯದಲ್ಲಿ ಪಟ್ಟೆ ಹೈನಾಗಳ ಸಂಖ್ಯೆ ಬೆಳಗಾವಿ ಜಿಲ್ಲೆಯಲ್ಲಿದೆ. ಇದರ ಕ್ಷೇತ್ರ ಕಾರ್ಯ ಜಾರಿಯಲ್ಲಿದೆ. ಪರಿಸರ ಸಮತೋಲನದಲ್ಲಿ ಭಾಗಿಯಾಗಿರುವ ಇವುಗಳನ್ನು ಸಂರಕ್ಷಿಸುವುದು ನಮ್ಮ ಹೊಣೆಯಾಗಿದೆ.

(ಲೇಖಕರು ಜೀವವೈವಿಧ್ಯ ಸಂಶೋಧಕರು)

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com,
ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 116

ಸೋಮವಾರ, 27 ಏಪ್ರಿಲ್ 2026 | ಪುಟಗಳು: 11 | ಬೆಲೆ: ₹ 5.00

VK

ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ

PRIDE OF YOUNG KARNATAKA

ಶ್ರೀನಗರದ ಫಿಟ್ ಇಂಡಿಯಾ ಸೈಕಲ್ ರ್‍ಯಾಲಿಯಲ್ಲಿ ಕೇಂದ್ರ ಸಚಿವ ಮನ್ಸುಖ್ ಮಂಡಾವೀಯ ಭಾಗಿ

ದಿಲ್ಲಿ ಏರ್‌ಪೋರ್ಟ್‌ನಲ್ಲಿ ಸ್ವಿಸ್ ಏರ್‌ಲೈನ್ಸ್ ವಿಮಾನ ಟೇಕಾಫ್ ವೇಳೆ ಎಂಜಿನ್‌ನಲ್ಲಿ ಕಾಣಿಸಿಕೊಂಡ ಬೆಂಕಿ. ಸ್ವಲ್ಪದರಲ್ಲೇ ತಪ್ಪಿದ ದುರಂತ

ಆಪ್ ತೊರೆದ ರಾಜ್ಯಸಭೆ ಸದಸ್ಯ ಹರ್ಭಜನ್ ಸಿಂಗ್‌ಗೆ ಸಿಆರ್‌ಪಿಎಫ್ ಭದ್ರತೆ ಒದಗಿಸಿದ ಕೇಂದ್ರ ಸರಕಾರ

ವಿಕ ಹೊಂಗಿರಣ

ನಿಜವಾದ ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ, ಬದಲಾಗಿ, ಸ್ವಾತಂತ್ರ್ಯವನ್ನು ನೀಡುತ್ತದೆ.
- ರವೀಂದ್ರನಾಥ ಟ್ಯಾಗೋರ್

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹ 87/- ಕೋಲಾರ 85/- ತುಮಕೂರು 85/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹127/- ಕೋಲಾರ 125/- ತುಮಕೂರು 125/-
ವಿಥ್ ಸ್ಕಿನ್ ₹179/- ಕೋಲಾರ 176/- ತುಮಕೂರು 176/-
ವಿಥೌಟ್ ಸ್ಕಿನ್ ₹204/- ಕೋಲಾರ 201/- ತುಮಕೂರು 201/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಒಳಮೀಸಲು: ಇಂದು ಅಧಿಸೂಚನೆ?

ಬೆಂಗಳೂರು: ವಿಶೇಷ ಸಂಪುಟ ಸಭೆಯ ತೀರ್ಮಾನದ ಅನುಸಾರ ಒಳಮೀಸಲು ಹಂಚಿಕೆ ಬಗ್ಗೆ ಸೋಮವಾರ ಅಧಿಕೃತ ಅಧಿಸೂಚನೆ ಪ್ರಕಟವಾಗುವ ನಿರೀಕ್ಷೆಯಿದೆ.

ಪರಿಶಿಷ್ಟ ಜಾತಿಯ 101 ಉಪ ಜಾತಿಗಳಿಗೆ ಒಳಮೀಸಲು ಕಲ್ಪಿಸುವ ಸಂಬಂಧ ಕಳೆದ ಶುಕ್ರವಾರ ವಿಶೇಷ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಸಂಪುಟದ ನಿರ್ಣಯದಂತೆ ಸರಕಾರ ಅಧಿಸೂಚನೆ ಹೊರಡಿಸಬೇಕಾಗಿದೆ. ಅದಾದ ಬಳಿಕ ಮುಂದಿನ ಪ್ರಕ್ರಿಯೆ ಪ್ರಾರಂಭವಾಗಲಿದೆ. ಸದ್ಯ 56,432 ಹುದ್ದೆ ಭರ್ತಿ ಮಾಡುವುದಾಗಿ ಸರಕಾರ ಹೇಳಿದೆ. ಒಳಮೀಸಲು ಅಧಿಸೂಚನೆ ಪ್ರಕಟವಾಗುತ್ತಿದ್ದಂತೆ ಈ ಪ್ರಕ್ರಿಯೆಗೆ ಚಾಲನೆ ಸಿಗಲಿದೆ.

ಗ್ರಾಮಾಭಿವೃದ್ಧಿಗೆ ಇಸ್ರೊ ಡಿಜಿಟಲ್ ನಕ್ಷೆ »04

ಶಾಲೆಗಳಲ್ಲಿ ಕನ್ನಡ ದಿನಪತ್ರಿಕೆ ಓದು ಕಡ್ಡಾಯ »ಒಳಪುಟ ನೋಡಿ

ಅಮೆರಿಕ ಅಧ್ಯಕ್ಷರು ಪಾಲ್ಗೊಂಡಿದ್ದ ಡಿನ್ನರ್ ಕಾರ್ಯಕ್ರಮದಲ್ಲಿ ಗುಂಡಿನ ದಾಳಿ

ಟ್ರಂಪ್ ನೀತಿಗೆ ಬೇಸತ್ತು ಕುಕೃತ್ಯ ಸಾಧ್ಯತೆ | ಶಸ್ತ್ರಸಜ್ಜಿತ ದಾಳಿಕೋರನ ಸೆರೆ

ಡೊನಾಲ್ಡ್ ಟ್ರಂಪ್ ಹತ್ಯೆ ಯತ್ನ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಗವಹಿಸಿದ್ದ 'ವೈಟ್‌ಹೌಸ್ ಕರಸ್ಪಾಂಡೆಂಟ್ಸ್ ಅಸೋಸಿಯೇಷನ್' ಭೋಜನಕೂಟದಲ್ಲಿ ಶನಿವಾರ ರಾತ್ರಿ ಗುಂಡಿನ ದಾಳಿ ನಡೆದಿದೆ.

ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಡಿನ್ನರ್ ಕಾರ್ಯಕ್ರಮದಲ್ಲಿ ಟ್ರಂಪ್ ಹಾಗೂ ಅವರ ಪತ್ನಿ ಮೆಲಾನಿಯಾ, ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರ ಪತ್ನಿ ಉಷಾ ವ್ಯಾನ್ಸ್, ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಿದ್ದರು.

2,500 ಭಾಗಿಯಾಗಿದ್ದ ಅತಿಥಿಗಳ ಸಂಖ್ಯೆ

ಸ್ಥಳೀಯ ಕಾಲಮಾನ ರಾತ್ರಿ 8.34ರ ಸಮಯದಲ್ಲಿ ಹೋಟೆಲ್‌ನ ಬಾಲ್‌ರೂಮ್‌ನಲ್ಲಿ ಕುಳಿತಿದ್ದ ಅತಿಥಿಗಳು ಔತಣಕೂಟದ ಸಂಭ್ರಮದಲ್ಲಿದ್ದರು. ಆಗ ಇದ್ದಕ್ಕಿದ್ದಂತೆ ಹೊರಗಡೆ ಗುಂಡಿನ ಸದ್ದು ಕೇಳಲು ಆರಂಭಿಸಿತು. ಬಿಗಿ ಭದ್ರತೆಯನ್ನೂ ದಾಟಿ ಒಳನುಗ್ಗಲು ಯತ್ನಿಸಿದ ದಾಳಿಕೋರ 4ರಿಂದ 8 ಸುತ್ತು ಗುಂಡು ಹಾರಿಸಿದ. ಸದ್ದು ಕೇಳಿ ಗಾಬರಿಗೊಂಡ ಅತಿಥಿಗಳೆಲ್ಲರೂ ಟೇಬಲ್ ಕೆಳಗೆ ಅವಿತುಕೊಳ್ಳಲು ಪ್ರಯತ್ನಿಸಿದರು. ತಕ್ಷಣವೇ ಸೀಕ್ರೆಟ್ ಸರ್ವಿಸ್ ಅಧಿಕಾರಿಗಳು ಗಣ್ಯರನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು.

ಶಸ್ತ್ರಸಜ್ಜಿತ ದಾಳಿಕೋರ 31 ವರ್ಷದ ಕೋಲ್ ಥಾಮಸ್ ಅಲೆನ್‌ನನ್ನು ಬಂಧಿಸಲಾಗಿದೆ. ಘಟನೆಯನ್ನು ಭಾರತ, ಇಸ್ರೇಲ್ ಸೇರಿ ಅನೇಕ ದೇಶಗಳು ಖಂಡಿಸಿವೆ. »02



ಗುಂಡಿನ ದಾಳಿ ನಡೆದ ಹಿಲ್ಟನ್ ಹೋಟೆಲ್.

ಆಫೀಸರ್ಸ್ ಟಾರ್ಗೆಟ್?

ಟ್ರಂಪ್ ಅವರನ್ನು ಹತ್ಯೆ ಮಾಡುವುದು ದಾಳಿಕೋರನ ಉದ್ದೇಶವಾಗಿರಲಿಲ್ಲ, ಆದರೆ ಅವರ ಆಡಳಿತದ ಅಧಿಕಾರಿಗಳನ್ನು ಕೊಲ್ಲುವುದಾಗಿತ್ತು ಎಂದು ಎಫ್‌ಬಿಐ ಹೇಳಿದೆ.

ದಾಳಿಕೋರ 'ಒಂಟಿತೋಳ'ದಂತೆ ನಡೆಸಿದ ಈ ಕೃತ್ಯಕ್ಕೂ ಅಮೆರಿಕವು ಇರಾನ್ ವಿರುದ್ಧ ಕೈಗೊಂಡಿರುವ ಸಮರಕ್ಕೂ ಯಾವುದೇ ಸಂಬಂಧವಿಲ್ಲ. ಟೆಹ್ರಾನ್ ವಿರುದ್ಧದ ಅಮೆರಿಕ ನಿಲುವು ಬದಲಾಗದು.
-ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ಅಟ್ಯಾಕರ್ ನುಗ್ಗಿದ್ದು ಹೇಗೆ?

ದಾಳಿಕೋರ ಅಲೆನ್ ಅತಿಥಿಯಾಗಿ ಪಾಲ್ಗೊಳ್ಳುವ ಪಾಸ್ ಪಡೆದಿದ್ದ. ರೂಮ್ ಕೂಡ ಬುಕ್ ಮಾಡಿದ್ದ. ಹೀಗಾಗಿ ಹೋಟೆಲ್ ಹೊರವಲಯದ ಭದ್ರತಾ ಲೋಪದ ಲಾಭ ಪಡೆದು ಬಾಲ್‌ರೂಮ್ ನತ್ತ ನುಗ್ಗಲು ಸಾಧ್ಯವಾಗಿತ್ತು ಎಂಬುದು ತನಿಖೆಯಿಂದ ತಿಳಿದುಬಂದಿದೆ.

ಶಿಕ್ಷಕನೇ ದಾಳಿಕೋರ!

- ಕೋಲ್ ಥಾಮಸ್ ಅಲೆನ್ ಕ್ಯಾಲಿಫೋರ್ನಿಯಾ ಸ್ಟೇಟ್‌ ವಿವಿಯ ಸ್ನಾತಕೋತ್ತರ ಪದವೀಧರ
- ವೃತ್ತಿಯಿಂದ ಮೆಕ್ಯಾನಿಕಲ್ ಎಂಜಿನಿಯರ್, ಟ್ಯೂಟರ್ ಹಾಗೂ ಗೇಮ್ ಡೆವಲಪರ್
- 2014ರಲ್ಲಿ ನಾಸಾದ ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿಯಲ್ಲಿ ಪದವಿಪೂರ್ವ ಸಂಶೋಧನಾ ಫೆಲೋಶಿಪ್ ಪಡೆದಿದ್ದ
- 2024ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್‌ರನ್ನು ಬೆಂಬಲಿಸಿದ್ದ
- ಡೆಮಾಕ್ರಟಿಕ್ ಪಕ್ಷದ ರಾಜಕೀಯ ಕ್ರಿಯಾ ಸಮಿತಿಗೆ 25 ಡಾಲರ್ ದೇಣಿಗೆ ನೀಡಿದ್ದ

ವೇಗವಿಲ್ಲದ ಟ್ರೇನ್‌ಗಳ ಸೂಪರ್‌ಫಾಸ್ಟ್ ಹೆಚ್ಚುವರಿ ದರ ರದ್ದು

10–50 ರೂ. ಟಿಕೆಟ್ ಅಗ್ಗ | 55 ಕಿ.ಮೀ. ವೇಗವಿಲ್ಲದ ಗಾಡಿಗಳಿಗೆ ಅನ್ವಯ

ನೈಋತ್ಯ ರೈಲ್ವೆ ಗುಡ್ ನ್ಯೂಸ್!

■ **ಮಯೂರ್ ಹೆಗಡೆ** ಬೆಂಗಳೂರು
mayur.hegde@timesofindia.com

ವೇಗವಿಲ್ಲದಿದ್ದರೂ 'ಸೂಪರ್‌ಫಾಸ್ಟ್' ಹೆಸರಿನಲ್ಲಿ ಹೆಚ್ಚುವರಿ ಹಣ ಪಾವತಿಸುತ್ತಿದ್ದ ಲಕ್ಷಾಂತರ ರೈಲ್ವೆ ಪ್ರಯಾಣಿಕರಿಗೆ ಕೊನೆಗೂ ನೈಋತ್ಯ ರೈಲ್ವೆ ಸಿಹಿ ಸುದ್ದಿ ನೀಡಿದೆ. ಸರಾಸರಿ ವೇಗ 55 ಕಿ.ಮೀ.ಗಿಂತ ಕಡಿಮೆ ಇರುವ ರೈಲುಗಳಿಗೆ ವಿಧಿಸುತ್ತಿದ್ದ ಹೆಚ್ಚುವರಿ ದರವನ್ನು ಅಧಿಕೃತವಾಗಿ ಕೈಬಿಡಲಾಗಿದೆ.

ರೈಲ್ವೆ ಮಂಡಳಿ ನಿಯಮದಂತೆ, ಬ್ರಾಡ್‌ಗೇಜ್‌ನಲ್ಲಿ ಗಂಟೆಗೆ ಸರಾಸರಿ 55 ಕಿ.ಮೀ. ಗಿಂತ ಹೆಚ್ಚು ವೇಗದಲ್ಲಿ ಚಲಿಸುವ ಮೇಲ್, ಎಕ್ಸ್‌ಪ್ರೆಸ್ ರೈಲುಗಳನ್ನು ಮಾತ್ರ 'ಸೂಪರ್‌ಫಾಸ್ಟ್' ಎಂದು ಪರಿಗಣಿಸಬೇಕು. ಆದರೆ, ಈ ವೇಗವಿಲ್ಲದಿದ್ದರೂ ಹಲವು ರೈಲುಗಳಿಗೆ ಸೂಪರ್‌ಫಾಸ್ಟ್ ದರ ವಿಧಿಸಲಾಗುತ್ತಿತ್ತು. ಮೈಸೂರಿನ ಆರ್‌ಟಿಐ ಕಾರ್ಯಕರ್ತ ಬಿ. ರಾಜೇಶ್ ಅವರು ಮಾಹಿತಿ ಹಕ್ಕು ಕಾಯಿದೆ ಅಡಿ ಪಡೆದ ಉತ್ತರದಲ್ಲಿ ನೈಋತ್ಯ ರೈಲ್ವೆ ಈ ವಿಷಯ ಬಹಿರಂಗಪಡಿಸಿದೆ. ಈಗ ನೈಋತ್ಯ ರೈಲ್ವೆ ಕ್ರಮ ವಹಿಸಿ ಇಂತಹ ರೈಲುಗಳ ಹೆಚ್ಚುವರಿ ದರ ಕೈಬಿಡುತ್ತಿದ್ದು, 10–50 ರೂ. ವರೆಗೆ ಕಡಿಮೆ ಆಗಲಿದೆ. »02

ನೈಋತ್ಯ ರೈಲ್ವೆಯು ತನ್ನ ವ್ಯಾಪ್ತಿಯಲ್ಲಿದ್ದ 55 ಕಿಮೀಗಿಂತ ಕಡಿಮೆಯಿರುವ ಸೂಪರ್ ಫಾಸ್ಟ್ ರೈಲಿನ ಹೆಚ್ಚುವರಿ ಟಿಕೆಟ್ ಶುಲ್ಕ ಕಡಿಮೆ ಮಾಡುತ್ತಿದೆ. ದಕ್ಷಿಣ ರೈಲ್ವೆ, ಕೊಂಕಣ ರೈಲ್ವೆಗಳಿಗೂ ದರ ಕಡಿಮೆ ಮಾಡಲು ಪ್ರಸ್ತಾವ ಸಲ್ಲಿಸಲಾಗಿದೆ.
- **ಡಾ.ಮಂಜನಾಥ ಕನಮಡಿ** ನೈಋತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ

ಯಾವ ರೈಲಲ್ಲಿ ದರ ಇಳಿಕೆ

- ಪಂಚಗಂಗಾ ಎಕ್ಸ್‌ಪ್ರೆಸ್: ಬೆಂಗಳೂರು- ಕಾರವಾರ
- ಅಶೋಕಪುರಂ-ಚೆನ್ನೈ ಸೆಂಟ್ರಲ್
- ಮೈಸೂರು-ಕಡಲೂರು ಪೋರ್ಟ್ ಎಕ್ಸ್‌ಪ್ರೆಸ್
- ಮೈಸೂರು-ಸಾಯಿನಗರ ಶಿರಡಿ ಎಕ್ಸ್‌ಪ್ರೆಸ್

(ಏಪ್ರಿಲ್ 21ರಿಂದಲೇ ಅನ್ವಯವಾಗುವಂತೆ ಈ ರೈಲುಗಳಲ್ಲಿ ಹೆಚ್ಚುವರಿ ಶುಲ್ಕವನ್ನು ಹಿಂಪಡೆಯಲಾಗಿದೆ)

ಹೆಚ್ಚುವರಿ ಶುಲ್ಕ ಎಷ್ಟು?

- ಜನರಲ್(ಸೆಕೆಂಡ್ ಕ್ಲಾಸ್): 10 ರೂ. ಇಳಿಕೆ
- ಸ್ಲೀಪರ್‌ಕ್ಲಾಸ್: 20 ರೂ. ಇಳಿಕೆ
- ಎಸಿ ಚೇರ್‌ಕಾರ್, 3/2 ಟೈರ್: 30 ರೂ.ಇಳಿಕೆ
- ಎಸಿ ಫಸ್ಟ್ ಕ್ಲಾಸ್: 50 ರೂ. ಇಳಿಕೆ

(ರೈಲನ್ನು ಸೂಪರ್‌ಫಾಸ್ಟ್ ಎಂದು ಪರಿಗಣಿಸಿದರೆ ಪ್ರಯಾಣಿಕರು ಹೆಚ್ಚುವರಿಯಾಗಿ ನೀಡಬೇಕಿರುವುದು)

ಬೈಲುಕುಪ್ಪೆ ಅರಣ್ಯ ಸಂರಕ್ಷಣೆಗೆ ಪ್ರಧಾನಿ ಮೋದಿ ಶಹಬ್ಬಾಸ್



ಹೊಸದಿಲ್ಲಿ: ರಾಜ್ಯದ ಮೈಸೂರು ಜಿಲ್ಲೆಯ ಬೈಲುಕುಪ್ಪೆಯಲ್ಲಿರುವ ಟಿಬೆಟಿಯನ್ ಕ್ಯಾಂಪ್‌ನ ಪರಿಸರ ಸಂರಕ್ಷಣೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ 'ಮನ್ ಕಿ ಬಾತ್'ನಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

''ಕರ್ನಾಟಕದಲ್ಲಿರುವ ಕರ್ಮ ವಿಹಾರವು 100 ಎಕರೆಯಷ್ಟು ವಿಸ್ತಾರವಾದ ಅರಣ್ಯವಾಗಿದೆ. ಈ ಕಾಡಿನಲ್ಲಿ 700ಕ್ಕೂ ಹೆಚ್ಚು ಸ್ಥಳೀಯ ಮರಗಳನ್ನು ಸಂರಕ್ಷಿಸಲಾಗಿದೆ. ಬುದ್ಧನ ಸಂದೇಶದಂತೆ ನಮ್ಮ ಜೀವನದಲ್ಲಿ ಶಾಂತಿಯನ್ನು ಹೆಚ್ಚಿಸೋಣ, ಕರುಣೆಯನ್ನು ಅಳವಡಿಸಿಕೊಳ್ಳೋಣ,'' ಎಂದು ಕಿವಿಮಾತು ಹೇಳಿದ್ದಾರೆ.

ಅಲ್ಲದೇ, 2027ರ ಜನಗಣತಿಯನ್ನು ಉಲ್ಲೇಖಿಸಿ, ''ಇದು ಕೇವಲ ಸರಕಾರಿ ಕೆಲಸವಲ್ಲ, ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಜನತೆ ನೀಡುವ ಮಾಹಿತಿ ಸಂಪೂರ್ಣ ಸುರಕ್ಷಿತವಾಗಿರುತ್ತದೆ,'' ಎಂದು ಭರವಸೆ ನೀಡಿದ್ದಾರೆ. ವಿವರ»04

ಅತಿಥಿ ಉಪನ್ಯಾಸಕಿಯರಿಗೂ ಋತುಚಕ್ರ ರಜೆ ಮಂಜೂರು

ಬೆಂಗಳೂರು: ಕಾಲೇಜು ಶಿಕ್ಷಣ ವ್ಯಾಪ್ತಿಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕಿಯರಿಗೆ ಋತುಚಕ್ರ ರಜೆ ಮಂಜೂರು ಮಾಡಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತೆ ಮಂಜುಶ್ರೀ ಸುತ್ತೋಲೆ ಹೊರಡಿಸಿದ್ದಾರೆ.

''ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕನಿಷ್ಠ 15 ರಿಂದ 19 ಗಂಟೆಗಳ ಕಾಲ ಕಾರ್ಯಭಾರ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ಮಾತ್ರ ಋತುಚಕ್ರ ರಜೆ ಮಂಜೂರು ಮಾಡಲಾಗುವುದು,'' ಎಂದು ಅವರು ಹೊರಡಿಸಿರುವ ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯದ ನಾನಾ ಕಾರ್ಮಿಕ ಕಾಯಿದೆಗಳಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿನ 18 ರಿಂದ 52 ವರ್ಷದ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನದಂತೆ ವಾರ್ಷಿಕವಾಗಿ 12 ದಿನ ವೇತನಸಹಿತ ರಜೆ ನೀಡುವಂತೆ ಸರಕಾರ ಆದೇಶ ಹೊರಡಿಸಿತ್ತು.

ತೀರ್ಮಾನ ಆಗಿರುವುದೆಲ್ಲವೂ ಚಾಲ್ತಿಗೆ ಬರಲಿವೆ: ಡಿಸಿಎಂ ಡಿಕೆಶಿ



ಬೆಂಗಳೂರು: ''ಯಾವಾಗ ಏನಾಗಬೇಕೋ ಅದು ಆಗುತ್ತದೆ. ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತೇ ಆಡುವುದಿಲ್ಲ, ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ. ಏನೇನು ತೀರ್ಮಾನಗಳಾಗಿವೆಯೋ ಅವೆಲ್ಲ ಚಾಲ್ತಿಗೆ ಬರುತ್ತವೆ,'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದ್ದಾರೆ. ಮೂರು ದಿನಗಳ ದಿಲ್ಲಿ ಪ್ರವಾಸ ಪೂರೈಸಿ ಭಾನುವಾರ ಬೆಂಗಳೂರಿಗೆ ವಾಪಸಾಗಿರುವ ಅವರು ಸುದ್ದಿಗಾರರು ದಿಲ್ಲಿ ಭೇಟಿ ಕುರಿತ ಪ್ರಶ್ನೆಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ''ನಮ್ಮಲ್ಲಿ ಯಾವುದೇ ಸಮಸ್ಯೆಯಿಲ್ಲ, ರಾಜಕೀಯವೂ ಇಲ್ಲ. ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ,'' ಎಂದು ಹೇಳುವುದರೊಂದಿಗೆ ಮುಂಬರುವ ದಿನಗಳಲ್ಲಿ ನಡೆಯಬಹುದಾದ ರಾಜಕೀಯ ಚಟುವಟಿಕೆಗಳ ಸುಳಿವು ನೀಡಿದರು.

OM SHREE GURUBASAVALINGAYA NAMAHA

HIREMATH SAMSTHAN VIDYAPEETH TRUST(R), BHALKI

SHRI CHANNABASAVESHWAR GURUKUL RESIDENTIAL PU SCIENCE COLLEGE

KARDYAL - 585 413 - TQ. BHALKI - DIST. BIDAR - KARNATAKA
MOBILE : 8147740402 - 8892992222 -07353304503 - www.cbgurukul.in

JEE MAINS RESULT - 2026

Result Abstract in Percentile

99 AND ABOVE	98 AND ABOVE	97 AND ABOVE	96 AND ABOVE	95 AND ABOVE	90 AND ABOVE
14	24	39	53	81	200

(PWBD) ALL INDIA RANK 1
Vishwaraj

PRITAM 99.77%ile
OJAS JAIN 99.74%ile
SHIVANG 99.70%ile
VIVEK 99.56%ile
ULLAS 99.45%ile
AJINKYA 99.22%ile
NARAYANREDDY 99.11%ile
JAYANT 99.09%ile
ADARSHREDDY 99%ile
ARUN 99%ile
NIDHI 99%ile
RAVIKUMAR 99%ile
SHRISHAIL 99%ile
SOHAN KUMAR 99%ile
RISHAB 98.47%ile
RUGVED 98.47%ile
ADITYA 98.45%ile
SAKSHI 98.38%ile
SHIVAKUMAR 98.16%ile
KARTIKI 98%ile
KISHAN SINGH 98%ile
SHREYAS 98%ile
VAIBHAV 98%ile
RV ANANTHA 98%ile

ADMISSIONS ARE OPEN

JEE MAIN + ADVANCED AND NEET REAPEATERS

ಡೊನಾಲ್ಡ್ ಟ್ರಂಪ್ ಹತ್ಯೆ ಯತ್ನ

» ಮೊದಲ ಪುಟದಿಂದ

ಇತ್ತೀಚಿನ ತಿಂಗಳಲ್ಲಿ ಅಮೆರಿಕದಲ್ಲಿ ಇರಾನ್ ವಿರುದ್ಧದ ಸಮರ, ವಲಸೆ ನೀತಿ, ಸುಂಕದ ವಿಚಾರ ಸೇರಿದಂತೆ ಟ್ರಂಪ್ ಅವರ ವಿರುದ್ಧ ಜನಾಕ್ರೋಶ ಭುಗಿಲೆದ್ದಿದೆ. 'ನೋ ಕಿಂಗ್ಸ್' ಹೆಸರಿನಲ್ಲಿ ಪ್ರತಿಭಟನೆಗಳೂ ನಡೆದಿದ್ದವು. ಟ್ರಂಪ್ ವಿರುದ್ಧದ ಅಸಮಾಧಾನವೇ ದಾಳಿಗೆ ಕಾರಣವಿರಬಹುದು ಎನ್ನಲಾಗಿದೆ.

ಮೂರನೇ ಬಾರಿ ದಾಳಿ: 2024ರ ಜುಲೈ 13ರಂದು ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿ ಚುನಾವಣಾ ಪ್ರಚಾರ ರ್‍ಯಾಲಿಯಲ್ಲಿ ಟ್ರಂಪ್ ಭಾಷಣ ಮಾಡುತ್ತಿದ್ದ ವೇಳೆ ಗುಂಡಿನ ದಾಳಿಯಾಗಿತ್ತು. ಗುಂಡು ಅವರ ಕಿವಿಯನ್ನು ಕೂದಲೆಳೆ ಅಂತರದಲ್ಲಿ ದಾಟಿ ಹೋಗಿತ್ತು. ಈ ದಾಳಿಯಲ್ಲಿ ಸಾರ್ವಜನಿಕರೊಬ್ಬರು ಮೃತಪಟ್ಟಿದ್ದರು. ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಗಾಲ್ಫ್ ಕೋರ್ಸ್‌ಲ್ಲಿ ಮತ್ತೊಮ್ಮೆ ಹತ್ಯೆಗೈಯುವ ಯತ್ನ ನಡೆದಿತ್ತು. ಈ ಎರಡೂ ದಾಳಿಯಿಂದಲೂ ಟ್ರಂಪ್ ಪಾರಾಗಿದ್ದರು. ಈಗ ನಡೆದಿರುವುದು ಮೂರನೇ ದಾಳಿ.

ಏನಿದು ವೈಟ್‌ಹೌಸ್ ಕರಸ್ಪಾಂಡೆಂಟ್ಸ್ ಡಿನ್ನರ್ : ಪತ್ರಕರ್ತರು ಮತ್ತು ಸರಕಾರದ ನಡುವೆ ಬಾಂಧವ್ಯ ವೃದ್ಧಿಸಲು ವೈಟ್‌ಹೌಸ್ ಕರಸ್ಪಾಂಡೆಂಟ್ಸ್ ಡಿನ್ನರ್ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಶ್ವೇತಭವನದ ಸುದ್ದಿಗಳನ್ನು ವರದಿ ಮಾಡುವ ಪತ್ರಕರ್ತರಿಗಾಗಿ ಇದನ್ನು ನಡೆಸಲಾಗುತ್ತದೆ. ಇಲ್ಲಿಂದ ಬರುವ ಹಣವನ್ನು ಪತ್ರಕರ್ತರಿಗೆ ಸ್ಕಾಲರ್‌ಶಿಪ್ ನೀಡಲು ಬಳಸಲಾಗುತ್ತದೆ. ಪತ್ರಕರ್ತರು, ಹಾಲಿವುಡ್ ನಟ-ನಟಿಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.

ನೈಋತ್ಯ ರೈಲ್ವೆ ಗುಡ್ ನ್ಯೂಸ್!

» ಮೊದಲ ಪುಟದಿಂದ

ಕೊಂಕಣ ರೈಲ್ವೆ ನಿರ್ವಹಿಸುವ ಕಾರವಾರ – ಕೆಎಸ್‌ಆರ್ ಬೆಂಗಳೂರು ಪಂಚಗಂಗಾ ಎಕ್ಸ್‌ಪ್ರೆಸ್ ರೈಲು ಸರಾಸರಿ 46 ಕಿ.ಮೀ ಮತ್ತು ದಕ್ಷಿಣ ಮಧ್ಯ ರೈಲ್ವೆಯ ಕಾಚಿಗೂಡ- ಅಶೋಕಪುರಂ ರೈಲು 51.74 ಕಿಮೀ ವೇಗದಲ್ಲಿ ಸಂಚರಿಸುತ್ತಿವೆ. ನೈಋತ್ಯ ರೈಲ್ವೆಯು ರಾಜ್ಯಕ್ಕೆ ಹಿಂದಿರುಗುವ ಈ ರೈಲುಗಳ ಸೂಪರ್‌ಫಾಸ್ಟ್ ದರ ತೆಗೆದುಹಾಕಲು ಏ. 20 ರಂದು ಸಂಬಂಧಿಸಿದ ವಲಯಗಳಿಗೆ ಪ್ರಸ್ತಾವನೆ ಸಲ್ಲಿಸಿತ್ತು.

ಕಡಿಮೆ ಆಗಬೇಕಿರುವುದು: ಅಶೋಕಪುರಂ-ಕಾಚಿಗೂಡ, ಕೆಎಸ್‌ಆರ್ ಬೆಂಗಳೂರು-ಅಶೋಕಪುರಂ ಮಾಲ್ಗುಡಿ ಸೂಪರ್‌ಫಾಸ್ಟ್, ಹಾಸನ-ಸೋಲಾಪುರ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ತಿರುವನಂತಪುರಂ ಸೆಂಟ್ರಲ್-ಯಶವಂತಪುರ ಎಕ್ಸ್‌ಪ್ರೆಸ್, ತಿರುವನಂತಪುರಂ ಸೆಂಟ್ರಲ್ -ಯಶವಂತಪುರ ಗರೀಬ್ ರಥ ರೈಲುಗಳ ಹೆಚ್ಚುವರಿ ಪ್ರಯಾಣ ದರವನ್ನೂ ಕಡಿಮೆ ಮಾಡಬೇಕೆಂದು ಜನತೆ ಒತ್ತಾಯಿಸಿದ್ದಾರೆ.

ಇತರ ರೈಲ್ವೆ ವಲಯದಲ್ಲೂ ಈ ರೀತಿ ಕಡಿಮೆ ವೇಗದ ಸೂಪರ್ ಫಾಸ್ಟ್ ರೈಲುಗಳಿವೆ. ಪ್ರತಿನಿತ್ಯ ಕೋಟ್ಯಂತರ ರೂ. ಅನಗತ್ಯವಾಗಿ ಪ್ರಯಾಣಿಕರು ಭರಿಸುವಂತಾಗಿದೆ. ಇದರ ವಿವರ ಪಡೆದು ದರ ಕಡಿಮೆ ಮಾಡಬೇಕು.

- ಬಿ. ರಾಜೇಶ್ ರೈಲ್ವೆ ಬಳಕೆದಾರ

ಪಂಚಾಂಗ 27-04-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ವಸಂತ. **ಮಾಸ:** ವೈಶಾಖ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಅಶ್ವಿನಿ.
ನಿತ್ಯನಕ್ಷತ್ರ: ಪೂರ್ವಫಾಲ್ಗುಣ.
ತಿಥಿ: ಏಕಾದಶಿ. **ಯೋಗ:** ಧ್ರುವ.
ಕರಣ: ವಣಿಕ್.
ವಾರ: ಸೋಮವಾರ.

ರಾಹು ಕಾಲ: **ಬೆ.7.30 - 9.00**
ಗುಳಿಕ ಕಾಲ: **ಮ. 1.30-3.00**
ಯಮಗಂಡ ಕಾಲ: **ಬೆ. 10.30-12.00**
ಸೂರ್ಯ ಉದಯ: **ಬೆ.6.02** ಸೂರ್ಯ ಅಸ್ತ: **ಸಂ.6.33**

ಹೊಸ ಮೊಬೈಲ್ ಖರೀದಿಸಬೇಕಾದ ಪೀಕಲಾಟ

ಹಳೆಯ ಮಾದರಿಗೆ ಸಪೋರ್ಟ್ ಮಾಡದ ಆ್ಯಪ್ | ಸಂಕಷ್ಟದಲ್ಲಿ ಗಣತಿದಾರರು

■ **ಅವಿನಾಶ ಎಸ್.** ಮೈಸೂರು
avinasha.s@timesofindia.com

ಜನಗಣತಿಯಲ್ಲಿ ಭಾಗಿಯಾಗಿರುವ ಗಣತಿದಾರಲ್ಲಿ ಹಳೆಯ ಮೊಬೈಲ್ ಸೆಟ್ ಹೊಂದಿರುವವರು ಹೊಸ ಮೊಬೈಲ್ ಖರೀದಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ.

ಏ. 16ರಿಂದ ಜನಗಣತಿ ಪ್ರಾರಂಭವಾಗಿದ್ದು, ಮಾಹಿತಿ ಅಪ್‌ಲೋಡ್‌ಗಾಗಿ ಸರಕಾರ ಎಚ್‌ಎಲ್‌ಒ (ಹೌಸ್ ಲಿಸ್ಟಿಂಗ್ ಆಪರೇಷನ್) ಆ್ಯಪ್ ಬಿಡುಗಡೆ ಮಾಡಿದೆ. ಆದರೆ, ಈ ಆ್ಯಪ್ ಹಳೆಯ ಆಂಡ್ರಾಯ್ಡ್ ಫೋನ್‌ಗಳಲ್ಲಿ ಡೌನ್ ಲೋಡ್ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಗಣತಿದಾರರು ಹೊಸ ಮೊಬೈಲ್ ಖರೀದಿಗೆ ಕನಿಷ್ಠ 15 ಸಾವಿರ ರೂ. ವ್ಯಯಿಸಬೇಕಾದ ಸಂಕಷ್ಟ ಎದುರಾಗಿದೆ. ಆದರೆ, ಗಣತಿ ಕಾರ್ಯಕ್ಕೆ ಅವರಿಗೆ ಸಿಗುವುದು 9 ಸಾವಿರ ರೂ.!

12ನೇ ಜನರೇಷನ್ ವರ್ಷನ್: ಸದ್ಯ ಕೇಂದ್ರ ಸರಕಾರ ನೀಡಿರುವ ಎಚ್‌ಎಲ್‌ಒ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳಬೇಕಾದರೆ 12ನೇ ಜನರೇಷನ್ ವರ್ಷನ್ ಮೊಬೈಲ್ ಬೇಕಿದ್ದು, 4 ಜಿಬಿ ರ್‍ಯಾಮ್ ಅಗತ್ಯ. ಆದರೆ, ಅನೇಕ ಗಣತಿದಾರರು ಹಳೆಯ ಮಾದರಿಯ ಆಂಡ್ರಾಯ್ಡ್ ಮೊಬೈಲ್ ಬಳಸುತ್ತಿದ್ದು, ಆ ಮೊಬೈಲ್‌ನಲ್ಲಿ ಮಾಹಿತಿ ಅಪ್‌ಲೋಡ್ ಸಾಧ್ಯವಾಗುತ್ತಿಲ್ಲ.

ನನ್ನ ಬಳಿ ಉತ್ತಮ ಮೊಬೈಲ್ ಇದೆ. ಆದರೆ, 12ನೇ ಜನರೇಷನ್ ಮೊಬೈಲ್‌ಗೆ ಮಾತ್ರ ಎಚ್‌ಎಲ್‌ಒ ಆ್ಯಪ್ ಸಪೋರ್ಟ್ ಮಾಡುತ್ತಿರುವ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಮತ್ತೊಂದು ಮೊಬೈಲ್ ಖರೀದಿಸಿದ್ದೇನೆ.

-ಲಕ್ಷ್ಮಿ ಗಣತಿದಾರರು

ಹಳೆಯ ವರ್ಷನ್ ಮೊಬೈಲ್‌ಗಳಿಗೆ ಆ್ಯಪ್ ಸಪೋರ್ಟ್ ಮಾಡದಿದ್ದರೆ ಮನೆಯ ಬೇರೆ ಸದಸ್ಯರ ಮೊಬೈಲ್ ಬಳಸಿ ಅಪ್‌ಲೋಡ್ ಮಾಡಬಹುದು. ಈಗ ಮನೆಗಣತಿ ನಡೆಯುತ್ತಿರುವುದರಿಂದ ಮ್ಯಾಪಿಂಗ್ ನಿಖರವಾಗಿಲ್ಲ, ನಂತರ ಜನಗಣತಿಗೆ ನಿಖರ ಮಾಹಿತಿ ಲಭ್ಯವಾಗಲಿದ್ದು, ಮನೆಗಳ ಹಂಚಿಕೆ ಸುಗಮವಾಗುತ್ತದೆ.

-ರತ್ನಾಂಬಿಕಾ ಜನಗಣತಿ ವಲಯ ಅಧಿಕಾರಿ, ಮೈಸೂರು

ಅಸಮರ್ಪಕ ಹಂಚಿಕೆ: ಒಬ್ಬರಿಗೆ 300-400 ಮನೆ ನೀಡಿದರೆ ಮತ್ತೊಬ್ಬರಿಗೆ 80-90 ಮನೆ ಹಂಚಿಕೆ ಮಾಡಲಾಗಿದೆ. ಕಡಿಮೆ ಮನೆಗಳು ಹಂಚಿಕೆಯಾದವರು ಬೇಗ ಗಣತಿ ಮುಗಿಸುತ್ತಿದ್ದರೆ ಹೆಚ್ಚು ಮನೆಗಳನ್ನು ಪಡೆದವರು ಬಿಸಿಲಿನಲ್ಲಿ ಅಲೆಯುವಂತಾಗಿದೆ ಎಂಬುದು ಗಣತಿದಾರರ ಆರೋಪ.

ಅವೈಜ್ಞಾನಿಕವಾಗಿ ಮ್ಯಾಪಿಂಗ್

ಅಗತ್ಯ ಪೂರ್ವ ತಯಾರಿಗಳನ್ನು ಮಾಡಿಕೊಳ್ಳದೆ, ವ್ಯವಸ್ಥಿತ ಮನೆ ಪಟ್ಟಿ ನೀಡದೆ, ನಕ್ಷೆಗಳನ್ನು ರಚಿಸಿಕೊಡದೆ, ಸರಿಯಾದ ಗಡಿ ಭಾಗಗಳನ್ನು ಗುರುತಿಸದೆ, ಅವೈಜ್ಞಾನಿಕವಾಗಿ ಮ್ಯಾಪ್ ತಯಾರಿಸಿ ಕೊಟ್ಟಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ಕೇಳಿಬರುತ್ತಿದೆ. ಭೌಗೋಳಿಕವಾಗಿ ಗುಡ್ಡಗಾಡುಗಳಿಂದ ಕೂಡಿರುವ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ತಮ್ಮ ಜಮೀನುಗಳಿರುವ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ 2-3 ಕಿ.ಮೀ. ಅಂತರದಲ್ಲಿರುವ ಮನೆಗಳನ್ನು ಎರಡೆರಡು ಬಾರಿ ಸುತ್ತಿ ಗಣತಿ ಮಾಡುವುದು ತ್ರಾಸದಾಯಕವಾಗಿದೆ. ಗ್ರಾಮೀಣ ಭಾಗದಲ್ಲಿ ಒಂದು ಮನೆಯಿಂದ ಇನ್ನೊಂದು ಮನೆಗೆ ಸಾಕಷ್ಟು ಅಂತರ ಇರುತ್ತದೆ. ಆದರೆ ಕೆಲವು ಗಣತಿದಾರರಿಗೆ 60ರಿಂದ 70 ಮನೆಗಳನ್ನು ನೀಡಿದ್ದರೆ, ಇನ್ನು ಕೆಲವರಿಗೆ 200ರಿಂದ 300 ಮನೆಗಳನ್ನು ನೀಡಲಾಗಿದೆ. ಈ ಕಾರಣದಿಂದ ಹಂಚಿಕೆಯನ್ನು ಅವೈಜ್ಞಾನಿಕವಾಗಿ ಮಾಡಲಾಗಿದೆ ಎಂದು ಗಣತಿದಾರ ಶಿಕ್ಷಕರು ಅಳಲು ತೋಡಿಕೊಂಡಿದ್ದಾರೆ.

ಮಾಹಿತಿ: ಅರವಿಂದ ಹೆಬ್ಬಾರ್ ಮುಂಡಾಜೆ ಬೆಳ್ತಂಗಡಿ (ದ.ಕ)

ರಾಜ್ಯದ ಅರ್ಧದಷ್ಟು ಜಿಲ್ಲೆಗಳಿಗೆ ಬಾರದ ಕಿಟ್

■ **ವಿಜಯ್ ಹೂಗಾರ** ಹುಬ್ಬಳ್ಳಿ
vijay.hugar@timesofindia.com

ಜನಗಣತಿ ಕಾರ್ಯ ಆರಂಭವಾಗಿ 10 ದಿನ ಕಳೆದರೂ ರಾಜ್ಯದ ಬಹುತೇಕ ಜಿಲ್ಲೆಗಳ ಗಣತಿದಾರರಿಗೆ ಬರಬೇಕಿದ್ದ ಪೂರ್ಣ ಪ್ರಮಾಣದ ಕಿಟ್‌ಗಳು ಇನ್ನೂ ಬಂದಿಲ್ಲ.

ಒಬ್ಬ ಗಣತಿದಾರರಿಗೆ ಸರಾಸರಿ 200 ಮನೆಗಳನ್ನು ನೀಡಲಾಗಿದೆ. ಈಗಾಗಲೇ ಬಹುತೇಕ ಗಣತಿದಾರರು ಶೇ. 50ರಿಂದ 60ರಷ್ಟು ಮನೆಗಳ ಗಣತಿ ಕಾರ್ಯ ಪೂರ್ಣಗೊಳಿಸಿದ್ದಾರೆ. ಆದರೆ, ಈವರೆಗೆ ಶೇ.50 ರಷ್ಟು ಜಿಲ್ಲೆಗಳಿಗೆ ಮಾತ್ರ ಕಿಟ್‌ಗಳನ್ನು ನೀಡಲಾಗಿದೆ ಎಂದು ಧಾರವಾಡದ ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕಿಟ್‌ನಲ್ಲಿ ಏನಿದೆ?

ಜನಗಣತಿ ಕಿಟ್‌ನಲ್ಲಿ ಒಂದು ಕ್ಯಾಪ್, ಐಡಿ ಕಾರ್ಡ್, ಒಂದು ಪೆನ್, ಎರಡು ಮಾರ್ಕರ್, ಎರಡು ಪೆನ್ಸಿಲ್, ರಬ್ಬರ್, ಒಂದು ನೋಟ್ ಬುಕ್, ಒಂದು ಟ್ರಾನ್ಸ್‌ಪರೆಂಟ್ ಫೈಲ್, ಎರಡು ಸೆಟಲೈಟ್ ಮ್ಯಾಪ್, ಗಣತಿದಾರರನ್ನಾಗಿ ನೇಮಕ ಮಾಡಿದ ಆದೇಶ ಪ್ರತಿ, ಜನಗಣತಿ ಅರ್ಜಿಯ ಒಂದು ಪ್ರತಿ ಕೂಡ ಇದೆ. ಇಂಥ ಕಿಟ್‌ಗಳನ್ನು ಈಗಾಗಲೇ ತಮಿಳುನಾಡು, ಕೇರಳದಲ್ಲಿ ನೀಡಲಾಗಿದೆ. ಆದರೆ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಈವರೆಗೆ ನೀಡಿಲ್ಲ. ಬದಲಾಗಿ ಒಂದು ಟ್ರೇನಿಂಗ್ ಬುಕ್, ಒಂದು ಮಾರ್ಕರ್ ಪೆನ್, ಬಿಳಿ ಹಾಳೆ, ಗಣತಿದಾರರನ್ನಾಗಿ ನೇಮಿಸಿದ ಆರ್ಡರ್ ಕಾಪಿ, ಒಂದು ಸೆಟಲೈಟ್ ಮ್ಯಾಪ್ ಕೊಡಲಾಗಿದೆ. ''ಕಿಟ್ ಇನ್ನೂ ಬಂದಿಲ್ಲ. ಬಂದ ಮೇಲೆ ಕೊಡುತ್ತೇವೆ. ಅದಕ್ಕಾಗಿ ನಿಮ್ಮ ಕೆಲಸ ನಿಲ್ಲಿಸದೇ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಎಂಬ ಸೂಚನೆಯನ್ನು ಮೇಲಧಿಕಾರಿಗಳು ನೀಡುತ್ತಿದ್ದಾರೆ. ಬಿರು ಬಿಸಿಲಲ್ಲೇ ಇದ್ದ ಸಂಪನ್ಮೂಲಗಳಲ್ಲೇ ಗಣತಿ ಮಾಡಬೇಕಿದೆ,'' ಎಂದು ಧಾರವಾಡ ಜಿಲ್ಲೆಯ ಗಣತಿದಾರರೊಬ್ಬರು ಬೇಸರ ವ್ಯಕ್ತಪಡಿಸಿದರು.

ಜನಗಣತಿ ಕಾರ್ಯಕ್ಕೆ ಒದಗಿಸಿರುವ ಪೂರ್ಣ ಕಿಟ್.

ಧಾರವಾಡ ಜಿಲ್ಲೆಗೆ ಇನ್ನೂ ಬಂದಿಲ್ಲ. ಒಂದು ವಾರದೊಳಗೆ ಬರುವ ನಿರೀಕ್ಷೆಯಿದೆ. ಬಂದ ಮೇಲೆ ಗಣತಿದಾರರಿಗೆ ವಿತರಿಸಲಾಗುತ್ತದೆ.

-ಸ್ನೇಹಲ್ ಆರ್. ಜಿಲ್ಲಾಧಿಕಾರಿ, ಧಾರವಾಡ.

ಡಿಜಿಟಲ್ ರೂಪದಲ್ಲಿ ಗಣತಿ ನಡೆಯುತ್ತಿರುವುದರಿಂದ ಗಣತಿದಾರರಿಗೆ ಹೆಚ್ಚಿನ ಪರಿಕರಗಳ ಅಗತ್ಯವಿಲ್ಲ. ಗಣತಿ ಕಿಟ್ ಬಾರದಿದ್ದರೂ ಗಣತಿದಾರರಿಗೆ ಕೆಲ ಅಗತ್ಯ ಪರಿಕರಗಳನ್ನು ನೀಡಲಾಗಿದೆ. ಕಿಟ್‌ಗಳು ಶೀಘ್ರ ಬರುವ ನಿರೀಕ್ಷೆಯಿದೆ.

-ಡಾ.ರುದ್ರೇಶ ಘಾಳಿ ಪ್ರಧಾನ ಗಣತಿ ಅಧಿಕಾರಿ ಹಾಗೂ ಪಾಲಿಕೆ ಆಯುಕ್ತ.

''ನೋಯ್ಡಾದಲ್ಲಿ ಪ್ರತಿಭಟನೆ ಹಿನ್ನೆಲೆಯಲ್ಲಿ ಕಿಟ್ ಬರುವುದು ವಿಳಂಬವಾಗಿದೆ. ಗಣತಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ಕಿಟ್ ಬಂದ ಕೂಡಲೇ ವಿತರಿಸಲಾಗುವುದು,'' ಎಂದು ಮೈಸೂರಿನ ಅಧಿಕಾರಿಗಳು ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ವಿದ್ಯಾರ್ಥಿಗಳಿಂದ ಜನಗಣತಿ?

ಗಣತಿ ಆ್ಯಪ್ ಲಾಗಿನ್ ವಿದ್ಯಾರ್ಥಿಗಳ ಕೈಗೆ ಕೊಟ್ಟ ಗಣತಿದಾರರು

■ **ಮಾರುತಿ ಸುಣಗಾರ** ಬಳ್ಳಾರಿ
maruthi.sunagar@timesofindia.com

ಜನಗಣತಿಗೆ ನಿಯೋಜನೆಗೊಂಡ ಕೆಲವು ಗಣತಿದಾರರು, ತಮ್ಮ ಬದಲು ವಿದ್ಯಾರ್ಥಿಗಳನ್ನು ಮನೆಮನೆ ಗಣತಿಗೆ ಕಳಿಸುತ್ತಿರುವುದು ಬೆಳಕಿಗೆ ಬಂದಿದೆ.

ಜಿಲ್ಲೆಯಲ್ಲಿ ಒಟ್ಟು 4 ಲಕ್ಷ ಮನೆಗಳಿವೆ. ಏ.16ರಿಂದ ಗಣತಿದಾರರು ಮನೆಮನೆ ಭೇಟಿ ನೀಡಿ ಸ್ಮಾರ್ಟ್‌ಫೋನ್‌ಗಳ ಮೂಲಕ ಡಿಜಿಟಲ್ ದತ್ತಾಂಶ ಸಂಗ್ರಹಿಸುತ್ತಿದ್ದಾರೆ. ದತ್ತಾಂಶ ಸಂಗ್ರಹಕ್ಕೆ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರನ್ನು ಒಳಗೊಂಡಂತೆ 2,798 ಗಣತಿದಾರರು ಮತ್ತು 473 ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಗಣತಿದಾರರಿಗೆ 48 ಫೀಲ್ಡ್ ಟ್ರೇನರ್‌ಗಳು ಮತ್ತು ಮೈಸೂರಿನ ಎಟಿಐನಿಂದ ತರಬೇತಿ ಪಡೆದ ನಾಲ್ವರು ಮಾಸ್ಟರ್ ಟ್ರೇನರ್‌ಗಳು ತರಬೇತಿ ನೀಡಿದ್ದಾರೆ. 150ರಿಂದ 200 ಮನೆಗಳ ಒಂದು ಬ್ಲಾಕ್ ರಚಿಸಿ 2,544 ಹೌಸ್ ಲಿಸ್ಟಿಂಗ್ ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಪ್ರತಿ ಬ್ಲಾಕ್ ಅನ್ನು ಗೂಗಲ್ ಮ್ಯಾಪ್ ಮೂಲಕ ಜಿಯೋ ಟ್ಯಾಗ್ ಮಾಡಲಾಗಿದೆ. ಆದರೆ, ನಗರ ಸೇರಿ ಜಿಲ್ಲೆಯ ಕೆಲವೆಡೆ ಗಣತಿದಾರರು ತಮ್ಮ ಬದಲಿಗೆ ವಿದ್ಯಾರ್ಥಿಗಳನ್ನು ಗಣತಿಗೆ ಕಳುಹಿಸುತ್ತಿರುವುದು ಅಚ್ಚರಿಮೂಡಿಸಿದೆ.

ವಿದ್ಯಾರ್ಥಿಗಳ ಕೈಗೆ ಆ್ಯಪ್, ಲಾಗ್‌ಇನ್: ದ್ವಿತೀಯ ಪಿಯು ಪೂರ್ಣಗೊಳಿಸಿದ ಇಬ್ಬರು ವಿದ್ಯಾರ್ಥಿನಿಯರು ಮನೆ ಬಾಗಿಲಿಗೆ ಗಣತಿಗೆ ತೆರಳಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ. ಶಿಕ್ಷಣ ಇಲಾಖೆಯಿಂದ ನೇಮಿಸಿದ ಗಣತಿದಾರರೆಂದು ಈ ವಿದ್ಯಾರ್ಥಿನಿಯರು ಹೇಳಿಕೊಂಡು ಕುಟುಂಬಗಳ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಆ ಕಾಲೊನಿಗೆ ಗಣತಿಗೆ ನಿಯೋಜನೆಗೊಂಡ ಗಣತಿದಾರರಾದ ಶಿಕ್ಷಕಿಯೊಬ್ಬರು ತಮಗೆ ನೀಡಿದ ಆ್ಯಪ್, ಲಾಗಿನ್ ಐಡಿಯನ್ನು ಈ ವಿದ್ಯಾರ್ಥಿನಿಯರ ಕೈಗೆ ಕೊಟ್ಟು ಕಳುಹಿಸಿದ್ದರು. ಗಣತಿ ವೇಳೆ ಆ್ಯಪ್ ನಿರ್ವಹಣೆ, ಮಾಹಿತಿ ನಮೂದಿಗೆ ತಡಕಾಡಿದ ವಿದ್ಯಾರ್ಥಿನಿಯರು ತಮಗೆ ತಿಳಿದಷ್ಟು ಮಾಹಿತಿ ಸಂಗ್ರಹಿಸಿದ್ದು ಕಂಡುಬಂದಿದೆ.

ನಗರದಲ್ಲಿ ಕೆಲವು ಗಣತಿದಾರರು ತಮ್ಮ ಆ್ಯಪ್, ಲಾಗ್‌ಇನ್ ಐಡಿಯನ್ನು ವಿದ್ಯಾರ್ಥಿಗಳಿಗೆ ನೀಡಿ ಅವರ ಮೂಲಕ ಗಣತಿ ನಡೆಸುತ್ತಿರುವ ಬಗ್ಗೆ ಗಮನಹರಿಸಲಾಗುವುದು. ಸಂಬಂಧಿಸಿದ ಗಣತಿದಾರರ ವಿರುದ್ಧ ಕ್ರಮಕೈಗೊಳ್ಳಲಾಗುವುದು.

- ಕೆ.ನಾಗೇಂದ್ರ ಪ್ರಸಾದ್ ಜಿಲ್ಲಾಧಿಕಾರಿ, ಬಳ್ಳಾರಿ

ಬಿಸಿಎಂ ಹಾಸ್ಟೆಲ್ ವಾರ್ಡನ್ ವಿರುದ್ಧ ಪೋಕ್ಸೊ ಕೇಸ್

ಅಫಜಲಪುರ (ಕಲಬುರಗಿ): ವಿದ್ಯಾರ್ಥಿನಿಗೆ ರಾತ್ರಿ ವೇಳೆ ಕರೆ ಮಾಡಿ ಬೆತ್ತಲೆ ಫೋಟೊಗಳನ್ನು ಕಳುಹಿಸುವಂತೆ ಲೈಂಗಿಕ ಕಿರುಕುಳ ನೀಡಿದ ಅಫಜಲಪುರದ ಬಿಸಿಎಂ ಹಾಸ್ಟೆಲ್‌ವೊಂದರ ವಾರ್ಡನ್ ಹಣಮಂತ ಬಿರಾದಾರ ವಿರುದ್ಧ ಕಲಬುರಗಿಯ ಎಂ.ಬಿ.ನಗರ ಠಾಣೆಯಲ್ಲಿ ಪೋಕ್ಸೊ ಕಾಯಿದೆ ಅಡಿ ಪ್ರಕರಣ ದಾಖಲಾಗಿದೆ.

''ವಿದ್ಯಾರ್ಥಿನಿಗೆ ಇನ್ಸ್ಟಾಗ್ರಾಮ್ ಮೂಲಕ ಕರೆ ಮಾಡಿದ್ದ ಈತ, ಸ್ನಾನ ಮಾಡುವಾಗಿನ ಫೋಟೊಗಳನ್ನು ಕಳುಹಿಸು. ಕಾರಿನಲ್ಲಿ ಬೀದರ್ ಮತ್ತು ಮಂತ್ರಾಲಯಕ್ಕೆ ಕರೆದುಕೊಂಡು ಹೋಗುತ್ತೇನೆ,'' ಎಂದು ಮೆಸೇಜ್ ಮಾಡಿದ್ದಾನೆ. ಇನ್ನೊಂದು ಘಟನೆಯಲ್ಲಿ ''ನನ್ನ ಮಗಳಿಗೆ ಜೀವಬೆದರಿಕೆ ಹಾಕಿದ್ದಾನೆ,'' ಎಂದು ವಿದ್ಯಾರ್ಥಿನಿಯ ತಂದೆ ದೂರು ನೀಡಿದ್ದಾರೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

TIMES TRIBUTE PAYING HOMAGE TO THE DEPARTED SOUL ದಿನಪತ್ರಿಕೆಯಲ್ಲಿ
ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

OTHER VACANCIES

GENERAL

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

WANTED SSLC, PUC, ITI, DIPLOMA for CNC MACHINE OPERATOR Contact: DAS CNC PRODUCTS PVT LTD. Phone: 98451 59737

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

SECURITY

ಬೇಕಾಗಿದ್ದಾರೆ: ಸೆಕ್ಯೂರಿಟಿ ಗಾರ್ಡ್ ಸಂಬಳ 11.500, ಸೆಕ್ಯೂರಿಟಿ ಸೂಪರ್ ವೈಸರ್ ಸಂಬಳ 13000, ಫೀಲ್ಡ್ ಆಫೀಸರ್, ರೂಂ ಊಟ ಉಚಿತ. ವಯಸ್ಸು 25 ರಿಂದ 55. ಬೆತ್ತನಗೆರೆ, ಕೆಂಚನಪುರ, ನೆಲಮಂಗಲ ಕೆಂಗೇರಿ. ಸಂ: 73960 16024/ 73968 86025

ಪ್ರವಾಸ TRAVEL

TOURS & TRAVELS

ಕಾಶಿ, ಗಯಾ, ಪ್ರಯಾಗ್ ರಾಜ್ ಅಯೋಧ್ಯೆ 15.05.2026, 21.05. 2026 ರಿಂದ 6 ದಿನಗಳು. ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್ 15.05. 2026, 29.05.2026, 05.06.2026 ರಿಂದ 14 ದಿನಗಳು. ಸ್ವಯಂಭೂ, ಅಮರನಾಥ್ , ವೈಷ್ಣದೇವಿ, ಕಾಶ್ಮೀರ್ 03.07.2026, 05.07.2026 ರಿಂದ 9/7 ದಿನಗಳು. ಪವಿತ್ರ ಕೈಲಾಸ ಪರ್ವತ, ಮಾನಸ ಸರೋವರ ಜುಲೈ, ಆಗಸ್ಟ್‌ನಲ್ಲಿ. ಸಂಪರ್ಕಿಸಿ. 26508925, 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು.18

ನಿಸರ್ಗ ಹಾಲಿಡೇಸ್, ರಾಜಾಜಿನಗರ, ಬೆಂಗಳೂರು, ವಿಮಾನ ಪ್ರವಾಸ ಪ್ಯಾಕೇಜ್ 6 ದಿನಗಳು ಸಿಂಗಾಪುರ, ಮಲೇಷ್ಯಾ 21-5-26, 4 ಸೀಟುಗಳು ಉಳಿದಿವೆ. ಹೆಚ್ಚಿನ ವಿವರಗಳಿಗಾಗಿ ಸಂ: 9110449861, 9880241669

ಸೇವೆಗಳು SERVICES

ASTROLOGY

ASTROLOGER

AMIL 'O' KAMIL
AL-HAAJ BABAJI
Through Spiritual Treatment, Solve Problems of Health, Loss in Business, Family disputes, Matrimonial, Delay in Marriage, Love affairs, Relationships, Divorce issues etc.
Office: #249, 6th Cross, Gangondanahalli Main Road, Laripalya, Nayandahalli, Bengaluru -560039.
Phone : (+91) 63660 89349, 9071250699, 9900150699.

personal

CHANGE OF NAME

I, Pushpa Latha, D/O Ethiraj, W/O Dinakar Kumar, R/O No-332/13, OMBR Layout,Banasawadi, Kalyanagar, Bengaluru, Karnataka, 560043, have changed my name to Pushpalatha Dinakar Kumar.

I, Pani Kumar Rayasam S/O, Maheswara Rao Rayasam R/o Flat No 901, Mount Valley, Arsis Green Hills Battarahalli Kr Puram Bangalore have changed my name to Phani Kumar Rayasam for all purposes

I, Priyanka Kaintura W/O Saurav Kumar Butola, R/o B-1106, Candeur Signature, Next to Chroma Gunjur,Varthur,Bengaluru,Karnataka-560087 have changed my name to Priyanka Kaintura Butola for all future purposes.

I, Mohammed Amanulla Mohammed Sibgat ulla, R No. 666/11, Shastry Street, Begur, Bangalore – 560068, have changed my name to Mohammed Sibgathulla.my father's name has been changed from Mohammed Amaulla to Mohammed Amanulla.via affidavit no:IN-KA36247130356714Y dated 16th April 2026 issued by notary public B M Chandrashekar.

I K Radhamani, W/o K Vasudevan Nair R/o 163, 2nd Floor, Chennakeshava Nilaya, Sai Nagara, Bangalore 560097 Shall Be Known as KOZI KALLATHIL RADHAMANI for all Purpose

I, SUJAT PREMNATH AGNIHOTRI, W/O; PRAVEEN CHANDRA MISRA,R/O-FT NO.101, NO 468 GAGAN SURYA A, BHUVANESHWARI NAGAR, BLR-560032.Have changed my name as SUJAT AGNIHOTRI.

I, Jagadeesha Honnavar Shivaiah s/o Shivaiah R/o 28, 4th B main, BNES college, Mahalaxmi Lyt, Bengaluru 560086 have changed my name to Jagadeesh Honnavar Shivaiah. I shall be called by this name for all purposes

I, SALEEM SAB, R/a. Abbihalli, Post Tayalur, Mulabagal, Dist Kolar-563136. I, have Changed my name to MOHAMED SALEEM, Vide affidavit, dated 21/04/2026 Sworn before Notary: G Dayananda. Bangalore

I sneha Kulkarni residing at Shahu nagar Vijayapura 586101 I have changed my name to Sneha Sanjeev Kulkarni

I, Deepti Jain, have changed my name to DEEPTI MAHESH vide affidavit dated 11/04/2026. Sworn before notary HS Sakalesh Aradhya Bengaluru.

I, JADAV NIKUNJ RAMJIBHAI, S/o RAMJIBHAI D JADAV, JP Nagar 7th Phase, Bangalore, have changed my name to NIKUNJ JADAV.

I Soumya Kulkarni residing at Shahu nagar Vijayapura 586101, I have changed my name to Soumya Sanjeev Kulkarni

I, Zaferulla Baig Rahmathulla Zameer S/o Rahamathulla Baig R/o 137 1st flr HBR layout 2nd Stage Blr-45 have changed my name to Zafrulla Baig Sworn before Notary C Sharada reg no 12521

I Nikita Rahul jain D/o Babulal bhansali r/o no 001 parasmani gold crest , 5th main road , bull temple road , behind more mega store kg nagar Bangalore-560019 have changed my name to Nikita Bhansali For all purposes.

I, hitherto known as YUDISH GUPTA S/O DINESH CHANDRA GUPTA, residing at 3rd Wing, Shriram Summit, Golahalli Road, Opposite Ganesha Temple, Electronic City, Phase 1, Veerasandra,Bengaluru, Karnataka-560100, have changed my name and shall hereafter be known as YUDHISH GUPTA.

I, Namitha Manoj Naik, D/o. Chandrashekar Mangalore, Aged 44 yrs, J-118 Purva Graces Apts., Amruthahalli Main Rd, Hoodi L/o., Amruthahalli, Byatarayanapura, Blr-92, have changed my name to NAMITHA NAIK vide affidavit Dt: 25/04/26 before Notary M. Rajendra, Blr.

LOST & FOUND

BDA Allotment Letter & Possession certificate PR.No. 98/88-89, 5-7-88 of A.V.Sathyanarayan S/O A.C. Venugopal for the site 7AM-208, 1st Block, HRBR, Bangalore is missing, founder pls contact : 9035640445

I, Mir Naveed Ahmed, residing at #1107, Kalmiddi Street, Sarvagna Park, Kote, Kolar, would like to report the loss of my property documents No 1077,Khatha No.: 1053/1053/1077, BBMP

OBITUARY

DEATH ANNIVERSARY

20ನೇ ವರ್ಷದ ಪುಣ್ಯ ತಿಥಿ

ರಾಮಕ್ಕ
ಲೇಟ್ ಬಿ. ಜಯರಾಂ ಧರ್ಮ ಪತ್ನಿ
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ
DOD: 27.04.2022
ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ
ಕುಟುಂಬ ವರ್ಗದವರು
ದೂರವಾಣಿ: 9845344442, 9845091138, 23443118

GALLERIA

ಮೌರ್ಯ ಪಬ್ಲಿಕ್ ಸ್ಕೂಲ್
ಮಾರುತಿನಗರ ಕಾಮಾಕ್ಷಿಪಾಳ್ಯ, ಬೆಂಗಳೂರು
SSLC TOPPERS - 2025-26

ಸಾನ್ಸ್ ಪಬ್ಲಿಕ್ ಸ್ಕೂಲ್
4ನೇ ಬ್ಲಾಕ್ ಆರ್.ಕೆ. ನಗರ, ನಂದಿನಿ ಲೇಔಟ್, ಬೆಂಗಳೂರು – 96
SSLC TOPPERS - 2025-26

ANVITHA A (603) 97%

ಶ್ರೀ ಕಂಠ
ಅಧ್ಯಕ್ಷರು

SUBJECTWISE HIGHEST SCORE
Kannada -123
English -99
Hindi -100
Maths -95
Science -93
Social -95

GALLERIA

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ
ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ [PTT]
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008149955, 9901520055, 9449198555
Email: info@thercss.co, Web: www.thercss.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru 560011. (Ph: 08040877666) and printed by him at Bennett Coleman & Co Ltd, The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru 560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol.27 Issue No.116

ಚಿತ್ರದುರ್ಗದಲ್ಲಿ ಪೆಂಡಾಲ್ ನಿರ್ಮಾಣಕ್ಕೆ ಭೂಮಿಪೂಜೆ | ಮೇ 9ಕ್ಕೆ ಜನಸಾಗರ

ಬಿಎಸ್‌ವೈ ಜನಸೇವೆ ಸ್ಮರಣೆಗೆ ಅಭಿಮಾನೋತ್ಸವ

ದಕ್ಷಿಣ ಭಾರತದ ಬಿಜೆಪಿ ಭೀಷ್ಮನಿಗೆ ಗೌರವ | ಗೃಹ ಸಚಿವ ಅಮಿತ್ ಶಾ ಸಮ್ಮುಖದಲ್ಲಿ ಸನ್ಮಾನ

ರಾಜಾಹುಲಿಯ ಅರ್ಧ ಶತಮಾನದ ಜನಸೇವೆಗೆ ಅಭಿನಂದನಾ ಕಾರ್ಯಕ್ರಮ

■ **ವಿಕ ಸುದ್ದಿಲೋಕ** ಚಿತ್ರದುರ್ಗ

ಕೋಟೆನಾಡು ಚಿತ್ರದುರ್ಗದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ಸಾರ್ಥಕ ಜನಸೇವೆ ಅಭಿನಂದಿಸಲು ಮೇ 9ರಂದು ಆಯೋಜಿಸಿರುವ 'ಬಿಎಸ್‌ವೈ ಅಭಿಮಾನೋತ್ಸವ'ದಲ್ಲಿ ನಾಡಿನ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಲಕ್ಷಾಂತರ ಸಂಖ್ಯೆಯಲ್ಲಿ ಸೇರಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ಮುಖಂಡರು ಕರೆ ನೀಡಿದರು.

ನಗರದ ಹೊರವಲಯದ ಮಾದಾರ ಚನ್ನಯ್ಯ ಗುರುಪೀಠದ ಪಕ್ಕದ ಮೈದಾನದಲ್ಲಿ ಭಾನುವಾರ ಸಮಾವೇಶದ ಪೆಂಡಾಲ್‌ಗೆ ಭೂಮಿಪೂಜೆ ನೆರವೇರಿಸಿದ ನಂತರ ಬಿಜೆಪಿ ಮುಖಂಡರು ಮಾತನಾಡಿದರು. ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು, ವಿಶೇಷವಾಗಿ ಕರ್ನಾಟಕದಲ್ಲಿ ಪಕ್ಷವನ್ನು ಬೇರುಮಟ್ಟದಿಂದ ದಶಕಗಳ ಕಾಲ ಸಂಘಟಿಸಿ, ಅಧಿಕಾರಕ್ಕೆ ತಂದ ಯಡಿಯೂರಪ್ಪನವರ ಸಂಘಟನಾ ಶಕ್ತಿಯನ್ನು ಪ್ರಶಂಸಿಸಿದರು.

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಈ ಅಭಿಮಾನೋತ್ಸವವನ್ನು ಚಾರಿತ್ರಿಕ ಸಮಾವೇಶವನ್ನಾಗಿ ರೂಪಿಸಬೇಕು ಎಂಬ ಸಂದೇಶ ನೀಡಿದರು.

ವಿಧಾನ ಪರಿಷತ್ ಮುಖ್ಯಸಚೇತಕ ಎನ್.ರವಿಕುಮಾರ್, ಮಾಜಿ ಸಚಿವರಾದ ಮುನಿರತ್ನ, ಬಿ.ಸಿ.ಪಾಟೀಲ್, ಎಂ.ಪಿ. ರೇಣುಕಾಚಾರ್ಯ, ಎನ್.ಮಹೇಶ್, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಕೇಂದ್ರ ಮಾಜಿ ಸಚಿವರಾದ ಜಿ.ಎಂ.ಸಿದ್ದೇಶ್ವರ, ಎ.ನಾರಾಯಣಸ್ವಾಮಿ, ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ಹರತಾಳು ಹಾಲಪ್ಪ ಮಾತನಾಡಿದರು.

ಶಾಸಕ ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ರೂಪಾಲಿ ನಾಯ್ಕ್, ಸಂಜಯ್ ಪಾಟೀಲ್, ಮಂಜುಳಾ, ಎಸ್.ಕೆ.ಬಸವರಾಜನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ, ಕುಡಚಿ ರಾಜೀವ್, ಹರೀಶ್ ಪೂಂಜಾ, ದೊಡ್ಡನಗೌಡ ಪಾಟೀಲ್, ಬಸವರಾಜ ದಡೆಸೂಗುರು, ಧನಂಜಯ ಸರ್ಜಿ, ಶಿವಯೋಗಿಸ್ವಾಮಿ, ಕೃಷ್ಣನಾಯ್ಕ್, ತಮ್ಮೇಶ್ ಗೌಡ್ರು, ಲಿಂಗಮೂರ್ತಿ, ಜ್ಯೋತಿ ಗಣೇಶ್, ವೈ.ಎ.ನಾರಾಯಣಸ್ವಾಮಿ ಭಾಗವಹಿಸಿದ್ದರು.

ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಜೀವನದಲ್ಲಿ ಬಹಳಷ್ಟು ನಾಯಕರು ರಾಜಕೀಯವಾಗಿ ನೆಲೆ ಕಂಡುಕೊಂಡಿದ್ದಾರೆ. ನಾವೆಲ್ಲ ಸೇರಿ ಅವರ ಋಣ ತೀರಿಸುವ ಕೆಲಸ ಮಾಡಬೇಕು

-ಬಿ.ಶ್ರೀರಾಮುಲು ಮಾಜಿ ಸಚಿವ

2023ರ ಚುನಾವಣೆಗೆ ಒಂದು ವರ್ಷ ಇರುವಾಗ ಜನೋತ್ಸವ ಮಾಡಿ, ಮುಂದೆ ಅಧಿಕಾರವನ್ನೂ ಹಿಡಿದರು. ನಮಗೆ ಎರಡು ವರ್ಷ ಸಮಯವಿದೆ. ಈ ಅಭಿಮಾನೋತ್ಸವದ ಮೂಲಕ ಬಿಜೆಪಿಯನ್ನು ವಿಧಾನಸೌಧದ ಮೂರನೇ ಮಹಡಿಗೆ ತರುವ ಕೆಲಸವನ್ನು ನಾವೆಲ್ಲ ಮಾಡಬೇಕಿದೆ.

-ಛಲವಾದಿ ನಾರಾಯಣಸ್ವಾಮಿ ವಿಧಾನ ಪರಿಷತ್ ಸದಸ್ಯ

ಅಭಿಮಾನೋತ್ಸವಕ್ಕೆ ರಾಜ್ಯದ ಪ್ರತಿ ಬೂತ್‌ನಿಂದ 50 ಜನ ಬರಬೇಕು. ದೇಶದಲ್ಲೇ ಮೊದಲ ಬಾರಿಗೆ ಭಾಗ್ಯಲಕ್ಷ್ಮೀ ಯೋಜನೆ ತಂದವರು ಯಡಿಯೂರಪ್ಪ. ದೊಡ್ಡ ಸಂಖ್ಯೆಯಲ್ಲಿ, ಶೇ.25ರಷ್ಟಾದರೂ ಮಹಿಳೆಯರು ಭಾಗವಹಿಸಬೇಕು.

-ಎನ್.ರವಿಕುಮಾರ್ ವಿಧಾನ ಪರಿಷತ್ ಮುಖ್ಯಸಚೇತಕ

ಚಿತ್ರದುರ್ಗದಲ್ಲೇ ಅಭಿಮಾನೋತ್ಸವ ನಡೆಸಿಕೊಡುತ್ತೇವೆ ಎಂದು ಹೇಳಿದಾಗ ಎಲ್ಲ ಹಿರಿಯರು ಒಪ್ಪಿಗೆ ನೀಡಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಹಾವೇರಿ, ಹೊಸಪೇಟೆ, ಬಳ್ಳಾರಿ, ಕೊಪ್ಪಳ ಸೇರಿ ಎಲ್ಲ ಜಿಲ್ಲೆಗಳಿಂದ ಹೆಚ್ಚು ಜನ ಆಗಮಿಸಬೇಕು. ಎಲ್ಲ ಹಂತದಲ್ಲೂ ಸಮಿತಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು.

- ಗೋವಿಂದ ಎಂ. ಕಾರಜೋಳ ಸಂಸದ

ಚಿತ್ರದುರ್ಗದಲ್ಲಿ ಭಾನುವಾರ ಬಿಎಸ್‌ವೈ ಅಭಿಮಾನೋತ್ಸವದ ಪೆಂಡಾಲ್ ನಿರ್ಮಾಣಕ್ಕೆ ಭೂಮಿಪೂಜೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇನ್ನಿತರ ಬಿಜೆಪಿ ನಾಯಕರು ನೆರವೇರಿಸಿದರು.

50 ವರ್ಷಗಳ ಜನಸೇವೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ''ಅಭಿಮಾನೋತ್ಸವದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ನಾಡಿನ ಮಠಾಧೀಶರು ಭಾಗವಹಿಸಲಿದ್ದಾರೆ. ಕರ್ನಾಟಕದಲ್ಲಿ ರೈತರು, ಕಾರ್ಮಿಕರ ಪರ ಹೋರಾಟ, ಜನಸೇವೆಗೆ ಮತ್ತೊಂದು ಹೆಸರಾಗಿರುವ ಬಿಎಸ್‌ವೈ, ಐವತ್ತು ವರ್ಷಗಳ ಜನಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡ ಏಕೈಕ ನಾಯಕ. ಅವರೆಂದೂ ಅಧಿಕಾರಕ್ಕಾಗಿ ಹೋರಾಟ ಮಾಡಲಿಲ್ಲ, ಬಡವರ ಕಣ್ಣೀರು ಒರೆಸಲು ಪ್ರಾಮಾಣಿಕ ಕೆಲಸ ಮಾಡಿದ್ದಾರೆ. ಅವರ ಈ ಜನಸೇವೆ ಸ್ಮರಿಸಲು ಅಭಿಮಾನೋತ್ಸವ ಆಯೋಜಿಸಲಾಗಿದೆ,'' ಎಂದರು.

''ರಾಜ್ಯದ ಪ್ರವಾಸ ಮಾಡಿ ಪಕ್ಷ ಕಟ್ಟಿದವರು ಬಿಎಸ್‌ವೈ. ನಗರಕ್ಕೆ ಸೀಮಿತವಾದ ಪಕ್ಷ ಎಂಬ ಹಣೆಪಟ್ಟಿ ಕಿತ್ತು ಹಾಕಿ ರಾಜ್ಯದ ಮನೆ, ಮನಗಳಿಗೆ ಬಿಜೆಪಿಯನ್ನು ಮುಟ್ಟಿಸಿ, ದೀನದಲಿತ ಪಕ್ಷವಾಗಿ ಮಾಡಿದರು. ಏಳುಬೀಳುಗಳ ನಡುವೆ ಬೆನ್ನು ತೋರಿಸದೆ ರಾಜಕಾರಣ ಮಾಡಿದವರು. ಅವರ ಹೋರಾಟ ಮುಂದಿನ ಪೀಳಿಗೆಗೆ ಪ್ರೇರಣೆ ಆಗಬೇಕು,'' ಎಂದು ಹೇಳಿದರು.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ''ಅಭಿಮಾನೋತ್ಸವದಲ್ಲಿ ಲಕ್ಷಾಂತರ ಜನ ಭಾಗವಹಿಸಬೇಕು. ಬಿಎಸ್‌ವೈ ಜೀವನ ಸಾಧನೆ ಸಂಭ್ರಮಿಸುವ ಸಮಾವೇಶ ಇದಾಗಬೇಕು. ಕಾರ್ಯಕ್ರಮಕ್ಕೆ ಸೇರುವ ಜನರಿಗೆ ಎಲ್ಲ ಅಗತ್ಯ ಮೂಲಸೌಲಭ್ಯ ಕಲ್ಪಿಸುವ ಜವಾಬ್ದಾರಿಯನ್ನು ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಮುಖಂಡರು ವಹಿಸಿಕೊಳ್ಳಬೇಕು,'' ಎಂದು ಹೇಳಿದರು.

ಹರಿಹರ ಪಂಚಮಸಾಲಿ ಪೀಠದಲ್ಲಿ ಸಂಚಲನ

ಬಿ.ಸಿ. ಉಮಾಪತಿ ಸೇರಿ ಮೂವರು ಧರ್ಮದರ್ಶಿಗಳ ಉಚ್ಚಾಟನೆ | ಮೂರು ಹೊಸ ನಿರ್ಣಯ

1. ಟ್ರಸ್ಟಿಗಳ ಅಧಿಕಾರ ಅವಧಿ 5 ವರ್ಷಗಳಿಗೆ ಮಿತಿ
2. ಪ್ರತಿ ಜಿಲ್ಲೆಯಿಂದ ಒಬ್ಬರಿಗೆ ಮಾತ್ರ ಟ್ರಸ್ಟ್‌ನಲ್ಲಿ ಅವಕಾಶ
3. ಪೀಠಕ್ಕೆ ಬಂದ ಕಾಣಿಕೆ ಮತ್ತಿತರ ವಿವರವನ್ನು ಪ್ರಕಟಿಸುವುದು

■ **ವಿಕ ಸುದ್ದಿಲೋಕ** ದಾವಣಗೆರೆ

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಧರ್ಮದರ್ಶಿಗಳಾದ ಚಂದ್ರಶೇಖರ್ ಪೂಜಾರ್ ಮತ್ತು ಜ್ಯೋತಿ ಪ್ರಕಾಶ್ ಅವರನ್ನು ಏಪ್ರಿಲ್ 13ರಿಂದ ಜಾರಿಗೆ ಬರುವಂತೆ ಉಚ್ಚಾಟನೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯಾಧ್ಯಕ್ಷ ಸೋಮನಗೌಡ ಎಂ. ಪಾಟೀಲ್ ತಿಳಿಸಿದರು.

''ಟ್ರಸ್ಟ್‌ನಿಂದ ಈ ಮೂವರನ್ನು ಉಚ್ಚಾಟನೆ ಮಾಡಲು ಅವರ ವಿರುದ್ಧದ ಅವ್ಯವಹಾರ, ಅಧರ್ಮ ಮತ್ತು ಅಪನಂಬಿಕೆಯ ಆರೋಪಗಳೇ ಕಾರಣ. ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದಲ್ಲಿ 13,600 ಸದಸ್ಯರಿದ್ದು, ಟ್ರಸ್ಟ್‌ಗಿಂತ ಸಂಘವೇ ಪರಮೋಚ್ಚವಾಗಿದೆ. ಧರ್ಮದರ್ಶಿಗಳು ಮಠದ ವ್ಯವಹಾರದಲ್ಲಿ ಅಕ್ರಮ ನಡೆಸಿದರೆ, ಅಧರ್ಮವಾಗಿ ನಡೆದುಕೊಂಡರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಧಿಕಾರ ಸಂಘದ ಬೈಲಾದಲ್ಲಿ ಇದೆ,'' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ಉಚ್ಚಾಟನೆಗೊಂಡಿರುವ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ, ಧರ್ಮದರ್ಶಿಗಳಾದ ಚಂದ್ರಶೇಖರ್ ಪೂಜಾರ್, ಜ್ಯೋತಿ ಪ್ರಕಾಶ್ ಅವರಿಗೆ ಯಾವುದೇ ಲೆಕ್ಕಪತ್ರ ನಿರ್ವಹಣೆ, ಬ್ಯಾಂಕ್ ವ್ಯವಹಾರ ಅಥವಾ ಸಂಘಕ್ಕೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಇಲ್ಲ,'' ಎಂದು ಸ್ಪಷ್ಟಪಡಿಸಿದರು.

ಬಂದ ಹಣವನ್ನು ಸರಿಯಾಗಿ ಖರ್ಚು ಮಾಡಿಲ್ಲ. ಬಿ.ಸಿ. ಉಮಾಪತಿಯವರು ಲಿಖಿತ ರೂಪದಲ್ಲಿ ಲೆಕ್ಕ ನೀಡಲು ನಿರಾಕರಿಸಿದ್ದಾರೆ. ಈ ಪೀಠವು 80 ಲಕ್ಷ ಜನರ ಆಸ್ತಿಯಾಗಿದ್ದು, ಪಾರದರ್ಶಕತೆ ಇರಲೇಬೇಕು. ಅವ್ಯವಹಾರ ನಡೆದಾಗ ನಾವೆಲ್ಲರೂ ಧ್ವನಿ ಎತ್ತಲೇಬೇಕಾಗುತ್ತದೆ.

-ಸೋಮನಗೌಡ ಎಂ. ಪಾಟೀಲ್ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಅಧ್ಯಕ್ಷ

''ಕಳೆದ ಮಾರ್ಚ್ 23ರಂದು ಕೊಪ್ಪಳದಲ್ಲಿ ನಡೆದ ಸಭೆಯಲ್ಲಿ ಎಲ್ಲಾ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರು ಕೆಲವು ಪ್ರಮುಖ ಬೇಡಿಕೆ ಮುಂದಿಟ್ಟಿದ್ದರು. ಈ ಹಿನ್ನೆಲೆಯಲ್ಲಿ ಟ್ರಸ್ಟಿಗಳ ಅವಧಿ ಐದು ವರ್ಷಗಳಿಗೆ ಸೀಮಿತವಾಗಿರಬೇಕು. ಪ್ರತಿ ಜಿಲ್ಲೆಯಿಂದ ಒಬ್ಬರಿಗೆ ಮಾತ್ರ ಟ್ರಸ್ಟ್‌ನಲ್ಲಿ ಅವಕಾಶ ನೀಡಬೇಕು. ಟ್ರಸ್ಟಿಗಳ ನೇಮಕಾತಿ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರ ಮೂಲಕವೇ ನಡೆಯಬೇಕೆಂಬ ನಿರ್ಣಯ ಕೈಗೊಳ್ಳಲಾಗಿತ್ತು. ಈ ನಿರ್ಣಯಗಳು ಹಾಲಿ ಟ್ರಸ್ಟ್‌ನ ಧರ್ಮದರ್ಶಿಗಳ ಒಪ್ಪಿಗೆ ಇರಲಿಲ್ಲ, 2008ರಿಂದ ಪೀಠಕ್ಕೆ ಅಥವಾ ಸಂಘಕ್ಕೆ ಯಾರೆಲ್ಲಾ ಕಾಣಿಕೆ ನೀಡಿದ್ದಾರೋ, ಅವರ ಪಟ್ಟಿ ಸಿದ್ಧಪಡಿಸಿ ಹಣದ ಬಳಕೆ ಬಗ್ಗೆ ಸಂಪೂರ್ಣ ವಿವರವನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು,'' ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಲೆಕ್ಕ ಕೊಡಿ ಚಳವಳಿ ಅಧ್ಯಕ್ಷ ಪರಮೇಶ್ವರಗೌಡ ಇದ್ದರು.

ಬೇಸೂರು ಅಣು ವಿದ್ಯುತ್ ಸ್ಥಾವರ, ಆತಂಕ ಬೇಡ

ಸಾಗರ (ಶಿವಮೊಗ್ಗ): ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಯೋಜನೆ ಜಾರಿಗೆ ತರದಂತೆ ಕೇಂದ್ರ ಸಚಿವರಿಗೆ ಮನವರಿಕೆ ಮಾಡಲಾಗುವುದು ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಜಿಲ್ಲೆಯಲ್ಲಿ ಪರಿಸರ ಹಾಗೂ ಜನರಿಗೆ ಹಾನಿಯಾಗುವ ಯಾವುದೇ ಯೋಜನೆಗೂ ತಮ್ಮ ಸ್ಪಷ್ಟ ವಿರೋಧವಿದೆ ಎಂದಿದ್ದಾರೆ.



''ತಾಲೂಕಿನ ಬೇಸೂರು ಗ್ರಾಮದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ಜನರು ಅನಾವಶ್ಯಕವಾಗಿ ಭಯಪಡಬೇಕಿಲ್ಲ, ಕೇಂದ್ರ ಸರಕಾರದ ಅಧೀನದಲ್ಲಿರುವ ಎನ್‌ಟಿಪಿಸಿ ಸಂಸ್ಥೆ ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ವಿಜಯಪುರ, ಕೊಪ್ಪಳ, ಶಿವಮೊಗ್ಗ, ಉತ್ತರ ಕನ್ನಡ ಹಾಗೂ ರಾಯಚೂರು ಜಿಲ್ಲೆಗಳನ್ನು ಗುರುತಿಸಿದೆ. ಸೂಕ್ತ ಸ್ಥಳಗಳ ಆಯ್ಕೆಗಾಗಿ ಪ್ರಾಥಮಿಕ ಅಧ್ಯಯನ ಹಾಗೂ ಭೂ ವೈಜ್ಞಾನಿಕ ಪರಿಶೀಲನೆಗಳನ್ನು ಕೈಗೊಳ್ಳಲು ರಾಜ್ಯ ಸರಕಾರದ ಕಂದಾಯ ಇಲಾಖೆಗೆ ಸೂಚಿಸಲಾಗಿದೆ. ವಿಷಯ ಗಮನಕ್ಕೆ ಬಂದ ತಕ್ಷಣ ಶಿವಮೊಗ್ಗ ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಕುರಿತು ರಾಜ್ಯ ಸರಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ,'' ಎಂದು ತಿಳಿಸಿದ್ದಾರೆ.

ಹೀಟ್ ಸ್ಟ್ರೋಕ್: 2 ಶ್ವಾನ ಬಲಿ

ಮೈಸೂರು: ನಗರದಲ್ಲಿ ಬಿಸಿಲಿನ ತಾಪಕ್ಕೆ ಎರಡು ಶ್ವಾನಗಳು ಬಲಿಯಾಗಿದ್ದು, ಮತ್ತೊಂದು ಶ್ವಾನದ ಸ್ಥಿತಿ ಗಂಭೀರವಾಗಿದೆ.

ರೋನಿ

ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋನಿ, ಬಿಗಲ್ ವರ್ಗಕ್ಕೆ ಸೇರಿದ 4 ವರ್ಷದ ಸೋನು ನಾಯಿಗಳು ಬಿಸಿಲಿನ ಆಘಾತಕ್ಕೆ ಬಲಿಯಾಗಿವೆ. ಮತ್ತೊಂದು ಸಾಕು ನಾಯಿಯ ಸ್ಥಿತಿ ಗಂಭೀರವಾಗಿದ್ದು, ಪಶು ಆಸ್ಪತ್ರೆಗೆ ಸೇರಿಸಲಾಗಿದೆ.

ವಿಜಯನಗರದ ಮೂರನೇ ಹಂತದ ತೇಜಸ್ ಅವರ ರೋನಿ ಶನಿವಾರ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಂಡಿತ್ತು. ಪ್ರದರ್ಶನದ ನಂತರ ಮಧ್ಯಾಹ್ನ 3ರ ವೇಳೆಗೆ ಅಸ್ವಸ್ಥಗೊಂಡ ರೋನಿಯನ್ನು ಆಂಬ್ಯುಲೆನ್ಸ್‌ನಲ್ಲಿ ಖಾಸಗಿ ಪಶು ಆಸ್ಪತ್ರೆಗೆ ಕರೆದೊಯ್ದು ತುರ್ತು ಚಿಕಿತ್ಸೆ ನೀಡಲಾಯಿತು. ಚಿಕಿತ್ಸೆ ಫಲಕಾರಿಯಾಗದೇ ಸಂಜೆ 5ರ ವೇಳೆಗೆ ಪ್ರಾಣ ಬಿಟ್ಟಿತು.

ಮತ್ತೊಂದು ಪ್ರಕರಣದಲ್ಲಿ ಮೋಹನ್ ಅವರು ತಮ್ಮ ಸೋನು ನಾಯಿಯನ್ನು ಶನಿವಾರ ಮಧ್ಯಾಹ್ನ ವಾಕಿಂಗ್‌ಗೆ ಕರೆದುಕೊಂಡು ಹೋಗಿದ್ದ ವೇಳೆ ಬಿಸಿಲಿನ ತಾಪಕ್ಕೆ ಅಸ್ವಸ್ಥಗೊಂಡಿತು ಪೆಟ್ ಆಸ್ಪತ್ರೆಗೆ ದಾಖಲಿಸಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದೆ.

ರೈಲಲ್ಲೇ ಹೆರಿಗೆ: ರೈಲ್ವೆ ಸಿಬ್ಬಂದಿ, ಸಹ ಪ್ರಯಾಣಿಕರು ನೆರವು

■ **ವಿಕ ಸುದ್ದಿಲೋಕ** ಬಂಟ್ವಾಳ (ದ.ಕ)

ಮುರುಡೇಶ್ವರದಿಂದ ಬೆಂಗಳೂರಿಗೆ ಸಂಚರಿಸುತ್ತಿದ್ದ ರೈಲಿನಲ್ಲಿದ್ದ ಗರ್ಭಿಣಿಗೆ ಹೆರಿಗೆ ನೋವು ಕಾಣಿಸಿಕೊಂಡ ವೇಳೆ ರೈಲ್ವೆ ಸಿಬ್ಬಂದಿ ಹಾಗೂ ಸಹ ಪ್ರಯಾಣಿಕರು ತುರ್ತು ವೈದ್ಯಕೀಯ ನೆರವು ಒದಗಿಸಿ ಸುಖ ಪ್ರಸವಕ್ಕೆ ನೆರವಾದ ಘಟನೆ ಭಾನುವಾರ ಬಂಟ್ವಾಳ ರೈಲು ನಿಲ್ದಾಣದಲ್ಲಿ ನಡೆದಿದೆ.

ಸಂಜೆ 7.22ರ ವೇಳೆಗೆ ರೈಲು ಬಂಟ್ವಾಳಕ್ಕೆ ಆಗಮಿಸಿದಾಗ, ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿ ಪೊನ್ನಮ್ಮ ರಕ್ತಸ್ರಾವದಿಂದ ಬಳಲುತ್ತಿರುವುದು ತಿಳಿದು ಬಂತು. ತಕ್ಷಣವೇ ರೈಲ್ವೆ ಸಿಬ್ಬಂದಿ ತುರ್ತು ವೈದ್ಯಕೀಯ ಸೇವೆಗೆ ಮಾಹಿತಿ ನೀಡಿ, ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿದರು. ಆದರೆ ಆಂಬ್ಯುಲೆನ್ಸ್ ಬರುವುದಕ್ಕೂ ಮುನ್ನವೇ, ಸಹಪ್ರಯಾಣಿಕ ಮಹಿಳೆಯ ನೆರವಿನಿಂದ ಪೊನ್ನಮ್ಮ ಗಂಡು ಮಗುವಿಗೆ ಜನ್ಮ ನೀಡಿದರು. ಅಷ್ಟು ಹೊತ್ತಿಗೆ ಕಲ್ಲಡ್ಕದ ಸುಜ್ಞಾನ ಆಂಬ್ಯುಲೆನ್ಸ್ ವಾಹನದ ಚಾಲಕ ಲೋಕೇಶ್ ಬಿ.ಸಿ.ರೋಡ್‌ನ ಸೋಮಯಾಜಿ ಆಸ್ಪತ್ರೆಯಿಂದ ವೈದ್ಯರ ತಂಡವನ್ನು ರೈಲು ನಿಲ್ದಾಣಕ್ಕೆ ಕರೆದುಕೊಂಡು ಬಂದಿದ್ದರು. ವೈದ್ಯರು ತಾಯಿ ಮತ್ತು ಮಗುವನ್ನು ಪರೀಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದರು. ತಾಯಿ ಮತ್ತು ಶಿಶುವಿನ ಆರೋಗ್ಯ ಸ್ಥಿರವಾಗಿದ್ದು, ಮಗು ಅವಧಿಗೂ ಮುನ್ನ ಜನಿಸಿದ ಕಾರಣ ವೈದ್ಯಕೀಯ ನಿಗಾದಲ್ಲಿ ಇದೆ.

ನಿಶ್ಚಿತಾರ್ಥದ ರಾತ್ರಿ ಪ್ರೇಮಿ ಜತೆ ಪರಾರಿಯಾದ ಯುವತಿ: ದೂರು

ಹಾವೇರಿ: ವಿವಾಹ ನಿಶ್ಚಿತಾರ್ಥವಾದ ದಿನವೇ ಯುವತಿ ನಾಪತ್ತೆಯಾಗಿರುವ ಘಟನೆ ಜಿಲ್ಲೆಯ ಹಾನಗಲ್ ತಾಲೂಕು ಶಂಕ್ರಿಕೊಪ್ಪ ಗ್ರಾಮದಲ್ಲಿ ನಡೆದಿದ್ದು, ಲವ್ ಜಿಹಾದ್ ಶಂಕೆ ವ್ಯಕ್ತಪಡಿಸಿ ಆಡೂರ ಠಾಣೆಗೆ ದೂರು ನೀಡಲಾಗಿದೆ. ''ಮೇ 11ಕ್ಕೆ ಮದುವೆ ನಿಶ್ಚಯವಾಗಿದ್ದು, ಶನಿವಾರ ನಿಶ್ಚಿತಾರ್ಥ ನಡೆದಿತ್ತು. ಆದರೆ ಅಂದು ರಾತ್ರಿ ನನ್ನ ಮಗಳು ನರೇಗಲ್ ಗ್ರಾಮದ ಇಬ್ರಾಹಿಂ ನೆಗಳೂರು ಎಂಬುವನೊಂದಿಗೆ ಓಡಿಹೋಗಿದ್ದಾಳೆ,'' ಎಂದು ಯುವತಿ ತಂದೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಅಕ್ಕಿಆಲೂರಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದ ವೇಳೆ ಯುವತಿಗೆ ಇಬ್ರಾಹಿಂ ಪರಿಚಯವಾಗಿತ್ತು ಎನ್ನಲಾಗಿದೆ.

ಹೆಚ್ಚು ಅಂಕ ಪಡೆದಿದ್ದರೂ ಕಡಿಮೆ ನಮೂದು

ಚಿತ್ರದುರ್ಗ/ಚಿಕ್ಕಮಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದಿದ್ದರೂ ಒಟ್ಟಾರೆ ಅಂಕಗಳನ್ನು ನಮೂದು ಮಾಡುವಾಗ ಆದ ಪ್ರಮಾದದಿಂದ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಇಬ್ಬರು ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ದೊರೆತಿದೆ.

ಎಸ್ಸೆಸ್ಸೆಲ್ಸಿ ಬೋರ್ಡ್ ಎಡವಟ್ಟು



ವಿದ್ಯಾರ್ಥಿನಿಯ ಹಿಂದಿ ವಿಷಯದ ಉತ್ತರ ಪತ್ರಿಕೆ ಮೌಲ್ಯ ಮಾಪನದಲ್ಲಿ 79 ಅಂಕ ನಮೂದಾಗಿದೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಮುಸ್ಟಲಗುಮ್ಮಿ ವೀರಭದ್ರಸ್ವಾಮಿ ಕನ್ನಡ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿನಿ ಟಿ.ಎಲ್.ನಯನಳಿಗೆ ಹಿಂದಿ ವಿಷಯದಲ್ಲಿ 49 ಅಂಕ ದೊರಕಿತ್ತು. ವಿದ್ಯಾರ್ಥಿನಿ ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ತರಿಸಿಕೊಂಡಾಗ 80ಕ್ಕೆ 79 ಅಂಕ ನೀಡಿರುವುದು ಗೊತ್ತಾಗಿದೆ.

ಉತ್ತಮವಾಗಿ ಪರೀಕ್ಷೆ ಬರೆದಿದ್ದ ನಯನ, 600ಕ್ಕೂ ಹೆಚ್ಚು ಅಂಕಗಳನ್ನು ನಿರೀಕ್ಷೆ ಮಾಡಿದ್ದಳು. ಹಿಂದಿ ಪರೀಕ್ಷೆ ಉತ್ತಮವಾಗೇ ಬರೆದಿದ್ದರೂ ಕಡಿಮೆ ಅಂಕ ಬಂದಿದ್ದರ ಬಗ್ಗೆ ನಯನ, ಶಿಕ್ಷಕ ಜಿ.ವೈ.ತಿಪ್ಪೇಸ್ವಾಮಿ ಬಳಿ ಹೇಳಿಕೊಂಡಿದ್ದಳು. ತಿಪ್ಪೇಸ್ವಾಮಿ ಅವರೇ ಶುಲ್ಕ ಪಾವತಿಸಿ ಉತ್ತರ ಪತ್ರಿಕೆಯ ಸ್ಕ್ಯಾನ್ ಕಾಪಿಗೆ ಅರ್ಜಿ ಸಲ್ಲಿಸಿದ್ದರು. ಶನಿವಾರ ಲಭ್ಯವಾದ ಉತ್ತರ ಪತ್ರಿಕೆ ಪ್ರತಿಯಲ್ಲಿ 79 ಅಂಕ ಎಂದು ನಮೂದಾಗಿದೆ. ಅಂಕಗಳನ್ನು ಎಂಟ್ರಿ ಮಾಡುವ ಬಾಲಕಿಗೆ 30 ಅಂಕ ಕಡಿಮೆ ಆಗಿರುವುದು ತಿಳಿದುಬಂದಿದೆ.

ಅಂಕಗಳನ್ನು ಆನ್‌ಲೈನ್‌ಗೆ ಎಂಟ್ರಿ ಮಾಡುವಾಗ ಲೋಪವಾಗಿರುವ ಸಾಧ್ಯತೆ ಇದೆ. ಸ್ಕ್ಯಾನ್ ಪ್ರತಿ ತರಿಸಿಕೊಂಡ ನಂತರ ಮರು ಎಣಿಕೆ ಅಥವಾ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬೇಕು. ಇದರಿಂದ ಲೋಪ ನಿವಾರಣೆಯಾಗಲಿದೆ.

-ಇನಾಯತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನೋಡಲ್ ಅಧಿಕಾರಿ, ಚಿತ್ರದುರ್ಗ.

ಶೃಂಗೇರಿ ಪಟ್ಟಣದ ಬಿಆರ್‌ವಿ ಪ್ರೌಢಶಾಲೆಯ ವಿದ್ಯಾರ್ಥಿ ರಾಮದತ್ತ ಶರ್ಮ ಮನೆಗೆ ತೆರಳಿ ಶಾಲಾ ಸಮಿತಿ ಸದಸ್ಯರು ಆತ್ಮಸ್ಥೈರ್ಯ ತುಂಬಿದರು.

ವಿದ್ಯಾರ್ಥಿಗೆ 44 ಅಂಕ ಕಡಿಮೆ!

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯ ರಾಮಕೃಷ್ಣ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ರಾಮದತ್ತ ಶರ್ಮ ಆಂಗ್ಲಭಾಷೆ ಬಿಟ್ಟು ಎಲ್ಲ ವಿಷಯದಲ್ಲೂ ಶೇ.90 ಅಂಕ ಗಳಿಸಿದ್ದು, ಇಂಗ್ಲಿಷ್‌ನಲ್ಲಿ 28 ಅಂಕ ಮಾತ್ರ ಬಂದಿತ್ತು. ಆದ್ದರಿಂದ ಉತ್ತರ ಪತ್ರಿಕೆಯ ಸ್ಕ್ಯಾನ್ ಪತ್ರಿಗೆ ಅರ್ಜಿ ಸಲ್ಲಿಸಿದ್ದ, ಅದರಲ್ಲಿ 72 ಅಂಕ ಎಂದು ನಮೂದಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿ 44 ಅಂಕಗಳು ಕಡಿಮೆ ನಮೂದಾಗಿರುವ ಬಗ್ಗೆ ಎಸ್ಸೆಸ್ಸೆಲ್ಸಿ ಬೋರ್ಡ್‌ಗೆ ಪೋಷಕರು ದೂರು ನೀಡಿದ್ದಾರೆ. ವಿದ್ಯಾರ್ಥಿಯ ಮನೆಗೆ ತೆರಳಿದ ಶಾಲಾ ಸಮಿತಿ ಸದಸ್ಯರು, ಇಲಾಖೆ ಮೂಲಕ ನ್ಯಾಯ ಕೊಡಿಸುವ ಪ್ರಯತ್ನ ನಡೆಸುವ ಭರವಸೆ ನೀಡಿದ್ದಾರೆ.

ತಲಕಾಡಿನಲ್ಲಿ ಪ್ರವಾಸಿಗರಿಗೆ ನಿರ್ಬಂಧ ತೆರವು

ತಲಕಾಡು (ಮೈಸೂರು): ಇಲ್ಲಿನ ಅರಣ್ಯ ನಿಸರ್ಗಧಾಮದ ನದಿಗೆ ಪ್ರವಾಸಿಗರು ಇಳಿಯದಂತೆ ಹೇರಿದ್ದ ನಿರ್ಬಂಧವನ್ನು ಭಾನುವಾರ ಮಧ್ಯಾಹ್ನ ತೆರವುಗೊಳಿಸಲಾಗಿದೆ.

ಬೆಂಗಳೂರು ಮೂಲದ ಅನಾಥಾಶ್ರಮದ ಇಬ್ಬರು ಬಾಲಕಿಯರು ನೀರಿನಲ್ಲಿ ಮುಳುಗಿ ಮೃತಪಟ್ಟ ಹಿನ್ನೆಲೆಯಲ್ಲಿ ನಿರ್ಬಂಧ ವಿಧಿಸಲಾಗಿತ್ತು. ಪ್ರವಾಸಿಗರ ಸುರಕ್ಷತೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮಕೈಗೊಂಡಿದ್ದು, ಪ್ರವಾಸಿಗರು ನದಿಯಾಳದ ಕಡೆ ತೆರಳದಂತೆ ಉದ್ದಕ್ಕೂ ಕೆಂಪು ಬಾವುಟ, ಮುನ್ನೆಚ್ಚರಿಕೆ ಫಲಕದ ಟೇಪು ಅಳವಡಿಸಲಾಗಿದೆ. ಅಲ್ಲದೆ, ಸ್ಥಳದಲ್ಲಿ ಪೊಲೀಸರು ಸೇರಿದಂತೆ ಹೋಮ್ ಗಾರ್ಡ್ ಸಿಬ್ಬಂದಿ, ಅರಣ್ಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 'ತಲಕಾಡಿನಲ್ಲಿ ನೀರಿನಾಟಕ್ಕೆ ಬೇಕು ಮುಂಜಾಗ್ರತೆ' ವಿಶೇಷ ವರದಿಯನ್ನು 'ವಿಜಯ ಕರ್ನಾಟಕ' ಏ. 23ರಂದು ಪ್ರಕಟಿಸಿ ಸ್ಥಳೀಯ ಆಡಳಿತದ ಗಮನ ಸೆಳೆದಿತ್ತು.

ಉಡುಪಿಯಲ್ಲಿ ಆಕಸ್ಮಿಕ ಬೆಂಕಿಗೆ ವಾಣಿಜ್ಯ ಕಟ್ಟಡ ಆಹುತಿ

ಉಡುಪಿ : ಉಡುಪಿ ಸಿಟಿ ಬಸ್ ನಿಲ್ದಾಣ ಸಮೀಪದ ಖಾದರ್ ಕಮರ್ಷಿಯಲ್ ಕಟ್ಟಡವೊಂದರ ಅಂಗಡಿಯೊಂದಕ್ಕೆ ಆಕಸ್ಮಿಕವಾಗಿ ಬೆಂಕಿ ತಗುಲಿ ಇಡೀ ಕಟ್ಟಡವೇ ಬೆಂಕಿಗಾಹುತಿಯಾಗಿದೆ.

ಭಾನುವಾರ ಸಂಜೆ 5.20ರ ವೇಳೆಗೆ ಕಟ್ಟಡದ ನೆಲ ಮಹಡಿಯಲ್ಲಿರುವ ಮೊಬೈಲ್ ಅಂಗಡಿಯಲ್ಲಿ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಬೆಂಕಿಯ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿತು.

ಕಟ್ಟಡದಲ್ಲಿದ್ದ ಮೊಬೈಲ್ ಶಾಪ್, ಹಾರ್ಡ್‌ವೇರ್ ಅಂಗಡಿಗೆ ಬೆಂಕಿ ತಗುಲಿದ್ದು, ಕ್ಷಣಾರ್ಧದಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿ ಅಂಗಡಿಗಳಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ. ಅಕ್ಕಪಕ್ಕದ ಅಂಗಡಿ ಮಾಲೀಕರು ತಮ್ಮ ಅಂಗಡಿಯಲ್ಲಿದ್ದ ವಸ್ತುಗಳನ್ನು ಇತರೆಡೆಗೆ ಸಾಗಿಸಿ ಮುಂಜಾಗ್ರತಾ ಕ್ರಮ ವಹಿಸಿದರು.

ಅರ್ಧ ಗಂಟೆ ಬಳಿಕ ಬಂದ ಅಗ್ನಿಶಾಮಕ ವಾಹನ: ಅಗ್ನಿ ಅವಘಡ 5.20ರ ಸುಮಾರಿಗೆ ಸಂಭವಿಸಿದ್ದು, ಅಗ್ನಿಶಾಮಕ ದಳಕ್ಕೆ ಕೂಡಲೇ ಮಾಹಿತಿ ರವಾನಿಸಲಾಗಿತ್ತು. ಆದರೆ ಅಗ್ನಿಶಾಮಕ ದಳ ಘಟಕದಿಂದ ಅವಘಡ ಸಂಭವಿಸಿದ ಸ್ಥಳ 2 ಕಿ.ಮೀ. ಅಂತರವಿದ್ದರೂ ಅಗ್ನಿಶಾಮಕ ವಾಹನ ಬಂದಿದ್ದು ಅರ್ಧಗಂಟೆ ಬಳಿಕ. ಅಷ್ಟೊತ್ತಿಗೆ ಬೆಂಕಿಯ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿತು. ಸಾರ್ವಜನಿಕರು, ಅಂಗಡಿ ಮಾಲೀಕರು ಅಗ್ನಿಶಾಮಕ ದಳದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

KLE SOCIETY
Since 1916
Lingaraj College Road,Belagavi
Globally Acclaimed Educational Organisation with Proven Track Record of Quality Education
318 Institutions | 18,000 Faculties | 1,48,000 Students | 5,500 Healthcare Beds

KLE's INDEPENDENT PU COLLEGE
Opp. BDA Complex, Nagarbhavi, 2nd Stage, Bengaluru - 560 072. Karnataka

ADMISSIONS OPEN
FOR 1st PUC
SCIENCE : (PCMB, PCMC)
COMMERCE : (SEBA, CEBA)

Special Features
- Highly qualified, experienced & dedicated faculty members
- JEE / NEET / CET Coaching (Integrated Program)
- CA Foundation Coaching for Commerce
- Student Development Programmes

Languages : ENGLISH & KANNADA / HINDI / SANSKRIT
- Scholarship for meritorious students
- Mentoring & Counselling
- Continuous Evaluation
- Cultural & Co-curricular activities

" EXCELLENCE IS OUR MOTTO "

Phone: 080-23186644
Mobile: +91 8722211113, 9632707222
E-mail: info@klepunagarbhavi.edu.in

Pre-primary & School Education | Collegiate Education | Engineering & Technical Education | Agricultural Education
Health Sciences & Healthcare | Management Education | Law Education

ಬಂಗಾಳದಲ್ಲಿ 2ನೇ ಹಂತದ ಪ್ರಚಾರಕ್ಕೆ ತೆರೆ

ಮೋದಿ, ಅಮಿತ್ ಶಾ, ಮಮತಾ ದೀದಿ ಬಿರುಸಿನ ಪ್ರಚಾರ | ಮಾತಿನ ಸಮರವೂ ಜೋರು

ಕೋಲ್ಕೊತಾ: ಬಿಜೆಪಿ ಹಾಗೂ ಟಿಎಂಸಿ ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿರುವ ಪಶ್ಚಿಮ ಬಂಗಾಳದಲ್ಲಿ 2ನೇ ಹಾಗೂ ಕೊನೆ ಹಂತದ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಸೋಮವಾರ (ಏ.27) ತೆರೆ ಬೀಳಲಿದೆ.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ತಾರಾ ಪ್ರಚಾರಕರು ಅಂತಿಮ ಹಂತದಲ್ಲಿ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಬಹಿರಂಗ ಪ್ರಚಾರ ಕೊನೆಗೊಳ್ಳುವ ಮುನ್ನಾದಿನವಾದ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ಮಿಂಚಿನ ಪ್ರಚಾರ ನಡೆಸಿದರು. ವಿವಿಧೆಡೆ ಹಲವು ರ‍್ಯಾಲಿಯಲ್ಲಿ ಪಾಲ್ಗೊಂಡ ಮೋದಿ ಅವರು ಸಂಜೆ ಕೋಲ್ಕೊತಾದಲ್ಲಿ ಬೃಹತ್ ರೋಡ್ ಶೋ ನಡೆಸಿದರು.

ಪಂಚ ಪ್ರಾಂತ್ಯ ಮತಹಬ್ಬ

ಭಾನುವಾರ ಬೆಳಗ್ಗೆ ಬೊಂಗಾಂವ್‌ನಲ್ಲಿ ಬಿಜೆಪಿ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಮೋದಿ, ''ಮೊದಲ ಹಂತದ ಚುನಾವಣೆಯಲ್ಲಿ ಟಿಎಂಸಿಯ ದುರಹಂಕಾರಕ್ಕೆ ಮತದಾರರು ಉತ್ತರ ನೀಡಿದ್ದಾರೆ. 2ನೇ ಹಂತದ ಚುನಾವಣೆ ಬಿಜೆಪಿ ಗೆಲುವನ್ನು ಖಾತರಿಪಡಿಸಲಿದೆ. ಜನತೆ ಮೊದಲ ಹಂತದ ಮತದಾನದ ದಾಖಲೆಯನ್ನು ಮೀರುವಂತೆ ಮತದಾನ ಮಾಡಬೇಕು. ಟಿಎಂಸಿ ಸರಕಾರ ತೊಲಗಿಸುವ ಸಂಕಲ್ಪ ಕೈಗೊಳ್ಳಬೇಕು,'' ಎಂದು ಕರೆ ನೀಡಿದರು.

''ಟಿಎಂಸಿಯ 'ಮಹಾ ಜಂಗಲ್ ರಾಜ್' ಪರಿಣಾಮ ರಾಜ್ಯದಲ್ಲಿ ಉದ್ದಿಮೆಗಳು ಬಾಗಿಲು ಮುಚ್ಚಿವೆ. ಹೂಗ್ಲಿ ನದಿ ತೀರದುದ್ದಕ್ಕೂ ಇದ್ದಂತಹ ಗಿರಣಿಗಳು ಶಾಶ್ವತವಾಗಿ ಬಂದ್ ಆಗುವ ಪರಿಸ್ಥಿತಿ ಬಂದಿದೆ. ಬ್ರಿಟಿಷರ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಕಾರ್ಖಾನೆಗಳು ಮುಚ್ಚಿವೆ. ರಾಜ್ಯದಲ್ಲಿ ಟಿಎಂಸಿಯ ಗೂಂಡಾ ಸಿಂಡಿಕೇಟ್ ಮಾತ್ರ ಉಳಿದುಕೊಂಡಿದೆ,'' ಎಂದು ಟೀಕಿಸಿದರು.

ಕೋಲ್ಕೊತಾದಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ರೋಡ್‌ಶೋ ನಡೆಸಿದರು. ರಾಜ್ಯ ಬಿಜೆಪಿ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಜತೆಗಿದ್ದರು.

ಹೌರಾ ಜಿಲ್ಲೆಯಲ್ಲಿ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ರೋಡ್ ಶೋ ಮೂಲಕ ಟಿಎಂಸಿ ಅಭ್ಯರ್ಥಿಗಳ ಪರ ಮತಯಾಚಿಸಿದರು.

100 ಕಚ್ಚಾ ಬಾಂಬ್ ಪತ್ತೆ

ಈ ನಡುವೆ, ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗರ್ ಗ್ರಾಮದ ಮನೆಯೊಂದರಲ್ಲಿ ಅಡಗಿಸಿದ್ದ 100 ಕಚ್ಚಾ ಬಾಂಬ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಗುಪ್ತಚರ ಇಲಾಖೆಯ ಮಾಹಿತಿ ಆಧರಿಸಿ ಭದ್ರತಾ ಪಡೆಗಳ ಸೂಚನೆಯಂತೆ ಕಾರ್ಯಾಚರಣೆಗೆ ಇಳಿದ ಪೊಲೀಸರು ಟಿಎಂಸಿ ಕಾರ್ಯಕರ್ತ ರಫಿಕುಲ್ಲಾ ಇಸ್ಲಾಂ ಮನೆಯಲ್ಲಿ ಸಂಗ್ರಹಿಸಿದ್ದ ಕಚ್ಚಾ ಬಾಂಬ್‌ಗಳನ್ನು ಜಪ್ತಿ ಮಾಡಿದರು.

ದೀದಿ-ಅಮಿತ್ ಶಾ ವಾಗ್ಯುದ್ಧ

ಪ್ರಚಾರ ಅಖಾಡದಲ್ಲಿ ಸಿಎಂ ಮಮತಾ ಬ್ಯಾನರ್ಜಿ, ಗೃಹ ಸಚಿವ ಅಮಿತ್ ಶಾ ನಡುವೆ ವಾಗ್ಯುದ್ಧವೇ ನಡೆಯಿತು. ''ಟಿಎಂಸಿ ಗೂಂಡಾಗಳನ್ನು ಉಲ್ಟಾ ನೇತು ಹಾಕುವೆ,'' ಎಂಬ ಅಮಿತ್ ಶಾ ಮಾತಿಗೆ ಆಕ್ರೋಶ ವ್ಯಕ್ತಪಡಿಸಿರುವ ಮಮತಾ ಬ್ಯಾನರ್ಜಿ, ''ಅಮಿತ್ ಶಾ ಮಾತು ಬಿಜೆಪಿ ನಾಯಕರ ಮನಸ್ಥಿತಿಗೆ ಕನ್ನಡಿ ಹಿಡಿದಿದೆ. ಕೇಂದ್ರ ಗೃಹ ಸಚಿವರಾಗಿ ಬೆದರಿಕೆ ಹೇಳಿಕೆ, ಹಿಂಸೆಗೆ ಪ್ರಚೋದನೆ ನೀಡುವ ಹೇಳಿಕೆ ನೀಡಿರುವ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು,'' ಎಂದು ಎಚ್ಚರಿಕೆ ನೀಡಿದ್ದಾರೆ. ''ಚುನಾವಣೆಯಲ್ಲಿ ಸೋಲುವ ಭೀತಿಯಲ್ಲಿರುವ ಮಮತಾ ಬ್ಯಾನರ್ಜಿ ಜನರಿಗೆ ಬೆದರಿಕೆ ಹಾಕುತ್ತಿದ್ದಾರೆ. ನಾವು ರಾಜ್ಯದ ಜನರ ಜತೆಗಿರುತ್ತೇವೆ. ಏ.29 ರಂದು ಜನತೆ ಸರಿಯಾದ ಉತ್ತರ ನೀಡಲಿದ್ದಾರೆ,'' ಎಂದು ಅಮಿತ್ ತಿರುಗೇಟು ನೀಡಿದ್ದಾರೆ.

2ನೇ ಹಂತದ ಮತದಾನಕ್ಕೆ ಸಜ್ಜು

ಮೊದಲ ಹಂತದಲ್ಲಿ ದಾಖಲೆಯ ಶೇ.92ರಷ್ಟು ಮತದಾನ ಕಂಡಿರುವ ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಚುನಾವಣೆಗೆ ಚುನಾವಣಾ ಆಯೋಗ ಸಕಲ ಕ್ರಮ ಕೈಗೊಂಡಿದೆ. ಕೋಲ್ಕೊತಾ, ಹೌರಾ, ಹೂಗ್ಲಿ, ನಾದಿಯಾ, ಪೂರ್ವ ವರ್ಧಮಾನ್, ಉತ್ತರ 24 ಪರಗಣ ಹಾಗೂ ದಕ್ಷಿಣ 24 ಪರಗಣ ಒಳಗೊಂಡ ದಕ್ಷಿಣ ಭಾಗದ ಎಂಟು ಜಿಲ್ಲೆಗಳ 142 ಕ್ಷೇತ್ರಗಳಿಗೆ ಬುಧವಾರ (ಏ.29) ಮತದಾನ ನಡೆಯಲಿದೆ. ಚುನಾವಣಾ ಕಣದಲ್ಲಿ 1,448 ಅಭ್ಯರ್ಥಿಗಳಿದ್ದು, 3.20 ಕೋಟಿ ಜನ ಮತದಾನಕ್ಕೆ ಅರ್ಹರಾಗಿದ್ದಾರೆ. ಚುನಾವಣಾ ಭದ್ರತೆಗೆ 2,321 ಸಿಎಪಿಎಫ್ ತುಕಡಿ ನಿಯೋಜಿಸಲಾಗಿದೆ. ರಾಜ್ಯದ 38 ಸಾವಿರ ಪೊಲೀಸರ ಜತೆಗೆ ತುರ್ತು ಪ್ರತಿಕ್ರಿಯೆಗೆ ಶಸಸ್ತ್ರ ಮೀಸಲು ಪಡೆಯ 160 ಮೋಟಾರ್ ಸೈಕಲ್ ಯುನಿಟ್‌ಗಳನ್ನು ನಿಯೋಜನೆ ಮಾಡಲಾಗಿದೆ.

ವಿಕ ವಾರೆವಾ! ಈ ಜಗ ಬಲು ಸೋಜಿಗ

■ ಧೀರಜ್ ಪೊಯ್ಯೆಕಂಡ

ಮಣ್ಣು ತಿನ್ನುತ್ತಿರುವ ಮಂಗಗಳು!

ಕಾಡು ಹಾದಿಯಲ್ಲಿ, ಮೃಗಾಲಯಗಳಲ್ಲಿ ಸಾಮಾನ್ಯವಾಗಿ 'ಪ್ರಾಣಿಗಳಿಗೆ ಆಹಾರ ನೀಡಬೇಡಿ' ಎಂದು ಬೋರ್ಡ್ ಹಾಕಿರುತ್ತಾರೆ. ಆದರೆ, ನಮ್ಮ ಜನ ಪ್ರಾಣಿ ಪ್ರೀತಿಯ ಪ್ರದರ್ಶನ ಮಾಡುವುದಕ್ಕಾಗಿ ಮನುಷ್ಯರೇ ತಿಂದು ಅರಗಿಸಿಕೊಳ್ಳಲಾಗದ ಚಿಪ್ಸ್, ಜಂಕ್‌ಫುಡ್‌ಗಳನ್ನು ಕೊಟ್ಟು, ಹುಡುಕಿ ತಿನ್ನಬೇಕಾದ ಪ್ರಾಣಿಗಳು ಬೇಡಿ ತಿನ್ನುವ ಹಾಗೆ ಮಾಡಿಬಿಡುತ್ತಾರೆ. ದೂರದ ಜಿಬ್ರಾಲ್ಟರ್‌ನಲ್ಲೂ ಇದೇ ಕಥೆ. ಪ್ರವಾಸಿಗರು ಕೊಟ್ಟ ಆಹಾರ ಸೇವಿಸಿ ಮಕಾಕ್ ಜಾತಿಯ ಮಂಗಗಳಿಗೆ ನಾಲಗೆ ರುಚಿ ಹತ್ತಿಬಿಟ್ಟಿದೆ.

ಆರಂಭದಲ್ಲಿ ಕೊಟ್ಟಿದ್ದನ್ನು ತಿನ್ನುತ್ತಿದ್ದ ಮಂಗಗಳು, ನಂತರ ಕದ್ದು ತಿನ್ನುವುದಕ್ಕೆ ಶುರು ಮಾಡಿದೆ. ಆದರೆ, ಈ ಆಹಾರ ಮಂಗಳಿಗೆ ಒಗ್ಗುವಂಥವಲ್ಲ, ದೇಹಕ್ಕೆ ಒಗ್ಗದ ಆಹಾರ ಸೇವಿಸಿದ ಪರಿಣಾಮವಾಗಿ ಮಂಗಳಲ್ಲಿ ಅಜೀರ್ಣ ಸಮಸ್ಯೆ ಶುರುವಾಗಿದೆ. ಆಚ್ಚರಿಯೆಂಬಂತೆ ಈ ಮಂಗಗಳು ಅಜೀರ್ಣ ಸಮಸ್ಯೆಗೆ ತಾವಾಗಿಯೇ ಪರಿಹಾರವನ್ನೂ ಕಂಡುಕೊಂಡಿವೆ.

ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಸಂಶೋಧಕರು ಜಿಬ್ರಾಲ್ಟರ್‌ನ ಮಂಗಗಳ ನಡವಳಿಕೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ವಿಷಯ ಬೆಳಕಿಗೆ ಬಂದಿದೆ. ಪ್ರವಾಸಿಗರು ನೀಡುವ ಚಾಕೊಲೇಟ್, ಐಸ್ ಕ್ರೀಮ್, ಬಿಸ್ಕೆಟ್ ಮತ್ತು ಚಿಪ್ಸ್‌ಗಳಂತಹ ಆಹಾರಗಳಲ್ಲಿ ಕ್ಯಾಲೊರಿ, ಸಕ್ಕರೆ ಮತ್ತು ಉಪ್ಪಿನಂಶ ಹೆಚ್ಚಿರುತ್ತದೆ. ಆದರೆ ನಾರಿನಂಶ ಕಡಿಮೆ ಇರುತ್ತದೆ. ಇದು ಮಂಗಗಳ ಜೀರ್ಣಾಂಗವ್ಯೂಹದಲ್ಲಿ ಅಸಮತೋಲನ ಉಂಟುಮಾಡಿ, ಹೊಟ್ಟೆನೋವು ಅಥವಾ ಅತಿಸಾರದಂತಹ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮಂಗಗಳು ಮಣ್ಣು ತಿನ್ನಲು ಆರಂಭಿಸಿವೆ. ಮಣ್ಣನ್ನು ತಿನ್ನುವ ಈ ಪ್ರಕ್ರಿಯೆಯನ್ನು ವಿಜ್ಞಾನಿಗಳು 'ಜಿಯೋಫೇಗಿ'.

ಮಂಗಗಳಿಗೆ ಆಹಾರ ನೀಡಬೇಡಿ ಎಂದು ಎಷ್ಟು ಹೇಳಿದರೂ ಕೇಳದೆ ಅವುಗಳಿಗೆ ಜಂಕ್‌ಫುಡ್ ತಿನ್ನಿಸಿ, ಈಗ ಮಣ್ಣು ತಿನ್ನುವಂತೆ ಮಾಡಿದ ಮನುಷ್ಯರಿಗೆ ಏನನ್ನಬೇಕು ನೀವೇ ಹೇಳಿ.

300 ವರ್ಷ ಹಳೆ ವಯಲಿನ್

ಸುಮಾರು 300 ವರ್ಷಗಳಷ್ಟು ಹಳೆಯದಾದ ಮತ್ತು 83 ಕೋಟಿ ರೂಪಾಯಿ ಬೆಲೆಬಾಳುವ ಅಪರೂಪದ 'ಸ್ಟ್ರಾಡಿವೇರಿಯಸ್' (Stradivarius) ವಯಲಿನ್ ಫ್ರಾನ್ಸ್‌ನಲ್ಲಿ ಪತ್ತೆಯಾಗಿದೆ. ಈ ಅಮೂಲ್ಯವಾದ ವಯಲಿನ್ ಅನ್ನು ಎರಡನೇ ಮಹಾಯುದ್ಧದ ಸಮಯದಲ್ಲಿ ಪೋಲೆಂಡ್‌ನ ವಾರ್ಸಾದಲ್ಲಿದ್ದ

ವಸ್ತುಸಂಗ್ರಹಾಲಯದಿಂದ ನಾಜಿ ಸೈನಿಕರು ಕಳವು ಮಾಡಿದ್ದರು. ಈ ವಯಲಿನ್ ಪತ್ತೆಯಾದ ಬಗೆಯೂ ಕುತೂಹಲಕಾರಿಯಾಗಿದೆ.

ಫ್ರಾನ್ಸ್‌ನ ಕೋಲ್ಮಾರ್ ನಗರದಲ್ಲಿ ನಡೆದ ಒಂದು ಸಂಗೀತ ಕಾರ್ಯಕ್ರಮದಲ್ಲಿ ವಯಲಿನ್ ವಾದಕ ಎಮ್ಯಾನುಯೆಲ್ ಕೊಪ್ಪೆ ಎಂಬುವವರು ಈ ವಯಲಿನ್ ಅನ್ನು ಬಳಸಿದ್ದರು. ಲೂಟಿ ಮಾಡಿದ ಸಂಗೀತ ಉಪಕರಣಗಳ ಬಗ್ಗೆ ಸಂಶೋಧನೆ ನಡೆಸುವ ತಜ್ಞೆ ಪಾಸ್ಕೇಲ್ ಬರ್ನ್‌ಹೈಮ್ ಅವರು ಪತ್ರಿಕೆಯೊಂದರಲ್ಲಿ ಈ ಬಗ್ಗೆ ಓದಿ, ಅದು ಕಳುವಾದ 'ಲೌಟರ್‌ಬ್ಯಾಕ್' (Lauterbach) ವಯಲಿನ್ ಇರಬಹುದು ಎಂದು ಗುರುತಿಸಿದ್ದರು. ಪರಿಶೀಲನೆ ಮಾಡಿದಾಗ ಅವರ ಅನುಮಾನ ನಿಜವೆಂದು ತಿಳಿದುಬಂದಿದೆ. ಇಟಲಿಯ ಪ್ರಸಿದ್ಧ ವಯಲಿನ್ ತಯಾರಕ ಆಂಟೋನಿಯೊ ಸ್ಟ್ರಾಡಿವಾರಿ 1719ರಲ್ಲಿ ತಯಾರಿಸಿದ ಕೇವಲ ಒಂಬತ್ತು ವಯಲಿನ್‌ಗಳಲ್ಲಿ ಇದು ಒಂದು ಎನ್ನಲಾಗಿದೆ. ಸದ್ಯ ಮರದ ಕಾಲಮಾನ ನಿರ್ಧರಿಸುವ 'ಡೆಂಡ್ರೋಕ್ರೊನೋಲಾಜಿಕಲ್' ಪರೀಕ್ಷೆಗಳ ಮೂಲಕ ಇದು ಅದೇ ವಯಲಿನ್ನಾ ಎಂದು ಖಚಿತಪಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಕಾರ್ಯಕ್ರಮದ ಆಯೋಜಕರು ಮಾತ್ರ 'ಇದು ಅದು ಅಲ್ಲವೇ ಅಲ್ಲ' ಎಂದು ವಾದಿಸುತ್ತಿದ್ದಾರೆ.

30 ವರ್ಷ ಗುರುತು ಕಳವು ಮಾಡಿದ ಆಸಾಮಿ

ಒಬ್ಬ ಮನುಷ್ಯ ಇನ್ನೊಬ್ಬನ ಹೆಸರನ್ನು ಒಂದು ದಿನ ಅಥವಾ ಒಂದು ವಾರ ಬಳಸಲು ಬಚಾವಾಗಬಹುದು. ಆದರೆ ಇಲ್ಲೊಬ್ಬ ಮಹಾನುಭಾವ ಬರೋಬ್ಬರಿ 30 ವರ್ಷಗಳ ಕಾಲ ತನ್ನ ಸಹೋದ್ಯೋಗಿಯ ಹೆಸರನ್ನು ತನ್ನದಾಗಿಸಿಕೊಂಡು, ಆತನ ಹೆಸರಲ್ಲೇ

ಮದುವೆಯಾಗಿ, ಆಸ್ತಿ ಮಾಡಿ, ಸಾಲವನ್ನೂ ಪಡೆದು ಕೊನೆಗೆ ಅಸಲಿ ವ್ಯಕ್ತಿಯನ್ನೇ ಹುಚ್ಚಾಸ್ಪತ್ರೆಗೆ ಕಳುಹಿಸಿದ್ದಾನೆ.

ಇದು ಅಮೆರಿಕದಲ್ಲಿ ನಡೆದ ಘಟನೆ. ಮ್ಯಾಥ್ಯೂ ಕೀರನ್ಸ್ ಎಂಬಾತ 1988ರಲ್ಲಿ ವಿಲಿಯಂ ವುಡ್ಸ್ ಎಂಬುವವನ ಜೊತೆ ಕೆಲಸ ಮಾಡುತ್ತಿದ್ದ. ಈ ಡ್ಯೂಪ್ಲಿಕೇಟ್ ಆಟ ಶುರುವಾಗಿದ್ದೇ ಆಗ. ವುಡ್ಸ್‌ನ ಹೆಸರನ್ನು ಬಳಸಿಕೊಂಡ ಮ್ಯಾಥ್ಯೂ ಬರೋಬ್ಬರಿ 30 ವರ್ಷಗಳ ಕಾಲ ತಾನೇ ವಿಲಿಯಂ ವುಡ್ಸ್ ಎಂದು ಜಗತ್ತಿಗೆ ನಂಬಿಸಿದೆ. ಇನ್ನೂ ವಿಚಿತ್ರವೆಂದರೆ ಈ ಮ್ಯಾಥ್ಯೂ ಮದುವೆಯಾಗಿದ್ದು, ಕಾರು ಕೊಂಡಿದ್ದು, ಬ್ಯಾಂಕ್ ಖಾತೆ ತೆರೆದಿದ್ದು ಎಲ್ಲವೂ ಅಸಲಿ ವುಡ್ಸ್ ಹೆಸರಿನಲ್ಲೇ. ಯಾವಾಗ ಅಸಲಿ ವಿಲಿಯಂ ವುಡ್ಸ್‌ಗೆ ತನ್ನ ಹೆಸರಿನಲ್ಲಿ ಯಾರೋ ಸಾಲ ಮಾಡುತ್ತಿದ್ದಾರೆ ಎಂದು ಗೊತ್ತಾಯಿತೋ, ಆತ ಬ್ಯಾಂಕ್‌ಗೆ ಹೋಗಿ ನಾನೇ ಅಸಲಿ ವುಡ್ಸ್ ಅಂದಿದ್ದಾನೆ. ಆದರೆ ನಕಲಿ ವುಡ್ಸ್ ಆದಾಗಲೇ ಗುಡ್ಡೆ ಹಾಕಿದ್ದ ದಾಖಲೆಗಳನ್ನು ತೋರಿಸಿ 'ಈತ ಯಾರೋ ಹುಚ್ಚ' ಎಂದು ಪೊಲೀಸರನ್ನು ನಂಬಿಸಿದ್ದಾನೆ. ಪರಿಣಾಮವಾಗಿ ಅಸಲಿ ವುಡ್ಸ್ 428 ದಿನ ಜೈಲಿನಲ್ಲಿ ಹಾಗೂ 147 ದಿನ ಮಾನಸಿಕ ಆಸ್ಪತ್ರೆಯಲ್ಲಿ ಕಳೆದಿದ್ದಾನೆ.

ಇಷ್ಟಾದರೂ ತನ್ನ ಪಟ್ಟುಬಿಡದ ವುಡ್ಸ್ ಹೋರಾಟ ಮುಂದುವರಿಸಿ ಡಿಎನ್‌ಎ ಪರೀಕ್ಷೆ ಎಂಬ ಅಸ್ತ್ರ ಹೂಡಿದ್ದಾರೆ. ದಾಖಲೆ ಬದಲಿಸಿದ ಹಾಗೆ ಡಿಎನ್‌ಎ ಬದಲಿಸಲಾದೀತೇ? ಮ್ಯಾಥ್ಯೂ ಕೀರನ್ಸ್ ಸಿಕ್ಕಿಬಿದ್ದಿದ್ದಾನೆ. ಸದ್ಯ ನಕಲಿ ವುಡ್ಸ್ ಕಂಬಿ ಹಿಂದೆ ಇದ್ದಾನೆ. ಈಗ ವುಡ್ಸ್ ಹೆಸರು ಬಳಸಿಕೊಂಡು ಗಳಿಸಿದ್ದೆಲ್ಲವೂ ಅಸಲಿ ವುಡ್ಸ್‌ಗೆ ಸೇರಬೇಕಾ ಬೇಡವಾ ಅನ್ನುವ ಜಿಜ್ಞಾಸೆಯೊಂದು ಹುಟ್ಟಿದೆ. ಉತ್ತರ ಸ್ವಲ್ಪ ಕಷ್ಟ!

Quick ನ್ಯೂಸ್

- ವಿಪರೀತ ಸೆಖೆಯ ನಡುವೆ ಗುಜರಾತ್‌ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಶೇ.50ರಷ್ಟು ಮತದಾನ ದಾಖಲು
- ಲಕ್ಷ ಮಂದಿ ಕೇಂದ್ರೀಯ ಸಶಸ್ತ್ರ ಪಡೆ ಯೋಧರು ನಿಯೋಜನೆಗೊಂಡಿದ್ದರೂ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಹಿಂಸಾಚಾರ ನಡೆದಿರುವುದು ಚುನಾವಣಾ ಆಯೋಗದ ವೈಫಲ್ಯ: ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ
- ಅತಿ ಶೀಘ್ರವೇ ಸಚಿವ ಸಂಪುಟ ವಿಸ್ತರಣೆ ಆಗಲಿದೆ ಎಂದ ಬಿಹಾರ ಡಿಸಿಎಂ ವಿಜಯ್ ಕುಮಾರ್, ನಿತೀಶ್ ಪುತ್ರ ನಿಶಾಂತ್‌ಗೆ ಡಿಸಿಎಂ ಸ್ಥಾನ ಸಾಧ್ಯತೆ
- ಕೊಲಂಬಿಯಾದಲ್ಲಿ ಉಗ್ರರಿಂದ ಹೆದ್ದಾರಿಯಲ್ಲಿ ಸ್ಫೋಟಕ ಬಳಸಿ ಬಸ್ ಸ್ಫೋಟ; 13 ಮಂದಿ ಸಾವು
- ಅಸ್ಸಾಂ ಸಿಎಂ ಪತ್ನಿ ದಾಖಲಿಸಿರುವ ಎಫ್‌ಐಆರ್ ಸಂಬಂಧಿತ ನಿರೀಕ್ಷಣಾ ಜಾಮೀನು ನಿರಾಕರಿಸಿದ ಗುವಾಹಟಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್ ನಾಯಕ ಪವನ್ ಖೇರಾ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ಗ್ರಾಮಾಭಿವೃದ್ಧಿಗೆ ಇಸ್ರೊ ಡಿಜಿಟಲ್ ನಕ್ಷೆ

ಉಪಗ್ರಹ ಮೂಲಕ ಪಂಚಾಯತ್ ಪ್ಲಾನಿಂಗ್ | ಪ್ರತಿ ಹಳ್ಳಿಗೂ ಸ್ಯಾಟಲೈಟ್ ಆಧಾರಿತ ಮ್ಯಾಪ್

ಹೊಸದಿಲ್ಲಿ: ಇನ್ಮೇಲೆ ಗ್ರಾಮ ಪಂಚಾಯಿತಿಯ ಯಾವ ಪ್ರದೇಶದಲ್ಲಿ ಬೋರ್‌ವೆಲ್ ಕೊರೆಯಬೇಕು? ಎಲ್ಲಿ ರಸ್ತೆ ನಿರ್ಮಿಸಬೇಕು? ಜಾನುವಾರುಗಳಿಗೆ ಎಲ್ಲಿ ಹುಲ್ಲುಗಾವಲು ಮೀಸಲಿಡಬೇಕು?

- ಇಂಥಾ ಯೋಜನೆ ರೂಪಿಸಲು ಗ್ರಾಮ ಪಂಚಾಯಿತಿ ಆಡಳಿತ ಹಳೆಯ ಕಡತಗಳನ್ನು ತಿರುವು ಹಾಕಬೇಕಿಲ್ಲ ಅಥವಾ ಅಂದಾಜಿನ ಮೇಲೂ ಕೆಲಸ ಮಾಡಬೇಕಿಲ್ಲ. ಎಲ್ಲರೂ ತಮ್ಮ ಗ್ರಾಮದ ವ್ಯಾಪ್ತಿಯನ್ನು ಉಪಗ್ರಹ ನೀಡುವ ಸ್ಪಷ್ಟ ನೋಟದ ಮೂಲಕವೇ ಎಲ್ಲವನ್ನೂ ಲೆಕ್ಕಾಚಾರ ಮಾಡಬಹುದು! ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಈ ಕೆಲಸವನ್ನು ಬಹಳ ಸುಲಭ ಮಾಡಿದೆ. ಭೂಮಿಯ ಸುತ್ತ ಸುತ್ತುತ್ತಿರುವ ಉಪಗ್ರಹಗಳ ಮೂಲಕ ಭಾರತವನ್ನು, ಇಲ್ಲಿನ ಹಳ್ಳಿ ಹಳ್ಳಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಮ್ಯಾಪ್ ಮಾಡಲಾಗಿದೆ. ಇದರಿಂದ ಸಣ್ಣ ಹಳ್ಳಿಗಳ ಗಡಿರೇಖೆಗಳನ್ನು ಸುಲಭವಾಗಿ ಗುರುತಿಸಬಹುದು.

ರಾಷ್ಟ್ರೀಯ ಪಂಚಾಯತ್ ರಾಜ್ ದಿನದಂದು ಇಡೀ ದೇಶದ ಭೂ ಬಳಕೆ ಮತ್ತು ಭೂ ಹೊದಿಕೆಯನ್ನು 1:10000 ಪ್ರಮಾಣದಲ್ಲಿ ಅತ್ಯಂತ ನಿಖರವಾಗಿ ಮ್ಯಾಪ್ ಮಾಡುವ ಕಾರ್ಯವಾಗಿದೆ ಎಂದು ಇಸ್ರೊ ಘೋಷಿಸಿದೆ.

ಸರಳವಾಗಿ ಹೇಳುವುದಾದರೆ, ನಕ್ಷೆಯಲ್ಲಿನ ಒಂದು ಸೆಂಟಿಮೀಟರ್ ಅಳತೆಯು ಭೂಮಿಯ ಮೇಲಿನ ಕೇವಲ 100 ಮೀಟರ್‌ಗಳನ್ನು ಪ್ರತಿನಿಧಿಸುತ್ತದೆ. ಇದು ಭತ್ತದ ಗದ್ದೆ ಮತ್ತು ಕೆರೆಗೆ ಇರುವ ವ್ಯತ್ಯಾಸವನ್ನು, ಒಂದು ಶಾಲೆ ಮತ್ತು ಮರಳು ಕ್ವಾರಿಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸುವಷ್ಟು ನಿಖರವಾಗಿದೆ. ಇಸ್ರೊ ಸಂಗ್ರಹಿಸಿರುವ ಈ ದತ್ತಾಂಶವು ಇನ್ಮೇಲೆ ಸರಕಾರಿ ಸಂಸ್ಥೆಗಳಿಗೆ ಲಭ್ಯವಿದ್ದು, ಪಂಚಾಯತ್ ರಾಜ್ ಸಚಿವಾಲಯದ ವೆಬ್ ಪೋರ್ಟಲ್‌ಗೆ ಜೋಡಿಸಲಾಗಿದೆ. ಇದು ಸಹಜವಾಗಿ ಗ್ರಾಮಾಡಳಿತದ ಪಾಲಿಗೆ ಯೋಜನಾ ಕ್ರಾಂತಿ ಎಂದು 'ಇಂಡಿಯಾ ಟುಡೆ' ವರದಿ ಮಾಡಿದೆ. ಅಂದಾಜಿನ ಬದಲು ವೈಜ್ಞಾನಿಕ ಪುರಾವೆಗಳ ಆಧಾರದ ಮೇಲೆ 'ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ'ಗಳನ್ನು ಸಿದ್ಧಪಡಿಸಲು ಇದು ನೆರವಾಗಲಿದೆ. ವಿಪತ್ತು ನಿರ್ವಹಣೆ, ಜಲ ಸಂರಕ್ಷಣೆ ಮತ್ತು ಅರಣ್ಯೀಕರಣ ಚಟುವಟಿಕೆಗಳಿಗೂ ಸಹಾಯ ಮಾಡುತ್ತದೆ.

ಹೇಗಿರುತ್ತೆ ಮ್ಯಾಪಿಂಗ್?

ಬಾಹ್ಯಾಕಾಶದಿಂದಲೇ ನಡೆಸಿರುವ ಸಮೀಕ್ಷೆಯು ಭೂ ಬಳಕೆ (ಲ್ಯಾಂಡ್ ಯೂಸ್) ಮತ್ತು ಭೂ ಹೊದಿಕೆ (ಲ್ಯಾಂಡ್ ಕವರ್)ಯನ್ನು ಸ್ಪಷ್ಟವಾಗಿ ಮ್ಯಾಪಿಂಗ್ ಮಾಡಿದೆ. ಅರಣ್ಯಗಳು, ಜಲಮೂಲಗಳು, ಹುಲ್ಲುಗಾವಲುಗಳು ಸೇರಿ ಭೂಮಿಯ ಮೇಲ್ಮೈಯಲ್ಲಿರುವ ಭೌತಿಕ ಪರಿಸರವನ್ನು ಭೂ ಹೊದಿಕೆ ಒಳಗೊಂಡಿದೆ. ಕೃಷಿ, ವಸತಿ ಅಥವಾ ಕೈಗಾರಿಕೆಗಾಗಿ ಮನುಷ್ಯರು ಬಳಸಿಕೊಂಡಿರುವ ಭೂ ಪರಿಸರವು ಭೂ ಬಳಕೆ ಬಾಬತ್ತಿನಲ್ಲಿದೆ. ದಶಕಗಳ ಕಾಲ ಉಪಗ್ರಹಗಳ ಮೂಲಕ ನಡೆಸಿದ ವೀಕ್ಷಣೆಯ ಆಧಾರದ ಮೇಲೆ ನಕ್ಷೆಯನ್ನು ರೂಪಿಸಲಾಗಿದೆ.

ಎಲ್ಲಿ ಲಭ್ಯ?

ಪಂಚಾಯತ್ ರಾಜ್ ಸಚಿವಾಲಯವು ವಿನ್ಯಾಸಗೊಳಿಸಿರುವ 'ಗ್ರಾಮ ಮಂಚಿತ್ರ' ಪೋರ್ಟಲ್‌ನಲ್ಲಿ ಲಭ್ಯ. ಜಿಐಎಸ್ ತಂತ್ರಾಂಶದಲ್ಲಿ ರಸ್ತೆಗಳು, ನೀರಿನ ಮೂಲಗಳು, ಮಣ್ಣಿನ ಗುಣಮಟ್ಟ ಮತ್ತು ಜನಸಂಖ್ಯೆಯ ದತ್ತಾಂಶಗಳು ಸಿಗಲಿವೆ.

ಶರಣಾಗುವಂತೆ ಆರೋಪಿಗೆ ನಿರ್ದೇಶನ ನೀಡುವಂತಿಲ್ಲ

ಹೊಸದಿಲ್ಲಿ: ''ನ್ಯಾಯಾಲಯವು ಆರೋಪಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆಯೇ ಇರಬಹುದು. ಆದರೆ, ಆತ ವಿಚಾರಣಾ ನ್ಯಾಯಾಲಯದ ಮುಂದೆ ಶರಣಾಗಬೇಕು ಎಂದು ನಿರ್ದೇಶನ ನೀಡುವ ಅಧಿಕಾರ ಹೊಂದಿಲ್ಲ,'' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿಸಿದ ಆರೋಪ ಹೊಂದಿರುವ ವ್ಯಕ್ತಿಯೊಬ್ಬ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಜೆ.ಬಿ.ಪಾರ್ದಿವಾಲಾ ಮತ್ತು ನ್ಯಾ.ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ನ್ಯಾಯಾಲಯ ಆರೋಪಿಗೆ ನಿರೀಕ್ಷಣಾ ಜಾಮೀನನ್ನು ತಿರಸ್ಕರಿಸಲು ಬಯಸಿದರೆ ಹಾಗೆ ಮಾಡಬಹುದು. ಆದರೆ, ಆತ ಶರಣಾಗಬೇಕು ಎಂದು ಹೇಳುವ ಅಧಿಕಾರ ಹೊಂದಿಲ್ಲ ಎಂದು ನ್ಯಾಯಪೀಠವು ಸ್ಪಷ್ಟಪಡಿಸಿದೆ. ಆರೋಪಿಯ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ ಜಾರ್ಖಂಡ್ ಹೈಕೋರ್ಟ್, ಆತ ನ್ಯಾಯಾಲಯದ ಎದುರು ಶರಣಾಗಬೇಕು ಮತ್ತು ನಂತರ ಸಾಮಾನ್ಯ ಜಾಮೀನು ಪಡೆಯಲು ಅರ್ಜಿ ಹಾಕಬೇಕು ಎಂದು ಸೂಚನೆ ನೀಡಿತ್ತು. ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಭೂ ವಿವಾದಕ್ಕೆ ಸಂಬಂಧಿಸಿದಂತೆ ಮೋಸ, ವಂಚನೆ ಎಸಗಲು ನಕಲಿ ದಾಖಲೆ ಸೃಷ್ಟಿ ಸೇರಿದಂತೆ ಹಲವು ಆರೋಪಗಳನ್ನು ಹೊರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ದೂರು ದಾಖಲಾಗಿತ್ತು.

ಈ ಪ್ರಕರಣದಲ್ಲಿ ಯಾವುದೇ ಹೊಸ ಸಂದರ್ಭಗಳನ್ನು ತೋರಿಸಿಲ್ಲ ಎಂಬ ಕಾರಣಕ್ಕೆ ಹೈಕೋರ್ಟ್ ಆರೋಪಿಯ ಎರಡನೇ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. ಈ ಸಂದರ್ಭದಲ್ಲಿ, ಸತ್ಯೇಂದರ್‌ಕುಮಾರ್ ಆಂಟಿಲ್ ಎಂಬಾತನ ವಿರುದ್ಧದ ಸಿಬಿಐ ಪ್ರಕರಣದ ತೀರ್ಪು ಉಲ್ಲೇಖಿಸಿ ಅರ್ಜಿದಾರ ವಿಚಾರಣಾ ನ್ಯಾಯಾಲಯದ ಎದುರು ಶರಣಾಗಬೇಕು. ನಂತರ ಸಾಮಾನ್ಯ ಜಾಮೀನಿಗೆ ಅರ್ಜಿ ಸಲ್ಲಿಸಿ ಪಡೆಯಬೇಕು ಎಂದು ನಿರ್ದೇಶಿಸಿತ್ತು. ಈ ಮೂಲಕ ಮೊದಲ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ತನ್ನ ಹಿಂದಿನ ಆದೇಶವನ್ನೇ ಎತ್ತಿ ಹಿಡಿದಿತ್ತು. ಹೈಕೋರ್ಟ್‌ನ ಈ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ಪಕ್ಷಾಂತರಿ 7 ಸಂಸದರ ಅನರ್ಹತೆಗೆ ಒತ್ತಾಯ

ರಾಜ್ಯಸಭಾ ಸಭಾಪತಿಗೆ ಆಪ್ ಪತ್ರ

ಹೊಸದಿಲ್ಲಿ: ಆಪ್ ತೊರೆದು ಬಿಜೆಪಿ ಸೇರಿರುವ ರಾಘವ್ ಚಡ್ಡಾ ಸೇರಿದಂತೆ ಏಳು ಮಂದಿ ರಾಜ್ಯಸಭಾ ಸದಸ್ಯರನ್ನು ಅನರ್ಹಗೊಳಿಸುವಂತೆ ಕೋರಿ ರಾಜ್ಯಸಭಾ ಸಭಾಪತಿಯೂ ಆಗಿರುವ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಪಕ್ಷವು ಮನವಿ ಸಲ್ಲಿಸಿದೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಆಪ್ ಸಂಸದ ಸಂಜಯ್ ಸಿಂಗ್, ''ಅಗತ್ಯ ಬಿದ್ದರೆ ಈ ವಿಷಯದಲ್ಲಿ ಪಕ್ಷವು ಕಾನೂನು ಕ್ರಮ ಕೈಗೊಳ್ಳಲಿದೆ. ಏಳು ಸಂಸದರ ಈ ಕ್ರಮವು ಪಕ್ಷಾಂತರ ನಿಷೇಧ ಕಾನೂನನ್ನು ಉಲ್ಲಂಘಿಸಿದೆ. ಏಳು ಸಂಸದರ ಸದಸ್ಯತ್ವವನ್ನು ರದ್ದು ಗೊಳಿಸುವಂತೆ ರಾಜ್ಯಸಭಾ ಸಭಾಪತಿಯವರನ್ನು ಒತ್ತಾಯಿಸಲಾಗಿದೆ. ಅವರೆಲ್ಲ ಆಪ್ ನೀಡಿದ್ದ ಟಿಕೆಟ್ ಮೇಲೆ ಮೇಲ್ಮನೆಗೆ ಆಯ್ಕೆಯಾಗಿದ್ದರು. ಆದರೆ ನಂತರ ಪಕ್ಷವನ್ನು ತೊರೆದು ಬಿಜೆಪಿಗೆ ಸೇರಲು ನಿರ್ಧರಿಸಿದರು,'' ಎಂದು ಸಿಂಗ್ ವಾಗ್ದಾಳಿ ನಡೆಸಿದ್ದಾರೆ.



''ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ ಪ್ರಕರಣಗಳು ಸೇರಿದಂತೆ ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳು ಪಕ್ಷಾಂತರಗಳು ಹೇಗೆ ಅನರ್ಹತೆಗೆ ಕಾರಣವಾಗಬಹುದು ಎಂಬುದನ್ನು ಸ್ಪಷ್ಟಪಡಿಸಿವೆ. ಸಂವಿಧಾನದ 10ನೇ ಪರಿಚ್ಛೇದವು ಸಂಸದರು ಮಾಡಿರುವ ರಾಜಕೀಯ ಪಕ್ಷಾಂತರಗಳನ್ನು ಸ್ಪಷ್ಟವಾಗಿ ಅನುಮತಿಸುವುದಿಲ್ಲ,'' ಎಂದು ಹೇಳಿದ್ದಾರೆ.

ರಾಜ್ಯಸಭಾ ಸದಸ್ಯರಾದ ರಾಘವ್ ಚಡ್ಡಾ, ಅಶೋಕ್ ಮಿತ್ತಲ್, ಸಂದೀಪ್ ಪಾಠಕ್, ಹರ್ಭಜನ್ ಸಿಂಗ್, ರಾಜೇಂದ್ರ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಶುಕ್ರವಾರ ಆಪ್ ತೊರೆದು ಬಿಜೆಪಿ ಸೇರ್ಪಡೆಯಾದರು. ಜತೆಗೆ ರಾಜ್ಯಸಭೆಯಲ್ಲಿ ಆಪ್ ಅನ್ನು ಬಿಜೆಪಿಯಲ್ಲಿ ವಿಲೀನ ಗೊಳಿಸುವುದಾಗಿ ಘೋಷಿಸಿದ್ದರು.

ಹರ್ಭಜನ್‌ಗೆ ಕೇಂದ್ರದ ಭದ್ರತೆ

ಮಾಜಿ ಕ್ರಿಕೆಟಿಗ ಹಾಗೂ ರಾಜ್ಯಸಭೆ ಸಂಸದ ಹರ್ಭಜನ್ ಸಿಂಗ್ ಅವರ ಭದ್ರತೆಯನ್ನು ಕೇಂದ್ರ ಸರಕಾರ ಹೆಚ್ಚಿಸಿದೆ. ಆಮ್ ಆದ್ಮಿ ಪಕ್ಷ ತೊರೆಯುವ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಹರ್ಭಜನ್ ಸಿಂಗ್‌ಗೆ ನೀಡಲಾಗಿದ್ದ ಭದ್ರತೆಯನ್ನು ಪಂಜಾಬ್ ಸರಕಾರ ಹಿಂಪಡೆದ ಬೆನ್ನಿಗೆ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಭದ್ರತೆ ಒದಗಿಸ ಲಾಗಿದೆ. ಜಲಂಧರ್‌ನಲ್ಲಿರುವ ಹರ್ಭಜನ್ ಸಿಂಗ್ ನಿವಾಸಕ್ಕೆ ಸಿಆರ್‌ಪಿಎಫ್ ಪಡೆಯ 10 ಯೋಧರನ್ನು ಭದ್ರತೆಗೆ ನಿಯೋಜನೆ ಮಾಡಲಾಗಿದೆ. ಆಪ್ ತೊರೆದ ಸಿಂಗ್ ಮನೆಗೆ ಮುತ್ತಿಗೆ ಹಾಕಿದ್ದ ಆಪ್ ಕಾರ್ಯಕರ್ತರು, ಅವರ ಮನೆಯ ಗೋಡೆಗಳ ಮೇಲೆ 'ಪಂಜಾಬ್‌ನ ದ್ರೋಹಿ' ಎಂದು ಬರಹ ಬರೆದಿದ್ದರು.

ಆಂಧ್ರದಲ್ಲಿ ಇಂಧನ ಅಭಾವ: ಸಿಎಂ ಸಭೆ

ಅಮರಾವತಿ: ಆಂಧ್ರಪ್ರದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಅಭಾವ ತಲೆದೋರಿದ್ದು, ರಾಜ್ಯದ ಹಲವು ಕಡೆ ಪೆಟ್ರೋಲ್ ಬಂಕ್‌ಗಳು ಬಂದ್ ಆಗಿವೆ. ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಭಾನುವಾರ ಉನ್ನತ ಅಧಿಕಾರಿಗಳ ಸಭೆ ನಡೆಸಿ, ವಸ್ತುಸ್ಥಿತಿ ಪರಿಶೀಲನೆ ನಡೆಸಿದರು. ರಾಜ್ಯದ ಒಟ್ಟು 4,510 ಪೆಟ್ರೋಲ್ ಬಂಕ್‌ಗಳ ಪೈಕಿ ತೈಲ ಪೂರೈಕೆಯ ಕೊರತೆಯಿಂದಾಗಿ ಸುಮಾರು 421 ಬಂಕ್‌ಗಳು ಬಂದ್ ಆಗಿವೆ ಎಂದು ಅಧಿಕಾರಿಗಳು ಸಿಎಂ ಗಮನಕ್ಕೆ ತಂದರು.

ಸಾಮಾನ್ಯ ದಿನಗಳಲ್ಲಿ ಆಂಧ್ರಪ್ರದೇಶದಲ್ಲಿ ದಿನಕ್ಕೆ ಸರಾಸರಿ 6,330 ಲೀಟರ್ ಪೆಟ್ರೋಲ್ ಮತ್ತು 9,048 ಲೀಟರ್ ಡೀಸೆಲ್ ಮಾರಾಟವಾಗುತ್ತಿತ್ತು. ಆದರೆ ಕಳೆದ ಶನಿವಾರ ಒಂದೇ ದಿನ, ಪೆಟ್ರೋಲ್ ಮಾರಾಟವು 10,345 ಲೀಟರ್‌ಗೆ ಮತ್ತು ಡೀಸೆಲ್ ಮಾರಾಟವು 14,156 ಲೀಟರ್‌ಗೆ ಏರಿಕೆಯಾಗಿದೆ.

ಫೋಟೊ ಜರ್ನಲಿಸ್ಟ್ ರಘು ರಾಯ್ ನಿಧನ

ಹೊಸದಿಲ್ಲಿ: ಖ್ಯಾತ ಫೋಟೊ ಜರ್ನಲಿಸ್ಟ್ ರಘು ರಾಯ್ (83) ನಿಧನರಾಗಿದ್ದಾರೆ. ಅನಾರೋಗ್ಯಕ್ಕೀಡಾಗಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ''ತಂದೆಯವರಿಗೆ ಎರಡು ವರ್ಷಗಳ ಹಿಂದೆ ಕ್ಯಾನ್ಸರ್ ರೋಗ ಇರುವುದು ಪತ್ತೆಯಾಗಿತ್ತು. ಆಗ ಗುಣಮುಖರಾಗಿದ್ದರು. ಇತ್ತೀಚೆಗೆ ಮತ್ತೆ ಕಾಣಿಸಿಕೊಂಡ ಕ್ಯಾನ್ಸರ್ ಅವರ ಮಿದುಳಿಗೆ ಹಬ್ಬಿತ್ತು ಹಾಗೂ ಅವರು ವೃದ್ಧಾಪ್ಯ ಸಮಸ್ಯೆಗಳಿಂದಲೂ ಬಳಲುತ್ತಿದ್ದರು,'' ಎಂದು ಅವರು ಹೇಳಿದ್ದಾರೆ. ಭಾರತದ ಪ್ರಖ್ಯಾತ ಛಾಯಾಗ್ರಾಹಕರ ಪೈಕಿ ಒಬ್ಬರಾಗಿದ್ದ ರಘು ರಾಯ್, 1965ರಲ್ಲಿ ತಮ್ಮ 23ನೇ ವಯಸ್ಸಿನಲ್ಲಿ ಛಾಯಾಗ್ರಾಹಕರಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ಒಂದು ವರ್ಷದ ಬಳಿಕ ಸ್ಟೇಟ್ಸ್‌ಮನ್ ದಿನಪತ್ರಿಕೆಗೆ ಮುಖ್ಯ ಛಾಯಾಗ್ರಾಹಕರಾಗಿ ಸೇರ್ಪಡೆಯಾದರು. ಇಂಡಿಯಾ ಟುಡೆ ನಿಯತಕಾಲಿಕದಲ್ಲಿಯೂ ಕಾರ್ಯನಿರ್ವಹಿಸಿದ್ದರು. ಭೋಪಾಲ್ ಅನಿಲ ದುರಂತ ಹಾಗೂ ನಂತರದ ಅಡ್ಡಪರಿಣಾಮಗಳನ್ನು ಬಿಂಬಿಸುವ ಅವರ ಫೋಟೊಗಳು ವಿಶೇಷವಾಗಿ ಗಮನ ಸೆಳೆದಿದ್ದವು. ರಘು ರಾಯ್ ಅವರಿಗೆ ಪತ್ನಿ ಗುರ್ಮೀತ್, ಪುತ್ರ ನಿತಿನ್ ಹಾಗೂ ಪುತ್ರಿಯರಾದ ಲಗನ್, ಅವನಿ ಮತ್ತು ಪುರ್ವಾಯಿ ಇದ್ದಾರೆ.



ಪರಮಾಣು, ಪವನಶಕ್ತಿ ಕ್ಷೇತ್ರದಲ್ಲಿ ಸಾಧನೆ

ಜನಗಣತಿ ಎಲ್ಲರ ಜವಾಬ್ದಾರಿ | ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ

ಹೊಸದಿಲ್ಲಿ: ''ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನದ ಬಲದಿಂದ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದೆ ಎಂಬುದಕ್ಕೆ ತಮಿಳುನಾಡಿನ ಕಲ್ಪಕಂನಲ್ಲಿ ನಿರ್ಮಿಸಲಾದ 'ಫಾಸ್ಟ್ ಬ್ರೀಡರ್ ರಿಯಾಕ್ಟರ್' ಮತ್ತು ಪವನ ಶಕ್ತಿ ವಲಯದಲ್ಲಿನ ಪ್ರಗತಿಯೇ ಸಾಕ್ಷಿ,'' ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಭಾನುವಾರ ಅವರು ಆಕಾಶವಾಣಿಯಲ್ಲಿ 133ನೇ 'ಮನ್ ಕಿ ಬಾತ್' ಬಾನುಲಿ ಭಾಷಣ ಮಾಡಿದ ಪ್ರಧಾನಿ, ದೇಶದ ಇಂಧನ ಭದ್ರತೆ, ಪರಿಸರ ಸಂರಕ್ಷಣೆ ಮತ್ತು ಡಿಜಿಟಲ್ ಜನಗಣತಿಯ ಬಗ್ಗೆ ಮಾಹಿತಿಗಳನ್ನು ಹಂಚಿಕೊಂಡರು. ''ತಮಿಳುನಾಡಿನ ಕಲ್ಪಕಂನಲ್ಲಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರ್ 'ಕ್ರಿಟಿಕಲಿಟಿ' ಸಾಧಿಸುವ ಮೂಲಕ ಕಾರ್ಯಾಚರಣೆಯ ಹಂತಕ್ಕೆ ಪ್ರವೇಶಿಸಿದೆ. ಇದು ಸಂಪೂರ್ಣ ಸ್ಥಳೀಯ ತಂತ್ರಜ್ಞಾನದಿಂದ ನಿರ್ಮಿತವಾಗಿದ್ದು, ವಿದ್ಯುತ್ ಉತ್ಪಾದನೆಯ ಜತೆಗೆ ಭವಿಷ್ಯಕ್ಕಾಗಿ ಇಂಧನವನ್ನೂ ಸೃಷ್ಟಿಸುತ್ತದೆ. ಇದು ಭಾರತದ ಪರಮಾಣು ಕಾರ್ಯಕ್ರಮದಲ್ಲಿ ಒಂದು ಮಹತ್ವದ ಮೈಲಿಗಲ್ಲು,'' ಎಂದು ಮೋದಿ ಶ್ಲಾಘಿಸಿದರು.

ಭಾರತವು ಸದ್ಯ 56 ಗಿಗಾವ್ಯಾಟ್‌ಗಿಂತ ಅಧಿಕ ಪವನ ಶಕ್ತಿ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಈ ಕ್ಷೇತ್ರದಲ್ಲಿ ವಿಶ್ವದಲ್ಲೇ 4ನೇ ಸ್ಥಾನಕ್ಕೆ ಏರಿದೆ. ವಾಯು ಕೇವಲ ಒಂದು ಅಂಶವಲ್ಲ, ಅದು ಜೀವನದ ಶಕ್ತಿ ಎಂದ ಪ್ರಧಾನಿ, ''ಗುಜರಾತ್‌ನ ಕಚ್ ಮತ್ತು ಪಾಠಣ್‌ನಂತಹ ಮರುಭೂಮಿ ಪ್ರದೇಶಗಳು ಸದ್ಯಕ್ಕೆ ನವೀಕರಿಸಬಹುದಾದ ಇಂಧನ ಉದ್ಯಾನಗಳಾಗಿ ಬದಲಾಗಿದ್ದು, ಉದ್ಯೋಗ ಸೃಷ್ಟಿಸುತ್ತಿವೆ,'' ಎಂದು ಸಂತಸ ವ್ಯಕ್ತಪಡಿಸಿದರು.

ಜನಗಣತಿ ಎಲ್ಲರ ಜವಾಬ್ದಾರಿ: ಮುಂಬರುವ 2027ರ ಜನಗಣತಿಯು ಸಂಪೂರ್ಣ ಡಿಜಿಟಲ್ ಆಗಿರಲಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು. ''ಈ ಬಾರಿ ನಾಗರಿಕರು ಮೊಬೈಲ್ ಆ್ಯಪ್ ಮೂಲಕ ತಾವಾಗಿಯೇ ಮಾಹಿತಿ ನೀಡಲು ಅವಕಾಶವಿದೆ. ಇದು ಕೇವಲ ಸರಕಾರಿ ಕೆಲಸವಲ್ಲ, ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಜನತೆ ನೀಡುವ ಮಾಹಿತಿ ಸಂಪೂರ್ಣ ಸುರಕ್ಷಿತವಾಗಿರುತ್ತದೆ,'' ಎಂದು ಅವರು ಭರವಸೆ ನೀಡಿದರು.



ಈಶಾನ್ಯದ 'ಬಿದಿರು' ಕ್ರಾಂತಿ: ''2017ರಲ್ಲಿ ಬಿದಿರನ್ನು 'ಮರ'ಗಳ ಪಟ್ಟಿಯಿಂದ ತೆಗೆದುಹಾಕಿದ ಕಾನೂನು ಬದಲಾವಣೆಯು ಈಶಾನ್ಯ ರಾಜ್ಯಗಳ ಆರ್ಥಿಕತೆಯನ್ನೇ ಬದಲಿಸಿದೆ. ತ್ರಿಪುರಾ, ನಾಗಾಲ್ಯಾಂಡ್ ಮತ್ತು ಸಿಕ್ಕಿಂಗಳಲ್ಲಿ ಬಿದಿರಿನ ಪೀಠೋಪಕರಣ, ಅಗರಬತ್ತಿ ಮತ್ತು ಟಿಶ್ಯೂ ಕಲ್ಚರ್ ಮೂಲಕ ಸಾವಿರಾರು ಮಹಿಳೆಯರು ಮತ್ತು ಯುವಕರು ಸ್ವಾವಲಂಬಿಗಳಾಗುತ್ತಿದ್ದಾರೆ. ಈಶಾನ್ಯದ ಬಿದಿರು ಉತ್ಪನ್ನಗಳನ್ನು ಉಡುಗೊರೆಯಾಗಿ ನೀಡುವ ಮೂಲಕ ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸಿರಿ,'' ಎಂದು ಪ್ರಧಾನಿ ಕರೆ ನೀಡಿದರು.

ಬೈಲುಕುಪ್ಪೆ ಅರಣ್ಯ ಸಂರಕ್ಷಣೆಗೆ ಮೆಚ್ಚುಗೆ

ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯಲ್ಲಿರುವ ಟಿಬೇಟಿಯನ್ ಕ್ಯಾಂಪ್ ಕುರಿತು ಪ್ರಸ್ತಾಪಿಸಿದರು. ಇಲ್ಲಿ ಪರಿಸರ ಸಂರಕ್ಷಣೆ ಕ್ರಮಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ''ಬೌದ್ಧಸಂಪ್ರದಾಯವು ಪ್ರಕೃತಿಯೊಂದಿಗೆ ಬೆಸೆದುಕೊಳ್ಳಲು ಕಲಿಸುತ್ತದೆ',''ಎಂದು ಹೇಳಿದ ಅವರು, ಕರ್ನಾಟಕದ ಕರ್ಮ ಮತವಾದ ಟಿಬೇಟಿಯನ್ ಕ್ಯಾಂಪ್‌ನ ಉದಾಹರಣೆ ನೀಡಿದರು. ಅಲ್ಲಿ 100 ಎಕರೆ ಪ್ರದೇಶದಲ್ಲಿ ಅರಣ್ಯ ಸಂರಕ್ಷಿಸಲಾಗಿದ್ದು, 700ಕ್ಕೂ ಹೆಚ್ಚು ದೇಸಿ ಮರಗಳನ್ನು ಕಾಪಾಡಲಾಗಿದೆ. ಇದು ಮಾದರಿ ಕಾರ್ಯ ಎಂದು ಶ್ಲಾಘಿಸಿದರು. 1995ರಲ್ಲಿ ರಿನ್‌ಪೋಚೆ ಅವರು ಪರಿಸರ ಸಂರಕ್ಷಣೆ ಮತ್ತು ಪ್ರಕೃತಿ ಪುನರುಜ್ಜೀವನದ ಧ್ಯೇಯದೊಂದಿಗೆ ಸ್ಥಾಪಿಸಿದ ಬೋಧಿಸತ್ವ ಟ್ರಸ್ಟ್ ಅಡಿ ಬೈಲುಕುಪ್ಪೆ ಟಿಬೇಟಿಯನ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದೆ. ಈ ಟ್ರಸ್ಟ್ ನಳಂದ ಶಾಲೆಯನ್ನೂ ನಡೆಸುತ್ತಿದೆ.

ಮುಖ್ಯಾಂಶಗಳು

- **ಗಣಿತ ಒಲಿಂಪಿಯಾಡ್:** ಫ್ರಾನ್ಸ್‌ನಲ್ಲಿ ನಡೆದ ಯುರೋಪಿಯನ್ ಗರ್ಲ್ಸ್ ಮ್ಯಾಥಮೆಟಿಕಲ್ ಒಲಿಂಪಿಯಾಡ್‌ನಲ್ಲಿ ಭಾರತದ ಹೆಣ್ಣುಮಕ್ಕಳು 6ನೇ ಸ್ಥಾನ ಗಳಿಸಿ ಇತಿಹಾಸ ನಿರ್ಮಾಣ.
- **ವನ್ಯಜೀವಿ ಸಂರಕ್ಷಣೆ:** ಉತ್ತರಪ್ರದೇಶ 'ಗಜ ಮಿತ್ರ', ಛತ್ತೀಸ್‌ಗಢದ ಕೃಷ್ಣಮೃಗಗಳು ಮತ್ತು ರಾಜಸ್ಥಾನದ 'ಗ್ರೇಟ್ ಇಂಡಿಯನ್ ಬಸ್ಟರ್ಡ್' ಸಂರಕ್ಷಣಾ ಕಾರ್ಯಗಳು ಶ್ಲಾಘನೀಯ.
- **ಭಾರತೀಯ ಚೀಸ್:** ಬ್ರೆಜಿಲ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತೀಯ ಚೀಸ್ ಬ್ರಾಂಡ್ ಮಾದರಿಯಲ್ಲೇ ಕಾಶ್ಮೀರದ 'ಕಲಾರಿ' ಮತ್ತು ಸಿಕ್ಕಿಂನ 'ಛುರಪೀ' ರುಚಿಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕಿದೆ.
- **ರಾಷ್ಟ್ರೀಯ ದಾಖಲೆಗಳ ಡಿಜಿಟಲೀಕರಣ:** ಇತಿಹಾಸ ಆಸಕ್ತರಿಗಾಗಿ 200 ದಶಲಕ್ಷ ದಾಖಲೆಗಳನ್ನು 'ಅಭಿಲೇಖ್ ಪಟಲ್' ಪೋರ್ಟಲ್‌ನಲ್ಲಿ ಲಭ್ಯ.

ಪಾಕ್‌ಗೆ ಮತ್ತೆ ಭೇಟಿ ನೀಡಿದ ಇರಾನ್ ಸಚಿವ

ಇಸ್ಲಾಮಾಬಾದ್: ಅಮೆರಿಕ ಜತೆ 2ನೇ ಸುತ್ತಿನ ಸಂಧಾನ ಮಾತುಕತೆಗೂ ಮೊದಲೇ ಪಾಕಿಸ್ತಾನದಿಂದ ನಿರ್ಗಮಿಸಿದ್ದ ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘಚಿ ಅವರು ಭಾನುವಾರ ಇಸ್ಲಾಮಾಬಾದ್‌ಗೆ ಮತ್ತೆ ಭೇಟಿ ನೀಡಿದ್ದರು.

ಪಾಕ್ ನಾಯಕರ ಜತೆಗಿನ ಕ್ಷಿಪ್ರ ಭೇಟಿ ವೇಳೆ ಸಂಧಾನ ಮಾತುಕತೆ ವಿಚಾರದಲ್ಲಿ ದೇಶದ ಹಿತಾಸಕ್ತಿ ಕಡೆಗಣಿಸಿ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಇರಾನ್ ನಿಲುವನ್ನು ಪ್ರತಿಪಾದಿಸಿದರು.

ಶನಿವಾರ ನಿಗದಿಯಾಗಿದ್ದ ಮಾತುಕತೆಗೆ ಅಮೆರಿಕ ನಿಯೋಗ ಆಗಮಿಸುವ ಮೊದಲೇ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಸೇನಾ ಮುಖ್ಯಸ್ಥರನ್ನು ಭೇಟಿಯಾಗಿದ್ದ ಅಬ್ಬಾಸ್ ಅರಾಘಚಿ, ಸಂಧಾನ ಮಾತುಕತೆಗೆ ಇರಾನ್ ಷರತ್ತುಗಳನ್ನು ಮುಂದಿಟ್ಟಿದ್ದರು. ಬಳಿಕ ನಿಗದಿತ ಒಮನ್ ಪ್ರವಾಸದ ಅಂಗವಾಗಿ ಮಸ್ಕತ್‌ಗೆ ತೆರಳಿದ್ದರು.

66 ಲಕ್ಷ ಕೋಟಿ ರೂ. ವೆಚ್ಚ: ಇರಾನ್ ವಿರುದ್ಧದ ಸಮರಕ್ಕೆ ಅಮೆರಿಕ 66 ಲಕ್ಷ ಕೋಟಿ ರೂ. (70 ಶತಕೋಟಿ ಡಾಲರ್) ವೆಚ್ಚ ಮಾಡಿದೆ ಎಂದು ವರದಿಯಾಗಿದೆ. ಫೆ.28 ರಂದು ಆರಂಭವಾದ ಯುದ್ಧಕ್ಕೆ ಸೇನಾ ಕಾರ್ಯಾಚರಣೆ, ಕ್ಷಿಪಣಿ, ಡ್ರೋನ್, ಫೈಟರ್ ಜೆಟ್ ವಿಮಾನ, ಸಮರ ನೌಕೆಗಳು, ಬಾಂಬ್ ಸೇರಿದಂತೆ ಯುದ್ಧ ಪರಿಕರಗಳು, ಸಾಗಣೆ ವೆಚ್ಚವಾಗಿ ಭಾರಿ ಮೊತ್ತವನ್ನು ವ್ಯಯಿಸಲಾಗಿದೆ.

ಯುಎಇಗೆ ಭೇಟಿ ನೀಡಿರುವ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಅಲ್ಲಿನ ಅಧ್ಯಕ್ಷ ಮೊಹಮ್ಮದ್ ಬಿನ್ ಜಯೇದ್ ಅಲ್ ನಹ್ಯನ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಮ್ಯಾರಥಾನ್ ಯಶಸ್ವಿ »06

ಕಲ್ಯಾಣ ಮಂಟಪದಲ್ಲಿ ಕೋಟಿ ಮೌಲ್ಯದ ಚಿನ್ನಾಭರಣ ಕಳವು »06

ಸೂರಿನ ಕನಸಿಗೆ ಕೆಎಚ್‌ಬಿ ರೆಕ್ಕೆ

ಬಿ.ಎಂ.ಕಾವಲ್ ಟೌನ್‌ಶಿಪ್, 'ನಮ್ಮ ಮನೆ' ಮೂಲಕ 50 ಸಾವಿರ ಸೈಟ್ ಹಂಚಿಕೆಗೆ ಸಿದ್ಧತೆ

■ ಬಿ.ಎನ್.ಧನಂಜಯ, ಬೆಂಗಳೂರು
dhananjaya.gowda@timesofindia.com

ಬಿ.ಎಂ.ಕಾವಲ್ ಬಳಿ ಟೌನ್‌ಶಿಪ್ ಯೋಜನೆ ಮತ್ತು ನಮ್ಮ ಮನೆ ಯೋಜನೆಯಡಿ ರಿಯಾಯಿತಿ ದರದಲ್ಲಿ 50 ಸಾವಿರ ನಿವೇಶನ ಹಂಚಿಕೆ ಮಾಡಲು ಕರ್ನಾಟಕ ಗೃಹ ಮಂಡಳಿ(ಕೆಎಚ್‌ಬಿ) ಉದ್ದೇಶಿಸಿದ್ದು, ಇದು ನಿವೇಶನ ಮತ್ತು ಸ್ವಂತ ಸೂರು ಹೊಂದುವ ಮಧ್ಯಮ ಮತ್ತು ಸಮುದಾಯದ ಶ್ರಮಿಕ ವರ್ಗದ ಕನಸಿಗೆ ರೆಕ್ಕೆ ಕಟ್ಟಿದೆ.

ಈಗಾಗಲೇ ಕೆಎಚ್‌ಬಿಯು ಆನೇಕಲ್ ತಾಲೂಕಿನ ಸೂರ್ಯನಗರ 2ನೇ ಹಂತದ ರಾಜಾಪುರ, ನಾಲ್ಕನೇ ಹಂತ ಸೇರಿದಂತೆ ವಿವಿಧ ಹಂತಗಳಲ್ಲಿ ನಿವೇಶನ ಹಂಚಿಕೆ ಮತ್ತು ಫ್ಲ್ಯಾಟ್ ನಿರ್ಮಾಣ ಮಾಡಿ ಹಂಚಿಕೆ ಮಾಡುವ ಯೋಜನೆಗಳಿಗೆ ಚಾಲನೆ ನೀಡಿದೆ. ಇದರ ಜತೆಗೆ ಹಮ್ಮಿಕೊಳ್ಳಲು ಉದ್ದೇಶಿಸಿರುವ ಬಿ.ಎಂ.ಕಾವಲ್ ಮತ್ತು ನಮ್ಮ ಮನೆ ಯೋಜನೆಯಡಿ ರಿಯಾಯಿತಿ ದರದಲ್ಲಿ 50 ಸಾವಿರ ನಿವೇಶನ ಹಂಚಿಕೆ ಯೋಜನೆಗಳನ್ನೂ ಹಮ್ಮಿಕೊಳ್ಳುವ ಮೂಲಕ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನರ ಕನಸನ್ನು ನನಸು ಮಾಡಲು ಸಜ್ಜಾಗಿದೆ.

ಕೆಂಗೇರಿ ಹೋಬಳಿಯ ಬಿ.ಎಂ. ಕಾವಲ್, ಚಿನ್ನಕುರ್ಚಿ, ವಸಂತನಹಳ್ಳಿ, ದೇವಗೆರೆ, ಕೆ.ಗೊಲ್ಲಹಳ್ಳಿ, ಬಿಡದಿಯ ಕೊಡಿಯಾಲ ಇತರೆ ಗ್ರಾಮಗಳ ವ್ಯಾಪ್ತಿಯ 500 ಎಕರೆಯಲ್ಲಿ ಅತ್ಯಾಧುನಿಕ ಮಾದರಿಯ ಟೌನ್‌ಶಿಪ್ ಮಾಡಲು ನಿರ್ಧರಿಸಿರುವ ಮಂಡಳಿ, ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆಯನ್ನೂ ನೀಡಿದೆ. ಇಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಫ್ಲ್ಯಾಟ್ ಹಂಚಿಕೆ ಮಾಡುವ ಉದ್ದೇಶವನ್ನು ಕೆಎಚ್‌ಬಿ ಹೊಂದಿದೆ. ಈಗಾಗಲೇ ಡಿಪಿಆರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎರಡ್ಮೂರು ತಿಂಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಗಿಯುವ ಸಾಧ್ಯತೆ ಇದೆ. ಈ ಯೋಜನೆಗೆ ಅಂದಾಜು 1,066 ಕೋಟಿ ರೂ.ವೆಚ್ಚವಾಗಲಿದೆ ಎಂದು ಲೆಕ್ಕಾಚಾರ ಮಾಡಲಾಗಿದೆ. ಸರಕಾರದಿಂದ ಯಾವುದೇ ಹಣಕಾಸು ನೆರವು ನಿರೀಕ್ಷಿಸದೆ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎನ್ನುತ್ತವೆ ಮಂಡಳಿಯ ಮೂಲಗಳು.

ಸಾಂದರ್ಭಿಕ ಚಿತ್ರ

ಟೌನ್‌ಶಿಪ್‌ನಲ್ಲಿ ಹಲವು ಸೌಲಭ್ಯ

ಅತ್ಯಾಧುನಿಕ ಮಾದರಿಯಲ್ಲಿ ಬಿ.ಎಂ.ಕಾವಲ್ ಟೌನ್‌ಶಿಪ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ವಸತಿ ಸಮುಚ್ಚಯ, ವಾಣಿಜ್ಯ ಮತ್ತು ಐಟಿ ಕೇಂದ್ರ , ಕ್ಲಬ್‌ಹೌಸ್, ಮನರಂಜನಾ ಪಾರ್ಕ್, ಈಜುಕೊಳ ಸೇರಿದಂತೆ ಇನ್ನಿತರೆ ಆಧುನಿಕ ಸೌಕರ್ಯವನ್ನು ಒಳಗೊಂಡಿರಲಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರಿಗೆ 5 ಸಾವಿರ ನಿವೇಶನ

ಗೃಹ ಮಂಡಳಿ 'ನಮ್ಮ ಮನೆ ಯೋಜನೆ'ಯಡಿ ಬಡ, ಮಧ್ಯಮ ವರ್ಗದ ಸಮುದಾಯದ ಶ್ರಮಿಕ ವರ್ಗದವರಿಗೆ ರಾಜ್ಯಾದ್ಯಂತ ರಿಯಾಯಿತಿ ದರದಲ್ಲಿ 1 ಲಕ್ಷ ನಿವೇಶನ ಹಾಗೂ 10 ಸಾವಿರ 2 ಬಿಎಚ್‌ಕೆ ಫ್ಲ್ಯಾಟ್ (ವಸತಿ ಸಮುಚ್ಚಯ ಆಧಾರಿತ) ಹಂಚಿಕೆ ಮಾಡುವ ಪ್ರಸ್ತಾವನೆಯನ್ನು ರಾಜ್ಯ ಸರಕಾರದ ಮುಂದಿಟ್ಟಿತ್ತು. ಆದರೆ, ಫ್ಲ್ಯಾಟ್ ಹಂಚಿಕೆ ಪ್ರಸ್ತಾವನೆ ಕೈಬಿಟ್ಟು ರಿಯಾಯಿತಿ ದರದಲ್ಲಿ 50 ಸಾವಿರ ನಿವೇಶನ ಹಂಚಿಕೆ ಮಾಡಲು ಅನುಮತಿ ನೀಡಿದ ರಾಜ್ಯ ಸರಕಾರ, ಈಗಾಗಲೇ ಬಜೆಟ್‌ನಲ್ಲಿಯೂ ಘೋಷಣೆ ಮಾಡಿದೆ. ಈ ಯೋಜನೆಯಡಿ ಎಲ್ಲ ಜಿಲ್ಲೆಗಳಿಗೂ ನಿವೇಶನ ಹಂಚಿಕೆಯಾಗಲಿದ್ದು, ಬೆಂಗಳೂರು ನಗರಕ್ಕೆ 5 ಸಾವಿರ ನಿವೇಶನ ಹಂಚಿಕೆಯಾಗಲಿದೆ. ಎರಡ್ಮೂರು ತಿಂಗಳಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಗಗನಕ್ಕೇರಿದ ನಿವೇಶನ ಬೆಲೆ

ಈಗಾಗಲೇ ನಗರದ ಹೊರವಲಯದಲ್ಲಿ ಖಾಸಗಿ ಬಡಾವಣೆಗಳ ಹಾವಳಿ ಹೆಚ್ಚಾಗಿದ್ದು, ಬೆಲೆಗಳು ಗಗನಕ್ಕೇರಿವೆ. ಇಂತಹ ಸಮಯದಲ್ಲಿ ಮಂಡಳಿಯು ಈ ಎರಡೂ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿದರೆ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಹೊಸ ಸಂಚಲನ ಉಂಟು ಮಾಡಲಿದೆ. ಅಲ್ಲದೆ, ಸರಕಾರಿ ಅಧೀನದ ಪ್ರಾಧಿಕಾರ ರಿಯಾಯಿತಿ ದರದಲ್ಲಿ ನಿವೇಶನ ಹಂಚಿಕೆ ಮಾಡುವುದರಿಂದ ಖಾಸಗಿ ನಿವೇಶನಗಳ ದರ ನಿಯಂತ್ರಣಕ್ಕೆ ಬರಲಿದೆ. ಆದರೆ, ಮಂಡಳಿಯು ಯೋಜನೆಗಳನ್ನು ಶೀಘ್ರ ಅನುಷ್ಠಾನ ಮಾಡುವ ಬದ್ಧತೆ ತೋರಬೇಕಿದೆ.





10 ಕೆ ಮ್ಯಾರಥಾನ್ ಯಶಸ್ವಿ

ಬೆಂಗಳೂರು: ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಏರ್ಪಡಿಸಿದ್ದ 'ಟಿಸಿಎಸ್ ವರ್ಲ್ಡ್ 10 ಕೆ' ಮ್ಯಾರಥಾನ್‌ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ''ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಈಗ ಬೆಂಗಳೂರಿನ ಗುರುತಾಗಿದೆ. ಈ ಓಟವನ್ನು ದೇಶದಲ್ಲಿ ಮಾತ್ರವಲ್ಲದೆ ವಿಶ್ವದ ಅತಿದೊಡ್ಡ ಓಟಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತಿದೆ. ಈ ಓಟದಲ್ಲಿ ಯುವಜನತೆಯ ಜತೆಗೆ ವಿಶೇಷಚೇತನರು, ಹಿರಿಯ ನಾಗರಿಕರು ಭಾಗವಹಿಸಿರುವುದು ಬಹಳ ಹರ್ಷದಾಯಕವಾಗಿದೆ,'' ಎಂದರು.

ಮ್ಯಾರಥಾನ್ ಉದ್ಘಾಟನೆಯ ನಂತರ ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ''ಟಿಸಿಎಸ್‌ನ 10ಕೆ ಮ್ಯಾರಥಾನ್‌ನಲ್ಲಿ ಭಾಗವಹಿಸಲು ಬೆಳಗಿನ ಜಾವ 3 ಗಂಟೆಗೆ ದಿಲ್ಲಿಯಿಂದ ವಾಪಸ್ ಬಂದಿದ್ದೇನೆ. ಮೊದಲೇ ಒಪ್ಪಿಕೊಂಡಿದ್ದರಿಂದ ನಾನು ಹಾಗೂ ರಾಜ್ಯಪಾಲರು ಭಾಗಿಯಾಗಿದ್ದೇವೆ,'' ಎಂದರು.

ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಯದುವೀರ್ ಒಡೆಯರ್, ಕಾಶ್ಮೀರ ಸಿಎಂ ಉಮರ್ ಅಬ್ದುಲ್ಲಾ, ಶಾಸಕ ಎನ್.ಎ. ಹ್ಯಾರಿಸ್ ಪಾಲ್ಗೊಂಡಿದ್ದರು. ಇದೇ ವೇಳೆ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18 ನೇ ಆವೃತ್ತಿಯ ಮ್ಯಾರಥಾನ್ ಓಟದ ವಿಜೇತರಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಮ್ಯಾರಥಾನ್‌ನಲ್ಲಿ ಜನಪ್ರತಿನಿಧಿಗಳು, ಖಾಸಗಿ ಕಂಪನಿ ಉದ್ಯೋಗಿಗಳು, ವಿದ್ಯಾರ್ಥಿಗಳೂ ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಸಾಮಾಜಿಕ ಸಂದೇಶ ಸಾರುವ ಬರಹಗಳು, ವೇಷಭೂಷಣಗಳು ಗಮನಸೆಳೆದವು.

ಕೆಎಸ್‌ಟಿಡಿಸಿ ಒಂದು ದಿನದ ಪ್ರವಾಸ ಯೋಜನೆ ಆರಂಭ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಯಶವಂತಪುರದಿಂದ ಬನ್ನೇರುಘಟ್ಟ- ಮುತ್ತ್ಯಾಲಮಡುವಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಒಂದು ದಿನ ವ್ಯವಸ್ಥಿತ ಪ್ರವಾಸ ಯೋಜನೆ ಆರಂಭಿಸಿದೆ. ಮಂಗಳವಾರ ಹೊರತುಪಡಿಸಿ, ವಾರದ ಆರು ದಿನ ಪ್ರವಾಸ ಸೇವೆ ಇರಲಿದೆ. ಹವಾನಿಯಂತ್ರಿತ ಬಸ್‌ನಲ್ಲಿ ಪ್ರವಾಸಿಗರನ್ನು ಕರೆದೊಯ್ಯಲಾಗುತ್ತಿದೆ.

ಒಂದು ದಿನದ ಪ್ರವಾಸದಲ್ಲಿ ಬನ್ನೇರುಘಟ್ಟ ಮೃಗಾಲಯ, ಸಫಾರಿ, ಚಿಟ್ಟೆ ಉದ್ಯಾನ ವೀಕ್ಷಣೆ, ಮುತ್ತ್ಯಾಲಮಡುವು ಬೋಟಿಂಗ್ ಜತೆಗೆ, ಸೂರ್ಯಾಸ್ತ ವೀಕ್ಷಿಸಬಹುದು. ಈ ಪ್ರವಾಸ ಕೈಗೊಳ್ಳಲು ಇಚ್ಛಿಸುವ ಪ್ರತಿಯೊಬ್ಬರಿಗೆ 1,680 ರೂ. ತಗಲುತ್ತದೆ. ಇದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಮೃಗಾಲಯ ವೀಕ್ಷಣೆ, ಸಫಾರಿ ಸೇವೆ, ಚಿಟ್ಟೆ ಉದ್ಯಾನದ ಪ್ರವೇಶ ಶುಲ್ಕ, ಮುತ್ತ್ಯಾಲಮಡುವಿನಲ್ಲಿ ಕೈಗೊಳ್ಳಲಾಗುವ ಬೋಟಿಂಗ್ ಶುಲ್ಕ, ಬೆಳಗಿನ ಉಪಾಹಾರ, ಮಧ್ಯಾಹ್ನದ ಭೋಜನ ಹಾಗೂ ಸಂಜೆಯ ಲಘು ಉಪಾಹಾರ ಶುಲ್ಕವನ್ನು ಒಳಗೊಂಡಿದೆ.

ಯಶವಂತಪುರದಿಂದ ಬೆಳಗ್ಗೆ 7.15ಕ್ಕೆ ಪ್ರವಾಸ ಪ್ರಾರಂಭವಾಗಲಿದೆ. ಕೆಂಪೇಗೌಡ ಬಸ್ ನಿಲ್ದಾಣ (ಬೆಳಗ್ಗೆ 7.30), ಶಾಂತಿನಗರ ಬಸ್ ನಿಲ್ದಾಣ (ಬೆಳಗ್ಗೆ 7.45ಕ್ಕೆ) ಮತ್ತು ಜಯನಗರ ಬಸ್ ನಿಲ್ದಾಣ (ಬೆಳಗ್ಗೆ 8)ದಲ್ಲಿ ಪಿಕ್‌ಅಪ್ ಸೌಲಭ್ಯವಿರುತ್ತದೆ. ಪ್ರವಾಸವನ್ನು ನಿಗಮದ ಮೂಲಕ ಕೈಗೊಳ್ಳುವುದರಿಂದ ಬನ್ನೇರುಘಟ್ಟ ಉದ್ಯಾನದ ಎಲ್ಲಾ ಪ್ರವೇಶದ್ವಾರಗಳಲ್ಲಿ ವಿಳಂಬವಿಲ್ಲದೆ ನೇರವಾಗಿ ಪ್ರವೇಶಿಸಲು ಅನುಕೂಲವಾಗಲಿದೆ.

ಈ ಪ್ರವಾಸ ಸದುಪಯೋಗ ಪಡೆಯಲು ಇಚ್ಛಿಸುವ ಪ್ರವಾಸಿಗರು ನಿಗಮದ ಯಶವಂತಪುರ ಬುಕ್ಕಿಂಗ್ ಕೌಂಟರ್, ನಿಗಮ ಅಧಿಕೃತ ಟ್ರಾವೆಲ್ ಏಜೆಂಟ್‌ಗಳು ಹಾಗೂ ನಿಗಮದ ವೆಬ್‌ಸೈಟ್ ಮೂಲಕ ಮುಂಗಡ ಬುಕ್ಕಿಂಗ್ ಮಾಡಿಕೊಳ್ಳಬಹುದು. ಮಾಹಿತಿಗೆ www.kstdc.co ಅಥವಾ 080 4334 4334/35, 8970650070, 8970650075, 8970650021ಗೆ ಸಂಪರ್ಕಿಸಬಹುದು.

ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿನಿಗೆ ಶಾಸಕರ ಅಭಿನಂದನೆ

ಪೀಣ್ಯ ದಾಸರಹಳ್ಳಿ: 625 ಕ್ಕೆ 621 ಅಂಕ ಪಡೆದ ಮಂಜುನಾಥ ನಗರದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಹರ್ಷಿಣಿ ಅವರ ಮನೆಗೆ ತೆರಳಿ ಶಾಸಕ ಎಸ್.ಮುನಿರಾಜು ದಂಪತಿ ಅಭಿನಂದಿಸಿದರು.

ಹರ್ಷಿಣಿ ಪೋಷಕರಾದ ಮಂಜುನಾಥ್ ಹಾಗೂ ಚೈತ್ರ ನೆಲಗದರನಹಳ್ಳಿಯಲ್ಲಿ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದರೂ ಉತ್ತಮ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಶಾಸಕರು ವಿದ್ಯಾರ್ಥಿನಿಯನ್ನು ಅಭಿನಂದಿಸಿದರು. ಜತೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಲ್ಯಾಪ್‌ಟಾಪ್ ನೀಡಿದರು.

ಎಸ್ಸೆಸ್ಸೆಲ್ಸಿ ಫಲಿತಾಂಶ
ಸ್ಪಂದನಾ ರಾವ್ ಎಸ್.ಎಚ್.
(97%)
ಮಹಿಳಾ ಮಂಡಳಿ ವಿದ್ಯಾಸಂಸ್ಥೆ, ಎನ್.ಆರ್.ಕಾಲೊನಿ

ಕಲ್ಯಾಣ ಮಂಟಪದಲ್ಲಿ ಕೋಟಿ ಮೌಲ್ಯದ ಚಿನ್ನಾಭರಣ ಕಳವು

■ **ವಿಕ ಸುದ್ದಿಲೋಕ** ಬೆಂಗಳೂರು

> ■ **ಸಂಬಂಧಿಕರ ಮದುವೆಗೆ ಬಂದಿದ್ದ ಎನ್‌ಆರ್‌ಐ ವೈದ್ಯೆಗೆ ಆಘಾತ**

ಹಳೆ ಮದ್ರಾಸ್ ರಸ್ತೆ ಬಳಿಯ ಬಿದರಹಳ್ಳಿಯ ಕಲ್ಯಾಣ ಮಂಟಪದಲ್ಲಿ ಕೈಚಳಕ ತೋರಿರುವ ಕಳ್ಳರು, ಬರೋಬ್ಬರಿ 1 ಕೋಟಿ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದು, ಈ ಸಂಬಂಧ ವೈದ್ಯೆ, ಸಿರುವೆಲ್ಲ ಶ್ರೀದೇವಿ ಎಂಬುವರು ಆವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸಿರುವೆಲ್ಲ ಶ್ರೀದೇವಿ, ಎಸ್‌ಡಿಪಿ ಕಲ್ಯಾಣ ಮಂಟಪದಲ್ಲಿ ಏರ್ಪಾಡಾಗಿದ್ದ ಸಹೋದರಿಯ ಮಗನ ಮದುವೆಗಾಗಿ ದೂರದ ಅಮೆರಿಕದಿಂದ ಏ.18ರಂದು ನಗರಕ್ಕೆ ಬಂದಿದ್ದರು. ಬಳ್ಳಾರಿ ರಸ್ತೆಯ ಗಂಗಾನಗರದಲ್ಲಿನ ಸಹೋದರರ ಮನೆಯಲ್ಲಿ ತಂಗಿದ್ದ ಅವರು, ಮದುವೆ ಸಮಾರಂಭದಲ್ಲಿ ಭಾಗಿಯಾಗಲು ಏ.22ರಂದು ಎಸ್‌ಡಿಪಿ ಕಲ್ಯಾಣ ಮಂಟಪಕ್ಕೆ ಹೋಗಿದ್ದರು.

ಏ.22ರಂದು ಸಂಜೆ ಸಿರುವೆಲ್ಲ ಶ್ರೀದೇವಿಯವರ ಸಹೋದರ ಕೆ. ಶ್ರೀನಿವಾಸಮೂರ್ತಿ, ಚಿನ್ನದ ಆಭರಣಗಳಿದ್ದ ಪೆಟ್ಟಿಗೆಯನ್ನು ಕಲ್ಯಾಣ ಮಂಟಪದಲ್ಲಿ ಅವರಿಗೆ ಕೊಟ್ಟಿದ್ದರು. ಪೆಟ್ಟಿಗೆಯಲ್ಲಿದ್ದ ಆಭರಣಗಳ ಪೈಕಿ ಕೆಲವನ್ನು ಧರಿಸಿದ್ದ ಸಿರುವೆಲ್ಲ ಶ್ರೀದೇವಿ, ಉಳಿದ ಆಭರಣಗಳನ್ನು ಕೊಠಡಿಯಲ್ಲಿ ಇಟ್ಟು ಬೀಗ ಹಾಕಿಕೊಂಡು ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದರು. ನಂತರ ರಾತ್ರಿ 11.30ರ ಸುಮಾರಿಗೆ ಅವರು ಕೊಠಡಿಗೆ ಹಿಂದಿರುಗಿದಾಗ ಆಭರಣಗಳಿದ್ದ ಪೆಟ್ಟಿಗೆ ಕಳವಾಗಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾನು ಕಲ್ಯಾಣ ಮಂಟಪದ ಕೊಠಡಿಯಲ್ಲಿ ಇರುವಾಗ ಕೆಲಸದ ಮಹಿಳೆಯೊಬ್ಬರು ಕೊಠಡಿಗೆ ಬಂದಿದ್ದರು. ಅವರೇ ಆಭರಣಗಳನ್ನು ಕಳವು ಮಾಡಿರುವ ಶಂಕೆಯಿದೆ ಎಂದು ಸಿರುವೆಲ್ಲ ಶ್ರೀದೇವಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಾರೆ 725 ಗ್ರಾಂ ಚಿನ್ನಾಭರಣ ಕಳವಾಗಿದ್ದು, ಅವುಗಳ ಮೌಲ್ಯ ಸುಮಾರು 1 ಕೋಟಿ ರೂ. ಎಂದು ಅಂದಾಜಿಸಲಾಗಿದೆ.

ದೂರುದಾರರ ಪರಿಚಿತರು ಅಥವಾ ಕುಟುಂಬ ಸದಸ್ಯರಲ್ಲೇ ಯಾರಾದರೂ ಈ ಕೃತ್ಯ ಎಸಗಿರಬಹುದೆಂಬ ಶಂಕೆಯಿದೆ. ಕಲ್ಯಾಣ ಮಂಟಪದ ಸಿ.ಸಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗಿದೆ. ಜತೆಗೆ, ಸಿರುವೆಲ್ಲ ಶ್ರೀದೇವಿ ಅವರ ಕೊಠಡಿ ಪ್ರವೇಶಿಸಿದ್ದವರ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಕೃತ್ಯದಲ್ಲಿ ಕಲ್ಯಾಣ ಮಂಟಪದ ಸಿಬ್ಬಂದಿಯ ಪಾತ್ರವಿಲ್ಲ. ದೂರುದಾರರಾದ ಶ್ರೀದೇವಿ ಅವರ ಕೊಠಡಿ ಲಾಕ್ ಆಗಿತ್ತು. ಕೊಠಡಿಯ ಬೀಗದ ಕೀ ದೂರುದಾರರ ಬಳಿಯೇ ಇತ್ತು ಎಂದು ಎಸ್‌ಡಿಪಿ ಕಲ್ಯಾಣ ಮಂಟಪದ ವ್ಯವಸ್ಥಾಪಕರು ತಿಳಿಸಿದ್ದಾರೆ,'' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಬೆಂಗಳೂರು: ನಗರದ ಪೀಣ್ಯ ಹಾಗೂ ಚಿಕ್ಕಬಾಣಾವರದಲ್ಲಿ ಶನಿವಾರ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ವೃದ್ಧೆ ಸೇರಿದಂತೆ ಇಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಬಾಣಾವರದ ಕಾಮಾಕ್ಷಿ ಫಂಕ್ಷನ್ ಹಾಲ್ ಬಳಿ ಕಾರು ಡಿಕ್ಕಿ ಹೊಡೆದು ಕನ್ಯಾ ಪ್ರಕಾಶ್ (65) ಎಂಬುವರು ಸಾವನ್ನಪ್ಪಿದ್ದಾರೆ. ಅಬ್ಬಿಗೆರೆ ನಿವಾಸಿಯಾಗಿದ್ದ ಅವರು ಚಿಕ್ಕಬಾಣಾವರದ ಸಂಬಂಧಿಕರ ಮನೆಗೆ ಹೋಗಿದ್ದರು. ನಂತರ ಅಲ್ಲಿಂದ ಅವರು ಅಬ್ಬಿಗೆರೆಗೆ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ರಸ್ತೆ ದಾಟಲು ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಕನ್ಯಾ ಪ್ರಕಾಶ್ ಅವರಿಗೆ ಕಾರು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಅವರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು. ಚಿಕ್ಕಬಾಣಾವರ ಠಾಣೆ ಪೊಲೀಸರು ಕಾರು ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಿದ್ದಾರೆ. ದೂರು ದಾಖಲಾಗಿದೆ.

ಕಾರ್ಮಿಕನ ಸಾವು: ಪೀಣ್ಯ ಕೈಗಾರಿಕಾ ಪ್ರದೇಶದ ಎನ್‌ಟಿಟಿಎಫ್ ಜಂಕ್ಷನ್‌ನಲ್ಲಿ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಸವಾರ ಸಂದೀಪ್ (20) ಸಾವನ್ನಪ್ಪಿದ್ದಾರೆ.

ಮೂಲತಃ ರಾಯಚೂರು ಜಿಲ್ಲೆಯ ಸುರಪುರದ ಸಂದೀಪ್, ನಗರದ ರಾಜಗೋಪಾಲನಗರದಲ್ಲಿ ವಾಸವಾಗಿದ್ದರು. ಪೀಣ್ಯದ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಅವರು ಸ್ನೇಹಿತನ ಜತೆ ದಾಸರಹಳ್ಳಿಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ಅಜಾಗರೂಕತೆಯಿಂದ ಅತಿ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದ ಸಂದೀಪ್, ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ವಾಹನ ಗುದ್ದಿಸಿದ್ದಾರೆ. ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಅವರು ಭಾನುವಾರ ಬೆಳಗಿನ ಜಾವ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಸಂದೀಪ್, ಹೆಲ್ಮೆಟ್ ಧರಿಸಿರಲಿಲ್ಲ, ಹೀಗಾಗಿ, ಅವರ ತಲೆಗೆ ತೀವ್ರ ಪೆಟ್ಟಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯನಗರದ ಪತ್ರಿಕಾ ವಿತರಕರು ರಾಮನವಮಿಯನ್ನು ವಿಜೃಂಭಣೆಯಿಂದ ಆಚರಿಸಿದರು. ಜತೆಗೆ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಿದರು.

ಎಲ್ಲಿ-ಏನು?
ಸೋಮವಾರ

ಬಸವ ವೇದಿಕೆ: ಬಸವ ಜಯಂತಿ ಹಾಗೂ ಬಸವಶ್ರೀ ಮತ್ತು ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ. ಸಾನ್ನಿಧ್ಯ : ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ ಮತ್ತು ಬಸವಶ್ರೀ ಪ್ರಶಸ್ತಿ ಪ್ರದಾನ : ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಉದ್ಘಾಟನೆ : ಕೇಂದ್ರ ಸಚಿವ ವಿ.ಸೋಮಣ್ಣ. ಬಸವಶ್ರೀ ಪ್ರಶಸ್ತಿ ಪುರಸ್ಕೃತರು : ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಚನ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು: ಶಿಕ್ಷಣ ತಜ್ಞ ಗುರುರಾಜ ಕರ್ಜಗಿ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. ಸಂಜೆ 5.30.

ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರ: 888 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ನಿರ್ಮಾಣ ಯೋಜನೆ ಮತ್ತು ಪಂಚಶೀಲ ಪಾದಯಾತ್ರೆ ಪ್ರಾರಂಭೋತ್ಸವ ಕಾರ್ಯಕ್ರಮ. ಉದ್ಘಾಟನೆ: ಸಿಎಂ ಸಿದ್ದರಾಮಯ್ಯ . ಮೂರ್ತಿ ನಿರ್ಮಾಣ ಯೋಜನೆ ಅನಾವರಣ: ಡಿಸಿಎಂ ಡಿ.ಕೆ. ಶಿವಕುಮಾರ್. ಪಂಚಶೀಲ ಪಾದಯಾತ್ರೆ ಉದ್ಘಾಟನೆ : ಗೃಹ ಸಚಿವ ಡಾ.ಜಿ.ಪರಮೇಶ್ವರ
ಸ್ಥಳ: ನಾಗಸೇನ ಬುದ್ಧ ವಿಹಾರ, ಸದಾಶಿವನಗರ. ಬೆಳಗ್ಗೆ 10.30

ಕರ್ನಾಟಕ ನಾಟಕ ಅಕಾಡೆಮಿ: ವಿಶ್ವ ರಂಗಭೂಮಿ ದಿನಾಚರಣೆ. ಉದ್ಘಾಟನೆ : ರಂಗ ಸಮಾಜದ ಸದಸ್ಯೆ ಲಕ್ಷ್ಮೀ ಚಂದ್ರಶೇಖರ್.
ಸ್ಥಳ: ಸಂಸ ಬಯಲು ರಂಗಮಂದಿರ. ರವೀಂದ್ರ ಕಲಾಕ್ಷೇತ್ರ. ಜೆ.ಸಿ.ರಸ್ತೆ. ಸಂಜೆ 5.

'ಶ್ರೇಷ್ಠತೆ ಸೊಕ್ಕು ಮಾನವನ ಆಂತರಿಕ ರೋಗ'

■ **ವಿಕ ಸುದ್ದಿಲೋಕ** ಬೆಂಗಳೂರು

ಶ್ರೇಷ್ಠತೆಯ ಸೊಕ್ಕು ಕೇವಲ ಸಾಮಾಜಿಕ ಸಮಸ್ಯೆಯಲ್ಲ, ಅದು ಆಂತರಿಕ ರೋಗವಾಗಿದ್ದು, ಮಾನವನ ಆತ್ಮವನ್ನು ಕ್ರಮೇಣ ಕುಗ್ಗಿಸುವ ಕ್ರಮ ಎಂದು ಸಾಹಿತಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರ 'ಶ್ರೇಷ್ಠತೆಯ ಸೊಕ್ಕು' ಲೇಖನಗಳ ಸಂಕಲನ ಬಿಡುಗಡೆ ಮಾಡಿ ಮಾತನಾಡಿದರು. ''ಶ್ರೇಷ್ಠತೆಯ ಸೊಕ್ಕು ಎಂದರೆ ಇತರರನ್ನು ಕುಗ್ಗಿಸುವ ಮೂಲಕ ತಾನೇ ಉನ್ನತನೆಂದು ಭಾವಿಸುವ ಮನೋಭಾವನೆ. ಮಾನವನ ಇತಿಹಾಸ ನೋಡಿದಾಗ ಶ್ರೇಷ್ಠತೆಯ ಭ್ರಮೆ ಅಮಾನವೀಯ, ಕರಾಳ ಮೃಗವಾಗಿ ರೂಪುಗೊಂಡಿದೆ,'' ಎಂದರು.

ವಿಮರ್ಶಕ ಡಾ. ರಾಜೇಂದ್ರ ಚೆನ್ನಿ ಮಾತನಾಡಿ, ''ಆಯಾ ಕಾಲಘಟ್ಟದಲ್ಲಿ ನಡೆದ ಘಟನೆಗಳಿಗೆ ಲೇಖಕರು ಅತ್ಯಂತ ಸಂವೇದನಾಶೀಲ ಪ್ರತಿಕ್ರಿಯೆ ನೀಡಿದ್ದಾರೆ. ವಿಶೇಷವಾಗಿ ರಾಜಕೀಯ ಸಿದ್ಧಾಂತಗಳು ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಬಗ್ಗೆ ಬರೆದಿರುವ ಲೇಖನಗಳು ಇಂದಿನ ಕಾಲಕ್ಕೆ ಬಹಳ ಮುಖ್ಯವಾಗಿವೆ,'' ಎಂದು ತಿಳಿಸಿದರು.

ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ, ''ಯಾವತ್ತೂ ಚರಿತ್ರೆಯ ಕೊಂಡಿಗಳನ್ನು 'ಶ್ರೇಷ್ಠತೆಯ ಸೊಕ್ಕಿನಿಂದ' ಕಳಚಬಾರದು ಎಂದು ನಂಬಿದವನು ನಾನು. ಚಾರಿತ್ರಿಕ ಬೆಳವಣಿಗೆಯೊಂದನ್ನು ತಿರಸ್ಕರಿಸುವ ಧೋರಣೆಯೇ ನಿಜ ಅರ್ಥದಲ್ಲಿ ಸೊಕ್ಕು,'' ಎಂದು ವಿವರಿಸಿದರು. ಅನುವಾದಕ ಡಾ. ಎಚ್. ಎಸ್. ರಾಘವೇಂದ್ರರಾವ್, ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರು.



ಬರಗೂರು ರಾಮಚಂದ್ರಪ್ಪ ಅವರ 'ಶ್ರೇಷ್ಠತೆಯ ಸೊಕ್ಕು' ಲೇಖನಗಳ ಸಂಕಲನ ಬಿಡುಗಡೆ ಮಾಡಲಾಯಿತು.

ಕೇರಳ, ತ.ನಾಡು ವಿದ್ಯಾರ್ಥಿಗಳ ಮಾರಾಮಾರಿ

ಬೆಂಗಳೂರು: ಕೋಣನಕುಂಟೆ ಬಳಿಯ ಕೆಂಬತ್ತಹಳ್ಳಿಯಲ್ಲಿ ಕೇರಳ ಹಾಗೂ ತಮಿಳುನಾಡು ಮೂಲದ ಕಾಲೇಜು ವಿದ್ಯಾರ್ಥಿಗಳ ಗುಂಪಿನ ನಡುವೆ ಮಾರಾಮಾರಿ ನಡೆದಿದ್ದು, ಒಂದು ಗುಂಪು ಮತ್ತೊಂದು ಗುಂಪಿನ ವಿದ್ಯಾರ್ಥಿಗಳ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹಣ, ಮೊಬೈಲ್ ಮತ್ತು ಲ್ಯಾಪ್‌ಟಾಪ್‌ಗಳನ್ನು ದೋಚಿದೆ.

ಏ.17ರಂದು ಈ ಘಟನೆ ನಡೆದಿದ್ದು, ಕೋಣನಕುಂಟೆ ಠಾಣೆ ಪೊಲೀಸರು ತಮಿಳುನಾಡು ಮೂಲದ ಅಭಿನೇಶ್, ಕಲೈವೆಂದನ್, ವಿಮಲ್‌ರಾಜ್, ಕುಮಾರನ್, ಪ್ರೇಮ್‌ಕುಮಾರ್ ಮತ್ತು ನವೀನ್‌ಕುಮಾರ್ ಎಂಬುವರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 3 ಲಕ್ಷ ರೂ. ಮೌಲ್ಯದ ಎರಡು ದ್ವಿಚಕ್ರ ವಾಹನ, ನಾಲ್ಕು ಮೊಬೈಲ್ ಹಾಗೂ ಎರಡು ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ. ಬಂಧಿತರು ಕೇರಳದ ಇರ್ಫಾನ್ ಮೊಹಮ್ಮದ್, ಆದರ್ಶ್, ಡಾರ್ವಿನ್ ಮತ್ತು ಸ್ನೇಹಿತರ ಮೇಲೆ ಹಲ್ಲೆ ನಡೆಸಿದ್ದರು.

ನಗರದ ಖಾಸಗಿ ಕಾಲೇಜಿನಲ್ಲಿ ಓದುತ್ತಿರುವ ಇರ್ಫಾನ್ ಮತ್ತು ಸ್ನೇಹಿತರು ಕೆಂಬತ್ತಹಳ್ಳಿ ಮುಖ್ಯ ರಸ್ತೆಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ದೂರುದಾರ ಇರ್ಫಾನ್ ಮತ್ತು ಆರೋಪಿ ಅಭಿನೇಶ್ ಒಂದೇ ಕಾಲೇಜಿನವರು. ಅವರ ಮಧ್ಯೆ ಕಾಲೇಜಿನಲ್ಲಿ ಕೆಲ ದಿನಗಳ ಹಿಂದೆ ಸಣ್ಣ ವಿಚಾರಕ್ಕೆ ಗಲಾಟೆಯಾಗಿ ಕೇರಳ ವಿದ್ಯಾರ್ಥಿಗಳು ಅಭಿನೇಶ್‌ಗೆ ಥಳಿಸಿದ್ದರು. ಇದರಿಂದ ಕೋಪಗೊಂಡಿದ್ದ ಅಭಿನೇಶ್, ಇರ್ಫಾನ್ ವಿರುದ್ಧ ಸೇಡು ತೀರಿಸಿಕೊಳ್ಳಲು ತಮಿಳುನಾಡಿನಿಂದ ಸ್ನೇಹಿತರನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದ. ಆತ ಸ್ನೇಹಿತರಿಂದ ಕೇರಳ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿಸಬೇಕೆಂದು ಸಂಚು ರೂಪಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪೂರ್ವಯೋಜಿತ ಸಂಚಿನಂತೆ ಏ.17ರಂದು ರಾತ್ರಿ ಅಭಿನೇಶ್ ಮತ್ತು ಸ್ನೇಹಿತರು, ಇರ್ಫಾನ್‌ನ ಮನೆಗೆ ನುಗ್ಗಿ ಗಲಾಟೆ ಮಾಡಿದ್ದರು. ನಂತರ ಚಾಕು ತೋರಿಸಿ ಹಣ ಕೊಡುವಂತೆ ಬೆದರಿಕೆ ಹಾಕಿದ್ದರು. ಇರ್ಫಾನ್ ಮತ್ತು ಸ್ನೇಹಿತರು, ತಮ್ಮ ಹಣವಿಲ್ಲ ಎಂದು ಹೇಳಿದಾಗ ಆರೋಪಿಗಳು ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ, 10 ಸಾವಿರ ರೂ. ನಗದು, ಮೊಬೈಲ್, ಲ್ಯಾಪ್‌ಟಾಪ್ ಹಾಗೂ ದ್ವಿಚಕ್ರ ವಾಹನ ಕಿತ್ತುಕೊಂಡು ಪರಾರಿಯಾಗಿದ್ದರು. ಘಟನೆ ವೇಳೆ ಇರ್ಫಾನ್ ಮತ್ತು ಸ್ನೇಹಿತರು ಪ್ರತಿರೋಧ ತೋರಿ ಆರೋಪಿಗಳಿಗೆ ಥಳಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ವಿವಿ ಘಟಿಕೋತ್ಸವ ಇಂದು

■ **ವಿಕ ಸುದ್ದಿಲೋಕ** ಬೆಂಗಳೂರು

ಡಾ.ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಎರಡನೇ ವರ್ಷದ ಘಟಿಕೋತ್ಸವ ಏ.27 ರಂದು ನಡೆಯಲಿದೆ. ಬೆಳಗ್ಗೆ 11.30ಕ್ಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿರುವ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿಶ್ವವಿದ್ಯಾಲಯ ಕುಲಪತಿ ಪ್ರೊ.ವಿಶ್ವನಾಥ್ ತಿಳಿಸಿದರು.

ವಿಶ್ವವಿದ್ಯಾಲಯದ ಘಟಿಕೋತ್ಸವದ ಕುರಿತು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''2023-24 ಹಾಗೂ 2024-25ನೇ ಸಾಲಿನಲ್ಲಿ ಪದವಿ ಪಡೆದ ಒಟ್ಟು 171 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಇದೇ ಸಂದರ್ಭದಲ್ಲಿ 6 ಮಂದಿಗೆ ಚಿನ್ನದ ಪದಕ ಮತ್ತು 17 ಮಂದಿಗೆ ರ್‍ಯಾಂಕ್ ಪ್ರಮಾಣಪತ್ರ ವಿತರಿಸಲಾಗುತ್ತದೆ'' ಎಂದರು.

ನಗರದಲ್ಲಿ ಅದ್ದೂರಿ ವಾಸವಿ ಜಯಂತಿ

ಬೆಂಗಳೂರು: ಕನ್ಯಕಾ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ವಿ.ವಿ ಪುರಂನ ಕನ್ಯಕಾ ಪರಮೇಶ್ವರಿ ದೇವಾಲಯದಲ್ಲಿ ವಾಸವಿ ಜಯಂತಿ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ವಾಸವಿ ಪೀಠದ ಪೀಠಾಧಿಪತಿ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸಂಜೆ ಬ್ರಹ್ಮ ರಥೋತ್ಸವ ನಡೆಯಿತು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಟ್ರಸ್ಟ್‌ನ ಮಾರ್ಗದರ್ಶಕ ಡಾ.ಎಸ್.ವಿ ಎಸ್. ಗುಪ್ತ, ಅಧ್ಯಕ್ಷ ಬಿ.ಎ.ಶ್ರೀನಿವಾಸ್ ಗುಪ್ತ, ಉಪಾಧ್ಯಕ್ಷ ಎ ಬಾಲಚಂದ್ರ, ಸಿಎ ಐ.ಎಸ್ ಪ್ರಸಾದ್, ಕಾರ್ಯದರ್ಶಿ ಎಲ್. ಸುರೇಶ್, ಜಂಟಿ ಕಾರ್ಯದರ್ಶಿ ಎಂ.ಎಸ್ ಪ್ರಕಾಶ್, ಖಜಾಂಚಿ ಮಾನಂದಿ ಸತೀಶ್, ಜಂಟಿ ಖಜಾಂಚಿ ಎನ್.ಎಸ್ ಶ್ರೀನಿವಾಸಮೂರ್ತಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಶುಕ್ರವಾರದಿಂದಲೂ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಜಯನಗರ 2ನೇ ಬ್ಲಾಕ್‌ನ 9ನೇ ಮುಖ್ಯರಸ್ತೆಯ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ವಾಸವಿ ಜಯಂತಿ ಭಾನುವಾರ ವಿಜೃಂಭಣೆಯಿಂದ ನಡೆಯಿತು. ಖಜಾಂಚಿ ಎಲ್.ನಾಗರಾಜ ಶೆಟ್ಟಿ ಸೇರಿದಂತೆ ಆರ್ಯ ವೈಶ್ಯ ಸಮುದಾಯದ ಮುಖಂಡರು, ಸಾರ್ವಜನಿಕರು ಪಾಲ್ಗೊಂಡಿದ್ದರು.

ಸರಕಾರದಿಂದಲೇ ವಾಸವಿ ಜಯಂತಿ ಆಚರಿಸಲು ಒತ್ತಾಯ

ಬೆಂಗಳೂರು: ರಾಜ್ಯ ಸರಕಾರದ ವತಿಯಿಂದ ವಾಸವಿ ಜಯಂತಿಯನ್ನು ಆಚರಿಸಬೇಕು ಎಂದು ಕರ್ನಾಟಕ ಆರ್ಯವೈಶ್ಯ ಮಹಾಮಂಡಳಿಯ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಆಗ್ರಹಿಸಿದರು.

ಕರ್ನಾಟಕ ಆರ್ಯವೈಶ್ಯ ಮಹಾಮಂಡಳಿ ವತಿಯಿಂದ ಭಾನುವಾರ ಬಸವನಗುಡಿಯ ನಿಜಗುಣ ಕ್ಷೇತ್ರ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ವಾಸವಿ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಅವರು ಮಾತನಾಡಿದರು.

''ಈಗಾಗಲೇ ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ಸರಕಾರದ ವತಿಯಿಂದಲೇ ಪ್ರತಿವರ್ಷ ವಾಸವಿ ಜಯಂತಿಯನ್ನು ಆಚರಿಸಲಾಗುತ್ತಿದೆ. ಹಾಗಾಗಿ, ಕರ್ನಾಟಕ ದಲ್ಲೂ ರಾಜ್ಯ ಸರಕಾರದ ವತಿಯಿಂದ ವಾಸವಿ ಜಯಂತಿ ಆಚರಿಸಬೇಕು. ಜಯಂತಿಗೆ ರಜೆ ಕೊಡಬೇಕು ಎಂದು ಕೇಳುವುದಿಲ್ಲ, ಆದರೆ, ಸರಕಾರದ ವತಿಯಿಂದ ಆಚರಣೆ ಮಾಡಬೇಕು. ಈ ಬಗ್ಗೆ ಸಿಎಂ ಅವರಿಗೆ ಪತ್ರ ಬರೆಯಲಿದ್ದು, ಸದನದಲ್ಲೂ ಚರ್ಚಿಸಲಾಗು ವುದು,'' ಎಂದರು.

ಭಾನುವಾರ ವಾಸವಿ ಅಮ್ಮನವರಿಗೆ ಕಳಸಗಳನ್ನಿಟ್ಟು, ವಿವಿಧ ಬಗೆಯ ಹೋಮ, ಹವನ, ಅಭಿಷೇಕ, ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಸಮುದಾಯದ ನೂರಾರು ಮಂದಿ ಭಾಗವಹಿಸಿದ್ದರು.

ಹಿಂದುಳಿದವರೆಂಬ ಭಾವನೆ ಬಿಡಿ

ವಿಶ್ವಕರ್ಮ ಸಮುದಾಯದವರಿಗೆ ಡಿಕೆಶಿ ಸಲಹೆ

ಬೆಂಗಳೂರು: ವಿಶ್ವಕರ್ಮ ಸಮುದಾಯ ಹಿಂದುಳಿದಿದೆ ಎಂಬ ಮಾತನ್ನು ನಾನು ಒಪ್ಪುವುದಿಲ್ಲ, ಏಕೆಂದರೆ ದೇವರು ಯಾರಿಗೂ ನೀಡದ ಪ್ರತಿಭೆ ಈ ಸಮುದಾಯದವರಿಗೆ ನೀಡಿದ್ದಾನೆ. ನೀವು ಪ್ರತಿಭೆಯಲ್ಲಿ ಮುಂದಿದ್ದೀರಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಭಾನುವಾರ ಏರ್ಪಡಿಸಿದ್ದ ರಾಜ್ಯಮಟ್ಟದ ವಧು-ವರರ ಸಮಾವೇಶದಲ್ಲಿ ಅವರು ಮಾತನಾಡಿದರು. ''ಬಾಗಿಲು, ನೇಗಿಲು ನಿಮ್ಮ ಕೊಡುಗೆ. ವಿಶ್ವದ ಯಾವುದೇ ದೇಶಕ್ಕೆ ಹೋದರೂ ಅಲ್ಲಿನ ಪ್ರತಿಮೆಗಳಿಂದ ಹಿಡಿದು, ಆಭರಣ ವಿನ್ಯಾಸ ಇವೆಲ್ಲವೂ ನಿಮ್ಮದೇ ಕೊಡುಗೆ. ತಾಳಿ, ಮೂಗುತಿ, ವಜ್ರಾಭರಣ ಎಲ್ಲವೂ ನಿಮ್ಮ ಕೈಯಲ್ಲಿ ಅರಳುವ ಕಲೆಗಳು. ಭೂಮಿ ಸೃಷ್ಟಿ ಮಾಡಿದ್ದೂ ಸಹ ವಿಶ್ವಕರ್ಮ ಮಹರ್ಷಿಗಳು'' ಎಂದರು.

''ಸಿದ್ದಪ್ಪಾಜಿ ದೇವರಿಗೂ ಹಾಗೂ ನನಗೂ ಅವಿನಾಭಾವ ಸಂಬಂಧ. ಚಿಕ್ಕ ವಯಸ್ಸಿನಲ್ಲಿ ನಮ್ಮ ತಂದೆ ನಡೆಸಿಕೊಂಡು ಸಂಗಮದ ಮೂಲಕ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆ ದೇವಸ್ಥಾನದ ಅಭಿವೃದ್ಧಿಗೆ ನೆರವು ನೀಡಲಾಗುವುದು,'' ಎಂದರು.

ಮಹಾಸಭಾ ಅಧ್ಯಕ್ಷ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಪಿ ನಂಜುಂಡಿ, ಲೇಬಗಿರಿಯ ನಾಗಮೂರ್ತೀಂದ್ರ ಸ್ವಾಮೀಜಿ, ಮಧುಗಿರಿ ನಿಟ್ಟರಹಳ್ಳಿಯ ನೀಲಕಂಠಾಚಾರ್ಯ ಸ್ವಾಮೀಜಿ, ಚನ್ನಗಿರಿ ಕಾಶಿಮಠದ ಶಂಕರಾತ್ಮನಂದ ಸರಸ್ವತಿ ಸ್ವಾಮೀಜಿ, ಹುಲಗೂರು ಮಠದ ಮೌನೇಶ್ವರ ಸ್ವಾಮೀಜಿ, ಕೊಪ್ಪಳದ ಗಣೇಶ್ವರ ಸ್ವಾಮೀಜಿ, ವಧು-ವರರ ವೇದಿಕೆ ಅಧ್ಯಕ್ಷ ಬಸವರಾಜು ಉಪಸ್ಥಿತರಿದ್ದರು.

ವಿಶ್ವಕರ್ಮ ಸಮುದಾಯದ ವಿವಿಧ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಮಠಾಧೀಶರು, ಮುಖಂಡರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ನೀಡಿದರು.

ಬಿಡಿಎಯಿಂದ 15 ಲಕ್ಷ ಸಸಿ ನೆಡುವ ಯೋಜನೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಬಿಡಿಎ) ನಗರದ ಹಲವೆಡೆ ಸ್ಥಳೀಯ ಪ್ರಭೇದದ 15 ಲಕ್ಷ ಸಸಿಗಳನ್ನು ನೆಡುವ ಮಹತ್ವಾಕಾಂಕ್ಷೆ ಪರಿಸರ ಯೋಜನೆ ಕೈಗೊಳ್ಳಲು ಮುಂದಾಗಿದೆ.

ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ನೇತೃತ್ವದಲ್ಲಿ ಜೂ.5ರ ವಿಶ್ವ ಪರಿಸರ ದಿನದಂದು ಈ ಯೋಜನೆಗೆ ಚಾಲನೆ ನೀಡಲಾಗುತ್ತದೆ. ''ಸುಸ್ಥಿರ ನಗರ ಅಭಿವೃದ್ಧಿ ಮತ್ತು ಹಸಿರು ಪರಿಸರವನ್ನು ಮರುಸ್ಥಾಪಿಸುವಲ್ಲಿ ಈ ಯೋಜನೆ ಮಹತ್ವದ ಹೆಜ್ಜೆಯಾಗಲಿದೆ. ನೆಡುತೋಪುಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಖಚಿತಪಡಿಸಿ ಕೊಳ್ಳಲು ಬಿಡಿಎ ದೃಢವಾದ ವ್ಯವಸ್ಥೆ ರೂಪಿಸುತ್ತಿದೆ. ಈ ಉಪಕ್ರಮದ ಭಾಗವಾಗಿ, ಗಿನ್ನಿಸ್ ವಿಶ್ವ ದಾಖಲೆಯನ್ನು ಸಾಧಿಸಲು ಉದ್ದೇಶಿಸಿದೆ,'' ಎಂದು ಬಿಡಿಎ ಪ್ರಕಟಣೆಯಲ್ಲಿ ವಿವರಿಸಿದೆ.

ಇನ್ಮುಂದೆ ಮಾಧ್ಯಮಗಳ ಮುಂದೆ ರಾಜಕೀಯ ಮಾತಾಡಲ್ಲ ಎಂದ ಡಿಕೆಶಿ

ಯಾವಾಗ ಏನಾಗಬೇಕೋ ಅದಾಗುತ್ತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಯಾವಾಗ ಏನಾಗಬೇಕೋ ಅದು ಆಗುತ್ತದೆ. ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತೇ ಆಡುವುದಿಲ್ಲ. ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ. ಏನೇನು ತೀರ್ಮಾನಗಳಾಗಿವೆಯೋ ಅವೆಲ್ಲ ಚಾಲ್ತಿಗೆ ಬರುತ್ತವೆ.

ಇದು 3 ದಿನಗಳ ದಿಲ್ಲಿ ಪ್ರವಾಸ ಪೂರೈಸಿ ಬೆಂಗಳೂರಿಗೆ ವಾಪಸಾಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ನೀಡಿದ ಪ್ರತಿಕ್ರಿಯೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ. ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾಗಿರುವ ಡಿ.ಕೆ. ಶಿವಕುಮಾರ್ ತಮ್ಮ ಹಕ್ಕು ಮಂಡಿಸಿದ್ದಾರೆ. ಅಧಿಕಾರ ಹಸ್ತಾಂತರವಾಗಬೇಕು ಎಂದು ಒತ್ತಾಯಿಸಿರುವ ಅವರು ಅದಕ್ಕೆ ಗಡುವನ್ನೂ ನೀಡಿದ್ದಾರೆ ಎಂದು ಹೇಳಲಾಗಿದೆ.

ಆದರೆ, ಈ ಯಾವ ವಿಚಾರಕ್ಕೂ ಜವಾಬು ಕೊಡಲು ಅವರು ನಿರಾಕರಿಸಿದರು. ಬದಲಾಗಿ ಮಾಧ್ಯಮದ ಮುಂದೆ ಇನ್ನು ರಾಜಕೀಯ ಮಾತನಾಡುವುದೇ ಇಲ್ಲ ಎಂದರು. ಇದರ ನಡುವೆಯೂ ಸಮಯ ಬಂದಾಗ ಎಲ್ಲವೂ ಗೊತ್ತಾಗುತ್ತದೆ ಎನ್ನುವ ಮೂಲಕ ಕುತೂಹಲವನ್ನು ಜಾರಿಯಲ್ಲಿಟ್ಟಿದ್ದಾರೆ.

ಸದಾಶಿವನಗರದ ನಿವಾಸದ ಬಳಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ''ನಮ್ಮಲ್ಲಿ ಯಾವುದೇ ಸಮಸ್ಯೆಯಿಲ್ಲ, ಯಾವ ರಾಜಕೀಯವೂ ಇಲ್ಲ, ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ,'' ಎಂದು ಹೇಳುವುದರೊಂದಿಗೆ ಮುಂಬರುವ ದಿನಗಳಲ್ಲಿ ನಡೆಯಬಹುದಾದ ರಾಜಕೀಯ ಚಟುವಟಿಕೆಗಳ ಸುಳಿವು ನೀಡಿದರು.

ಪಕ್ಷದ ಮೇಲೆ ವಿಶ್ವಾಸ: ''ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ಪಕ್ಷದ ಮೇಲೆ ವಿಶ್ವಾಸವಿದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ,'' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ನಾಯಕತ್ವದ ಕುರಿತು ಕೇಳಲಾದ ಪ್ರಶ್ನೆಗೆ, ''ನಿಮಗೆ ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಕುರಿತು ಯಾವತ್ತೂ ಚರ್ಚಿಸಿಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಆವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಹಾಗೂ ಸಿಎಂ ಹೇಳಿದ್ದೇವೆ. ಅದರಂತೆ ನಡೆಯುತ್ತೇವೆ,'' ಎಂದು ಹೇಳಿದರು.

ಹೀಗೆ ರಾಜಕೀಯ ವಿಚಾರವಾಗಿ ಮಾಧ್ಯಮದ ಮುಂದೆ ಮಾತನಾಡುವುದಿಲ್ಲ ಎನ್ನುತ್ತಲೇ, ಒಗಟಿನ ಶೈಲಿಯಲ್ಲಿ ಅನೇಕ ಸಂಗತಿಗಳನ್ನು ಡಿಸಿಎಂ ಹಂಚಿಕೊಂಡಿರುವುದು ಗಮನ ಸೆಳೆದಿದೆ.

ಸಚಿವ ಸುಧಾಕರ್ ಆರೋಗ್ಯ ವಿಚಾರಿಸಿದ ಡಿಸಿಎಂ

ಬೆಂಗಳೂರು: ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವ ಡಿ. ಸುಧಾಕರ್ ಆರೋಗ್ಯದ ಬಗ್ಗೆ ವೈದ್ಯರ ತಂಡದಿಂದ ಡಿಸಿಎಂ ಡಿ.ಕೆ. ಶಿವಕುಮಾರ್ ಮಾಹಿತಿ ಪಡೆದುಕೊಂಡರು. ಎಲೆಕ್ಟ್ರಾನಿಕ್ ಸಿಟಿ ಬಳಿಯ ಆಸ್ಪತ್ರೆಗೆ ಭಾನುವಾರ ಭೇಟಿ ನೀಡಿದ ಅವರು, ಅಲ್ಲಿನ ವೈದ್ಯರು ಮತ್ತು ಸಚಿವರ ಕುಟುಂಬ ಸದಸ್ಯರೊಂದಿಗೆ ಸಮಾಲೋಚಿಸಿದರು.

ಕೊಟ್ಟ ಮಾತಿನ ಪ್ರಕಾರ ಪರಿಶಿಷ್ಟ ಜಾತಿಯವರಿಗೆ ಒಳಮೀಸಲು ಕಲ್ಪಿಸಲಾಗಿದೆ. ಎಡ, ಬಲ, ಲಂಬಾಣಿ, ಭೋವಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ನಮ್ಮ ಸರಕಾರ ಮಾಡಿದೆ. 30-40 ವರ್ಷದಿಂದ ಇದ್ದಂತಹ ಸಮಸ್ಯೆಯನ್ನು ಬಗೆಹರಿಸಿದ್ದೇವೆ.

-ಡಿ.ಕೆ.ಶಿವಕುಮಾರ್ ಡಿಸಿಎಂ

'ನನ್ನ ಜನ್ಮ ದಿನಕ್ಕೆ ಫ್ಲೆಕ್ಸ್, ಬ್ಯಾನರ್ ಹಾಕಿದ್ರೆ ಕೇಸ್'

ಬೆಂಗಳೂರು: ''ನನ್ನ ಜನ್ಮ ದಿನವಾದ ಮೇ 15ರಂದು ಯಾರೂ ಫ್ಲೆಕ್ಸ್, ಬ್ಯಾನರ್ ಹಾಕಬಾರದು. ಒಂದು ವೇಳೆ ಹಾಕಿದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಲಿಕೆಗೆ ಸೂಚಿಸಲಾಗುವುದು,'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ''ರಸ್ತೆಯಲ್ಲಿ ಫ್ಲೆಕ್ಸ್ ಹಾಕಿ ನಗರದ ಸೌಂದರ್ಯ ಹಾಳು ಮಾಡಬಾರದು. ಇದು ನಾನು ಎಲ್ಲರಿಗೂ ಕೊಡುತ್ತಿರುವ ಸೂಚನೆ. ಅನಧಿಕೃತ ಫ್ಲೆಕ್ಸ್ ಕಂಡು ಬಂದರೆ ದುಬಾರಿ ದಂಡ ವಿಧಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದೇನೆ,'' ಎಂದು ತಿಳಿಸಿದ್ದಾರೆ.

ಅಹಿಂದ ಹೋರಾಟ ಸಾಧನೆ, ಸಂಕಲ್ಪ ವಿಚಾರ ಸಂಕಿರಣ

ಅಹಿಂದ ಸಮಾವೇಶಕ್ಕೆ ಚಿಂತನೆ

ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಅಹಿಂದ ಹೋರಾಟ ಸಾಧನೆ, ಸಂಕಲ್ಪ ವಿಚಾರ ಸಂಕಿರಣದಲ್ಲಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿದರು.

■ **ವಿಕ ಸುದ್ದಿಲೋಕ** ಹುಬ್ಬಳ್ಳಿ

ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ (ಅಹಿಂದ) ಸಮುದಾಯಗಳ ಸಂಘಟನೆಯನ್ನು ಇನ್ನಷ್ಟು ಬಲಪಡಿಸಲು ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಚಿಂತನೆ ನಡೆದಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಭಾನುವಾರ ಅಹಿಂದ ರಾಜ್ಯ ಘಟಕ ಆಯೋಜಿಸಿದ್ದ ರಾಜ್ಯ ಮಟ್ಟದ ಅಹಿಂದ ಹೋರಾಟ ಸಾಧನೆ, ಸಂಕಲ್ಪ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

''ಅಹಿಂದ ಸಂಘಟನೆಗೆ 20 ವರ್ಷಗಳು ಸಂದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಜಾಗೃತಿ ಕಾರ್ಯಾಗಾರ, ಪೂರ್ವಭಾವಿ ಸಭೆ ಆಯೋಜಿಸಲಾಗುತ್ತಿದೆ. ಬಳಿಕ ರಾಜ್ಯ ಮಟ್ಟದ ಬೃಹತ್ ಸಮಾವೇಶವನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಅಹಿಂದ ಸಂಘಟನೆ ಯಾವುದೇ ರಾಜಕೀಯ ಲಾಭ ಅಥವಾ ಸ್ವಾರ್ಥ ಸಾಧನೆಗಾಗಿ ಅಲ್ಲ, ಸಮಾಜದ ಜಾಗೃತಿಗಾಗಿ. ಇದು ನಾನು ಮುಖ್ಯಮಂತ್ರಿಯಾಗಬೇಕು, ದೊಡ್ಡ ಹುದ್ದೆಯನ್ನು ಅಲಂಕರಿಸಬೇಕು ಎನ್ನುವ ರಾಜಕೀಯ ಲಾಭದ ಕಾರ್ಯಾಗಾರವಲ್ಲ,'' ಎಂದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ ಮಾತನಾಡಿ, ''ಜಾತಿ ವ್ಯವಸ್ಥೆ ಎಂಬ ವಿಷ ವರ್ತುಳ ಇಂದಿಗೂ ಜೀವಂತವಾಗಿದ್ದು, ಅನಕ್ಷರಸ್ಥರು, ನಿರುದ್ಯೋಗಿಗಳೇ ಹೆಚ್ಚಾಗಿ ಆದರಿಂದ ಶಿಕ್ಷೆ ಅನುಭವಿಸುತ್ತಿದ್ದಾರೆ. ಸಾಕಷ್ಟು ಮಹಾಪುರುಷರು ಇದರ ವಿರುದ್ಧ ಧ್ವನಿ ಎತ್ತಿದರೂ ಅದನ್ನು ಬೇರು ಸಮೇತ ಕಿತ್ತುಹಾಕಲು ಆಗುತ್ತಿಲ್ಲ,'' ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಮುಖ ನಿರ್ಣಯಗಳು

- ರಾಜ್ಯದಲ್ಲಿ ಶೇ.98 ಹುದ್ದೆಗಳು ಖಾಸಗಿ ಕ್ಷೇತ್ರದಲ್ಲಿದ್ದು, ಈ ವಲಯಕ್ಕೂ ಮೀಸಲು ವಿಸ್ತರಿಸಬೇಕು
- ಶೇ.32 ಮೀಸಲನ್ನು ಶೇ.50ಕ್ಕೆ ಏರಿಸಬೇಕು, ಶೇ.15 ಇರುವ ಪರಿಶಿಷ್ಟರ ಮೀಸಲನ್ನು ಶೇ.18ಕ್ಕೆ ಹೆಚ್ಚಿಸಬೇಕು
- ಚುನಾವಣೆಯಲ್ಲಿ ಹಿಂದುಳಿದ ವರ್ಗಕ್ಕೂ ಮೀಸಲು ನೀಡಬೇಕು
- ರಾಷ್ಟ್ರೀಯ ಜನಗಣತಿಯಲ್ಲಿ ಜಾತಿಗಣತಿ ಸೇರಿಸಿ, ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು
- ಅಹಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಕೌಶಲ ಆಧಾರಿತ ತರಬೇತಿ ನೀಡಬೇಕು
- ಕೇಂದ್ರ ಸರಕಾರದ ನೇಮಕದಲ್ಲಿ ಹಿಂದುಳಿದ ವರ್ಗಗಳ ಒಳಮೀಸಲು ಜಾರಿಗೆ ತರಬೇಕು

ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ ಮಾತನಾಡಿ, ''ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಹಿಂದುಳಿದ ಸಮಾಜಗಳ ಸ್ಥಿತಿಗತಿ ಅರಿತು 3,000 ಹಾಸ್ಟೆಲ್ ಆರಂಭಿಸಿ ಹಿಂದುಳಿದ ಮಕ್ಕಳಿಗೆ ಉನ್ನತ ಶಿಕ್ಷಣ ಕಲ್ಪಿಸಲು ಅನುವು ಮಾಡಿದರು,'' ಎಂದು ಹೇಳಿದರು.

ವಿಧಾನ ಪರಿಷತ್ ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಇದ್ದರು.

ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ

■ **ವಿಕ ಸುದ್ದಿಲೋಕ** ಚಿತ್ರದುರ್ಗ

ಅಹಿಂದ ಸಮಾವೇಶ ಮಾಡಲು ಹೊರಟಿರುವುದು ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳುವುದಕ್ಕೇ ಹೊರತು, ಜನರ ಬದುಕು

ಸರಿಪಡಿಸಲು ಅಲ್ಲ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಚಿತ್ರದುರ್ಗದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, ''ಸಿಎಂ ಕುರ್ಚಿ ಅಲ್ಲಾಡುತ್ತಿದೆ ಎಂದು ಸಿದ್ದರಾಮಯ್ಯ ಅವರಿಗೆ ಅಹಿಂದ ವರ್ಗ ನೆನಪಾಗಿದೆ. ಅಹಿಂದ ಸಮಾವೇಶ ಮಾಡಿ ಜನರಿಗೆ ಏನು ಸಂದೇಶ ಕೊಡುತ್ತೀರಿ? ಅವರ ಬದುಕಿಗೆ ಏನು ದಾರಿ ಮಾಡುತ್ತೀರಿ,'' ಎಂದು ಪ್ರಶ್ನಿಸಿದರು.

ಸಚಿವ ಡಿ.ಸುಧಾಕರ್ ಅನಾರೋಗ್ಯದ ಕುರಿತು ಪ್ರತಿಕ್ರಿಯಿಸಿದ ಎಚ್‌ಡಿಕೆ, ''ಉಸ್ತುವಾರಿ ಸಚಿವರೊಬ್ಬರು ಸಾವು-ಬದುಕಿನ ನಡುವೆ ಹೋರಾಡುತ್ತಿರುವಾಗ ಆ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಿಲ್ಲ, ಆದರೆ ಒಳಗೆ ಏನು ನಡೆಯುತ್ತಿದೆ ಎಂದು ನೋಡಬೇಕು, ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾರೋ ಗೊತ್ತಿಲ್ಲ, ಅಲ್ಲಿ ಏನಾಗಿದೆ ಎಂಬುದನ್ನು ಯಾವ ಕಾರಣಕ್ಕಾಗಿ ಮುಚ್ಚಿಟ್ಟಿದ್ದಾರೊ ಗೊತ್ತಿಲ್ಲ, ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಮುಚ್ಚಿಟ್ಟಿರಬಹುದು. ಇಂತಹ ಸಂದರ್ಭಗಳನ್ನು ದುರ್ಬಳಕೆ ಮಾಡಿಕೊಳ್ಳುವ ಎಕ್ಸ್‌ಪರ್ಟ್‌ಗಳು ಕೆಲವರಿದ್ದಾರೆ,'' ಎಂದು ಮಾರ್ಮಿಕವಾಗಿ ನುಡಿದರು.

ಕಾಂಗ್ರೆಸ್‌ನಲ್ಲಿ ಯಾವುದೂ ಕೆಟ್ಟಿಲ್ಲ

ಗದಗ: ಕಾಂಗ್ರೆಸ್‌ನಲ್ಲಿ ಯಾವುದೂ ಕೆಟ್ಟಿಲ್ಲ, ಆದರೆ, ಸುಧಾರಣೆಗೆ ಅವಕಾಶವಿದೆ. ನಾವೆಲ್ಲರೂ ಆದರ ನಿರೀಕ್ಷೆಯಲ್ಲಿದ್ದೇವೆ ಎಂದು ಕಾನೂನು ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು,



''ಪಕ್ಷದ ಹಿತದೃಷ್ಟಿಯಿಂದ ಬಣ ರಾಜಕೀಯದ ಬಗ್ಗೆ ಮಾತನಾಡುವುದು ಸರಿಯಲ್ಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಸೂಚನೆ ನೀಡಿದ ನಂತರವೂ ಕೆಲವರು ಮಾತನಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಪಕ್ಷದ ಆಂತರಿಕ ವಿಷಯಗಳನ್ನು ಸರಿಪಡಿಸುವುದು ವರಿಷ್ಠರ ಜವಾಬ್ದಾರಿ. ಆದಷ್ಟು ಬೇಗ ಹೈಕಮಾಂಡ್ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಿದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

''ಒಳಮೀಸಲು ಜಾರಿ ವಿಷಯದಲ್ಲಿ ಕರ್ನಾಟಕ ದೇಶಕ್ಕೆ ಯಶಸ್ವಿ ಮಾದರಿಯನ್ನು ಪರಿಚಯಿಸಿದೆ. ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಅನುಕೂಲ ಕಲ್ಪಿಸುವ ಮೂಲಕ ಸರಕಾರವು ಸಂಪೂರ್ಣ ಪರಿಹಾರ ಒದಗಿಸಿದೆ,'' ಎಂದರು.

ಸೌಲಭ್ಯ ಒದಗಿಸದೆ ಆಸ್ಪತ್ರೆ ಉದ್ಘಾಟನೆಗೆ ಬೇಸರ

ಶಿಗ್ಗಾವಿ(ಹಾವೇರಿ): ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಶಿಗ್ಗಾವಿಯಲ್ಲಿ 250 ಹಾಸಿಗೆ



ಆಸ್ಪತ್ರೆ ಉದ್ಘಾಟಿಸಲು ಸೋಮವಾರ ಬರುತ್ತಿದ್ದಾರೆ. ಆದರೆ ವೈದ್ಯಕೀಯ ಸಲಕರಣೆ, ವೈದ್ಯರ ನೇಮಕ ಮಾಡಿ ಆಸ್ಪತ್ರೆ ಉದ್ಘಾಟಿಸಿದ್ದರೆ ಸಾರ್ಥಕ ಆಗುತ್ತಿತ್ತು ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಭಾನುವಾರ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ''ಎರಡ್ಮೂರು ತಿಂಗಳಲ್ಲಿ ವೈದ್ಯರ ನೇಮಕ, ವೈದ್ಯಕೀಯ ಸಲಕರಣೆ, ಬೆಡ್ ವ್ಯವಸ್ಥೆ ಮಾಡಿ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕು,'' ಎಂದು ಆಗ್ರಹಿಸಿದ್ದಾರೆ.

''ನಾನು ಸಿಎಂ ಆಗಿದ್ದಾಗ 250 ಬೆಡ್ ಆಸ್ಪತ್ರೆಗೆ ಮಂಜೂರಾತಿ ಮಾಡಿದ್ದೆ. 24 ತಿಂಗಳೊಳಗೆ ಪೂರ್ಣಗೊಳಿಸುವ ಕರಾರಿನೊಂದಿಗೆ 96.5 ಕೋಟಿ ರೂ. ಮೊತ್ತದ ಕಾಮಗಾರಿ ಗುತ್ತಿಗೆ ನೀಡಲಾಗಿತ್ತು. ಇದರ ಜತೆಗೆ ಸುಮಾರು 50 ಕೋಟಿ ರೂ.ವೆಚ್ಚದಲ್ಲಿ ಲ್ಯಾಬ್, ಹಾಸಿಗೆ, ಆಪರೇಷನ್ ಥೇಟರ್‌ಗೆ ಬೇಕಾದ ವೈದ್ಯಕೀಯ ಸಲಕರಣೆಗೆ ಮಂಜೂರಾತಿ ಮಾಡಿದ್ದೆವು. 2024ಕ್ಕೆ ಮುಗಿಯಬೇಕಿದ್ದ ಕಾಮಗಾರಿ ಎರಡು ವರ್ಷ ತಡವಾಗಿ ಮುಗಿಯುತ್ತಿದೆ. ಆದಾಗ್ಯೂ ವೈದ್ಯಕೀಯ ಸಲಕರಣೆ, ಬೆಡ್ ಕೂಡ ಇಲ್ಲ,'' ಎಂದು ಬೇಸರ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆ ನಿರ್ಲಕ್ಷ್ಯ

ಬೆಂಗಳೂರು: ಆಂತರಿಕ ಕಚ್ಚಾಟ, ಬಣ ಬಡಿದಾಟದಲ್ಲೇ ಮುಳುಗಿರುವ ರಾಜ್ಯದ ಕಾಂಗ್ರೆಸ್ ಸರಕಾರ ಆರೋಗ್ಯ ಇಲಾಖೆಯನ್ನು ಸಂಪೂರ್ಣ

ನಿರ್ಲಕ್ಷಿಸಿದೆ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆರೋಪಿಸಿದ್ದಾರೆ. ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ''ಆರೋಗ್ಯ ಇಲಾಖೆಯೇ ಅನಾರೋಗ್ಯ ಪೀಡಿತವಾಗಿದೆ. ಇಲಾಖೆಯನ್ನು ಅಧೋಗತಿಗೆ ತಳ್ಳಲಾಗಿದೆ. ಸರಕಾರಿ ಆಸ್ಪತ್ರೆಗಳು ಕೋಮಾ ಸ್ಥಿತಿಯಲ್ಲಿವೆ. ನಾನು ಅಧಿವೇಶನದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಾಗ ಎಲ್ಲವೂ ಸರಿಯಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದರು. ಆದರೆ, ಆಸ್ಪತ್ರೆಗಳಲ್ಲಿ ಔಷಧಗಳ ದಾಸ್ತಾನಿಲ್ಲ, ಖಾಲಿಯಿರುವ ವೈದ್ಯರ ಹುದ್ದೆಗಳ ಭರ್ತಿಯಾಗಿಲ್ಲ. ಸಾಲು ಸಾಲು ಸಮಸ್ಯೆಗಳಿಂದ ರಾಜ್ಯಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಅಸ್ತವ್ಯಸ್ತವಾಗಿದೆ,'' ಎಂದು ಆಪಾದಿಸಿದ್ದಾರೆ.

ಶೈಕ್ಷಣಿಕ ಫಲಿತಾಂಶದಲ್ಲಿ ಸಾಮಾಜಿಕ ಸಮಾನತೆ | ಶೇ.90 ದಾಟಿದ ಎಲ್ಲ ಸಮುದಾಯ

ಎಸ್ಸೆಸ್ಸೆಲ್ಸಿ ಎಲ್ಲಾ ಪ್ರವರ್ಗಗಳೂ ಸಮಬಲ!

■ **ಯಳನಾಡು ಮಂಜು** ದಾವಣಗೆರೆ

manjunath.lokanath@timesofindia.com

ಎಸ್ಸೆಸ್ಸೆಲ್ಸಿಯಲ್ಲಿ ಈ ಬಾರಿ ರಾಜ್ಯದಲ್ಲಿ ಐತಿಹಾಸಿಕ ಫಲಿತಾಂಶ ಲಭಿಸಿದೆ, ಇಂದಿನ ಜಾತಿ ಗಣತಿ, ಒಳಮೀಸಲು ಚರ್ಚೆಯ ಹೊತ್ತಿನಲ್ಲಿ ಸಾಮಾಜಿಕ ಗುಂಪುವಾರು ಫಲಿತಾಂಶ ವಿಶ್ಲೇಷಿಸಿದರೆ, ಶಿಕ್ಷಣ ಮುಖ್ಯವಾಹಿನಿಗೆ ಎಲ್ಲ ಪ್ರವರ್ಗಗಳು ನುಗ್ಗಿ ಬರುತ್ತಿರುವುದು ಗೋಚರಿಸುತ್ತಿದೆ.

ರಾಜ್ಯದಲ್ಲಿ ಈ ಬಾರಿ 94.1 ಫಲಿತಾಂಶ ಬಂದಿದೆ, ಪರೀಕ್ಷೆ ಎದುರಿಸಿದ 7,70,209 ರಲ್ಲಿ 7,24,744 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ನಂತರ ನಡೆಯುವ ಮರು ಪರೀಕ್ಷೆಯಲ್ಲಿ ಫೇಲಾದ ಮಕ್ಕಳಲ್ಲಿ ಅರ್ಧದಷ್ಟು ಪಾಸಾದರೂ ಈ ಬಾರಿ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ. 98 ದಾಟಲಿದೆ.

ಕನ್ನಡಕ್ಕಿಂತ ಇಂಗ್ಲಿಷ್ ಮೀಡಿಯಂ ಮಕ್ಕಳು ಹೆಚ್ಚು ಉತ್ತೀರ್ಣರಾಗಿದ್ದಾರೆ. ಇಂಗ್ಲಿಷ್ ಮಾಧ್ಯಮದಲ್ಲಿ ಪಾಸಾಗಿರುವ ಶೇಕಡಾವಾರು ಫಲಿತಾಂಶ ಶೇ.96.16 ಇದ್ದರೆ, ಕನ್ನಡ ಮಾಧ್ಯಮ ಶೇ.92.6 ರಷ್ಟಿದೆ.

ರಾಜ್ಯದಲ್ಲಿ ಪ್ರವರ್ಗ 3ಎ ವರ್ಗದ ಮಕ್ಕಳು ಫಲಿತಾಂಶದಲ್ಲಿ ತುಸು ಮುಂದಿದ್ದಾರೆ. ಪರೀಕ್ಷೆ ಬರೆದ 62,572 ವಿದ್ಯಾರ್ಥಿಗಳಲ್ಲಿ 60,705 ಪಾಸಾಗಿ ಶೇ.97.02 ಫಲಿತಾಂಶ ಪಡೆಯುವ ಮೂಲಕ ಮೊದಲ ಸ್ಥಾನದಲ್ಲಿದೆ. ಹಾಗೆ 3ಬಿ ಪ್ರವರ್ಗದಲ್ಲಿ 1,11,072 ವಿದ್ಯಾರ್ಥಿಗಳು ಪರೀಕ್ಷೆ ಬರೆದು 1,06,770 ವಿದ್ಯಾರ್ಥಿಗಳು ಪಾಸಾಗಿದ್ದು, ಶೇ.96.13 ಫಲಿತಾಂಶದೊಂದಿಗೆ ಎರಡನೇ ಸ್ಥಾನದಲ್ಲಿದೆ.

- **ಪ್ರವರ್ಗ 3ಎ:** ಶೇ.97.02
- **ಪ್ರವರ್ಗ 3ಬಿ:** ಶೇ.96.13
- **ಪ್ರವರ್ಗ 2ಎ:** ಶೇ.95.48
- **ಸಾಮಾನ್ಯ ವರ್ಗ:** ಶೇ.95.35
- **ಕೆಟಗರಿ -1:** ಶೇ.93.68
- **ಪರಿಶಿಷ್ಟ ವರ್ಗ:** ಶೇ.93.17
- **ಪರಿಶಿಷ್ಟ ಜಾತಿ:** ಶೇ.92.4
- **ಪ್ರವರ್ಗ 2ಬಿ:** ಶೇ.91.29

ಎಲ್ಲ ಪ್ರವರ್ಗದ ಮಕ್ಕಳ ಫಲಿತಾಂಶ ಶೇ.90 ಕ್ಕಿಂತ ಹೆಚ್ಚಿದ್ದು ಎಲ್ಲರೂ ಸಮಕಾಲೀನ ಸ್ಪರ್ಧೆಗೆ ಸಜ್ಜಾಗುತ್ತಿರುವುದು ಗೋಚರಿಸುತ್ತದೆ. ಈ ಮೇಲಿನ ಎಲ್ಲ ಪ್ರವರ್ಗವಾರು ಫಲಿತಾಂಶ ಸಮಾಜದ ಎಲ್ಲ ವರ್ಗಗಳು ಶೈಕ್ಷಣಿಕ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುತ್ತಿರುವುದರ ಜತೆಗೆ ಒಟ್ಟು ಸಮಾಜ, ರಾಜ್ಯ, ದೇಶದ ಸಾಕ್ಷರತೆ ಪ್ರಮಾಣ ಹೆಚ್ಚಿಸಿರುವುದಕ್ಕೆ ಸಾಕ್ಷಿಯಾಗಿದೆ. ಈ ಬೆಳವಣಿಗೆ ಶಿಕ್ಷಣದಿಂದ ವಂಚಿತ ಎಂದು ಹೇಳಿಕೊಳ್ಳುವ ಪ್ರಸಂಗ ಕಡಿಮೆ ಮಾಡಬಹುದು, ಜತೆಗೆ ಶಿಕ್ಷಣದಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ತಗ್ಗಿಸಿರುವುದಕ್ಕೆ ಸಾಕ್ಷಿಯಾಗುತ್ತಿದೆ.

ಶಿಕ್ಷಣ ಇಲಾಖೆಯಿಂದ ಮಹತ್ವದ ಸುತ್ತೋಲೆ | ನಿತ್ಯ 10 ನಿಮಿಷ ಕನ್ನಡ ದಿನಪತ್ರಿಕೆ ಸಹವಾಸ

ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ

ಸರಕಾರಿ, ಖಾಸಗಿ ಶಾಲೆಗಳಲ್ಲಿ ಪ್ರಾರ್ಥನೆ ನಂತರ ಪತ್ರಿಕೆ ರೀಡಿಂಗ್ ಎಂಬುದು ಹೊಸ ರೂಲ್ಸ್

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮನವಿಗೆ ಸರಕಾರ ಅಸ್ತು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ಬಳಿಕ 10 ನಿಮಿಷ ಮಕ್ಕಳಿಗೆ ಕನ್ನಡ ದಿನಪತ್ರಿಕೆ ಓದಿಸುವುದನ್ನು ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಶಾಲೆಗಳ ಜತೆಗೆ, ಸರಕಾರದ ವಿವಿಧ ಇಲಾಖೆಗಳಿಂದ ನಡೆಯುತ್ತಿರುವ ವಸತಿ ಶಾಲೆ, ವಸತಿ ನಿಲಯಗಳು ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಲ್ಲೂ ಈ ನಿಯಮ ಪಾಲಿಸಲು ಪ್ರಾಥಮಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸೂಚಿಸಿದ್ದಾರೆ.

ಡಿಜಿಟಲ್‌ಯುಗದಲ್ಲಿ ಮಕ್ಕಳು ಇಂಟರ್ನೆಟ್ ಶಿಕ್ಷಣ, ಮನರಂಜನೆ ಮತ್ತು ಸಾಮಾಜಿಕ ಜಾಲತಾಣಗಳಿಗೆ ಹೆಚ್ಚಿನ ಸಮಯ ನೀಡುತ್ತಿದ್ದಾರೆ. ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿಯ ಕೊರತೆ, ಶ್ರವಣದೋಷ ಮತ್ತು ದೈಹಿಕ ಚಟುವಟಿಕೆಗಳಲ್ಲಿ ನಿರಾಸಕ್ತಿ ಕಂಡು ಬರುತ್ತಿದೆ. ಹೀಗಾಗಿ, ಶಾಲೆಗಳಲ್ಲಿ ನಿತ್ಯ 10 ರಿಂದ 15 ನಿಮಿಷ ದಿನಪತ್ರಿಕೆ ಓದಿಸುವ ಹವ್ಯಾಸ ಅಳವಡಿಸಿಕೊಳ್ಳುವಂತೆ ಸೂಚನೆ ನೀಡಬೇಕೆಂದು ಕೋರಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಶಿಕ್ಷಣ ಇಲಾಖೆಗೆ ಮನವಿ ಮಾಡಿತ್ತು. ಜತೆಗೆ, ದಿನಪತ್ರಿಕೆ ಓದುವ ಹವ್ಯಾಸದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಸಿದ್ಧತೆ, ಪ್ರಚಲಿತ ವಿದ್ಯಮಾನಗಳ ಸಾಮಾನ್ಯ ಜ್ಞಾನ ಅರಿಯಲು ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿತ್ತು. ದಿನಪತ್ರಿಕೆ ಓದುವುದರಿಂದ ಶಬ್ದಕೋಶ, ಭಾಷಾ ಶೈಲಿ, ಬರವಣಿಗೆ ಶೈಲಿಯನ್ನು ಸುಧಾರಿಸಿಕೊಳ್ಳಲು ಇದು ಸಹಕಾರಿಯಾಗುತ್ತದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿತ್ತು.

ವಿಜಯ ಕರ್ನಾಟಕ ಪ್ರಸ್ತಾವನೆ

ವಿಜಯ ಕರ್ನಾಟಕ ಪತ್ರಿಕೆಯು ವಿಕ ಕನ್ನಡ ಹಬ್ಬ ಸಂದರ್ಭದಲ್ಲಿ ರಾಜ್ಯ ಸರಕಾರದ ಮುಂದೆ-ಶಾಲೆಗಳಲ್ಲಿ ಕನ್ನಡ ದಿನಪತ್ರಿಕೆಗಳ ಓದು ಕಡ್ಡಾಯಗೊಳಿಸುವಂತೆ ಪ್ರಸ್ತಾವನೆ ಮುಂದಿಟ್ಟಿತ್ತು. ಈ ಬಗ್ಗೆ ಸಂಪಾದಕೀಯ ಬರೆದು ಗಮನ ಸೆಳೆದಿತ್ತು. ಇದನ್ನು ಆಧರಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಸರಕಾರಕ್ಕೆ ಮತ್ತೊಂದು ಪ್ರಸ್ತಾವನೆಯನ್ನು ಸಲ್ಲಿಸಿ, ಇದೊಂದು ಆಗಲೇಬೇಕಾದ ಕೆಲಸ ಎಂದು ಶಿಫಾರಸು ಮಾಡಿದ್ದರು.

> ಮಕ್ಕಳಿಗೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವು ಮೂಡಿಸಲು, ದಿನನಿತ್ಯದ ಆಗುಹೋಗುಗಳ ಜತೆಗೆ ಭಾಷಾ ಕೌಶಲ ಸುಧಾರಿಸಲು ದಿನಪತ್ರಿಕೆ ಓದುವುದು ಸಹಕಾರಿಯಾಗಲಿದೆ.
>
> **-ಶಶಿಧರ್ ಕೋಸಂಬೆ** ಮಾಜಿ ಅಧ್ಯಕ್ಷ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿದ ಶಿಕ್ಷಣ ಇಲಾಖೆ, ನಿತ್ಯ 10 ನಿಮಿಷಗಳ ಕಾಲ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಿದೆ. ಸರಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ ಜತೆಗೆ, ಸರಕಾರಿ ವಸತಿ ಶಾಲೆಗಳು ಹಾಗೂ ಸರಕಾರದಡಿಯ ನಾನಾ ಇಲಾಖೆಯಡಿ ಬರುವ ಶಾಲೆಗಳಿಗೂ ಈ ನಿಯಮ ಅನ್ವಯವಾಗಲಿದೆ.

ರಾಜ್ಯದ 1,082 ಯೋಜನೆಗಳ ನೆರವಿಗೆ ಪ್ರಸ್ತಾವನೆ: ಡಿಸಿಎಂ

ಬೆಂಗಳೂರು: ರಾಜ್ಯದ 1.25 ಲಕ್ಷ ಕೋಟಿ ರೂ. ಮೊತ್ತದ 1,082 ಯೋಜನೆಗಳ ಸಂಬಂಧ ಕೇಂದ್ರ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದಿಲ್ಲಿ ಭೇಟಿಗೆ ಸಂಬಂಧಿಸಿದಂತೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ''ಕೇಂದ್ರ ನಗರಾಭಿವೃದ್ಧಿ ಸಚಿವ ಮನೋಹರ್‌ಲಾಲ್ ಖಟ್ಟರ್ ಅವರು ಅರ್ಬನ್ ಚಾಲೆಂಜ್ ಫಂಡ್ ಮೂಲಕ ನಗರಾಭಿವೃದ್ಧಿಗೆ 1 ಲಕ್ಷ ಕೋಟಿ ಹಣ ಮೀಸಲಿಟ್ಟಿದ್ದು, ನಮ್ಮ ರಾಜ್ಯದ ಎಲ್ಲಾ ನಗರಗಳಿಗೂ ಸೇರಿ 5 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದಾರೆ. ಇದಕ್ಕೆ ಕೆಲವು ಮಾನದಂಡ ನಿಗದಿಪಡಿಸಿದ್ದು, ಅವುಗಳಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ,'' ಎಂದರು.

''ಕೇಂದ್ರ ಸರಕಾರ ಸುಮಾರು 32-35 ಸಾವಿರ ಕೋಟಿ ರೂ.ಗಳ ಪಾಲು ನೀಡಬೇಕಿದೆ. ಹೀಗಾಗಿ, ರಾಜ್ಯಕ್ಕೆ 5 ಸಾವಿರ ಕೋಟಿಗಿಂತ ಹೆಚ್ಚಿನ ಹಣ ನೀಡುವಂತೆ ಕೇಳಿದ್ದೇನೆ. ಬೇರೆ ರಾಜ್ಯದವರು ಈ ಅನುದಾನ ಪಡೆಯದಿದ್ದರೆ ಕರ್ನಾಟಕ ಪಡೆಯಲು ಸಿದ್ಧವಿದೆ ಎಂದು ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ,'' ಎಂದರು.

''ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿಗೆ ರಕ್ಷಣಾ ಇಲಾಖೆಯ ಜಾಗಗಳ ಅಗತ್ಯವಿದೆ. ಈ ವಿಚಾರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೇನೆ. ಸ್ಟ್ರೈಡೆಕ್ ಯೋಜನೆಗೆ ರಕ್ಷಣಾ ವಿಮಾನ ನಿಲ್ದಾಣ ಎಚ್‌ಎಎಲ್‌ನಿಂದ ಅಡ್ಡಿ ಎದುರಾಗಿತ್ತು. ಪ್ರೀಮಿಯಂ ಎಫ್‌ಎಆರ್ ವಿಚಾರವಾಗಿ ಚರ್ಚೆಯಾಗಿದೆ,'' ಎಂದು ತಿಳಿಸಿದರು.

ನಂಬಿಯಾರ್‌ಗೆ ಪಾರ್ತಿಸುಬ್ಬ ಪ್ರಶಸ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು



ಕರ್ನಾಟಕ ಯಕ್ಷಗಾನ ಅಕಾಡೆಮಿ ನೀಡುವ 2025ನೇ ಸಾಲಿನ ಪ್ರತಿಷ್ಠಿತ 'ಪಾರ್ತಿಸುಬ್ಬ ಪ್ರಶಸ್ತಿ'ಗೆ ಯಕ್ಷಗಾನ ಸಂಶೋಧಕ ಡಾ. ಕೆ.ಎಂ. ರಾಘವ ನಂಬಿಯಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು 1 ಲಕ್ಷ ರೂ. ನಗದು ಹಾಗೂ ಸ್ಮರಣಿಕೆ ಒಳಗೊಂಡಿದ್ದು, ಪ್ರಶಸ್ತಿಯನ್ನು ಮೇ 3ರಂದು ಉಡುಪಿ ಜಿಲ್ಲೆ ಅಂಬಲಪಾಡಿಯ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದಲ್ಲಿ ಪ್ರದಾನ ಮಾಡಲಾಗುತ್ತದೆ.

ಇದೇ ವೇಳೆ 2025ನೇ ಸಾಲಿನ ಗೌರವ ಪ್ರಶಸ್ತಿ, ಯಕ್ಷಸಿರಿ ಪ್ರಶಸ್ತಿ, ದತ್ತಿ ನಿಧಿ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಉಡುಪಿ ಜಿಲ್ಲಾ ಶಾಸಕರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಮೂವರ ಅಮಾನತು

■ **ವಿಕ ಸುದ್ದಿಲೋಕ** ಬಾಗಲಕೋಟೆ

ಪಕ್ಷ ವಿರೋಧಿ ಚಟುವಟಿಕೆ

ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಕಮತಗಿಯ ಮೂವರು ಮುಖಂಡರನ್ನು ಅಮಾನತುಗೊಳಿಸಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ ಭಾನುವಾರ ಆದೇಶ ಹೊರಡಿಸಿದ್ದಾರೆ.

ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ, ಪಟ್ಟಣ ಪಂಚಾಯಿತಿ ಸದಸ್ಯರಾದ ರಮೇಶ ಜಮಖಂಡಿ ಹಾಗೂ ಗುರು ಪಾಟೀಲ ಅವರನ್ನು ಕಾಂಗ್ರೆಸ್‌ನಿಂದ ಅಮಾನುತುಗೊಳಿಸಲಾಗಿದೆ.

ಬಾಗಲಕೋಟೆ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್.ಎನ್. ರಾಂಪೂರ ಈ ಮೂವರ ವಿರುದ್ಧ ಪಕ್ಷ ವಿರೋಧಿ ಚಟುವಟಿಕೆ ಕುರಿತು ವರದಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿತ್ತು. ನೋಟಿಸ್‌ಗೆ ಸೂಕ್ತ ಉತ್ತರ ಬಾರದ್ದರಿಂದ ಅಮಾನತು ಮಾಡಿ ಆದೇಶಿಸಲಾಗಿದೆ ಎಂದು ಎಸ್.ಜಿ.ನಂಜಯ್ಯನಮಠ ತಿಳಿಸಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಬೆಂಗಳೂರಿನ ಆತ್ಮ ಅನಾವರಣ

■ **ವಿಕ ಸುದ್ದಿಲೋಕ** ಬೆಂಗಳೂರು

ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ಬೆಂಗಳೂರಿನ ಆತ್ಮ' ಹೆಸರಿನ ಸುಂದರ ಹಾಗೂ ಬೃಹತ್ ಕಲಾತ್ಮಕ ಶಿಲ್ಪ ಅನಾವರಣಗೊಂಡಿದ್ದು, ಟರ್ಮಿನಲ್-2ರ ಸೌಂದರ್ಯಕ್ಕೆ ಹೊಸ ಮೆರುಗು ಬಂದಿದೆ.

ಜಾಗತಿಕ ಖ್ಯಾತಿ ಗಳಿಸಿರುವ ಬೆಂಗಳೂರಿನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ, ಬಯೋಕಾನ್ ಫೌಂಡೇಷನ್ ಮತ್ತು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಸಹಯೋಗದಲ್ಲಿ ಈ ಕಲಾತ್ಮಕ ಶಿಲ್ಪವನ್ನು ಟರ್ಮಿನಲ್-2ರ ಮುಂಭಾಗ ರೂಪಿಸಲಾಗಿದೆ.

ಸ್ಪೇನ್‌ನ ಖ್ಯಾತ ಕಲಾಕಾರ ಜೌಮೆ ಪ್ಲೆನ್ಸಾ ಅವರ ಕಲ್ಪನೆಯಲ್ಲಿ ಮೂಡಿ ಬಂದಿರುವ ಈ ಶಿಲ್ಪವು ಪ್ರಯಾಣಿಕರ ಕಣ್ಮನ ಸೆಳೆಯುತ್ತಿದೆ. ಇದರ ಕಲಾವಿದ ಜೌಮೆ ಪ್ಲೆನ್ಸಾ ಅವರು ಚಿಕಾಗೊ, ನ್ಯೂಯಾರ್ಕ್, ಲಂಡನ್, ಟೋಕಿಯೊ, ಬಾರ್ಸಿಲೋನಾ, ಮ್ಯಾಡ್ರಿಡ್ ಸೇರಿದಂತೆ ಜಗತ್ತಿನ ಬಹುದೊಡ್ಡ ಮಹಾನಗರಗಳಲ್ಲಿ ತಮ್ಮ ಸಾರ್ವಜನಿಕ ಕಲಾಕೃತಿಗಳ ಮೂಲಕ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿದ್ದಾರೆ.



ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗಣ್ಯರು 'ಬೆಂಗಳೂರಿನ ಆತ್ಮ' ಬೃಹತ್ ಕಲಾತ್ಮಕ ಶಿಲ್ಪ ಅನಾವರಣಗೊಳಿಸಿದರು.

ಶ್ರೇಯಾಂಕದಲ್ಲಿ ಮುನ್ನಡೆ

ವಿಶ್ವದರ್ಜೆಯ ಮೂಲಸೌಕರ್ಯಗಳನ್ನು ವಿಶಿಷ್ಟ ವಿನ್ಯಾಸ ಮತ್ತು ಕಲಾತ್ಮಕ ಅಭಿವ್ಯಕ್ತಿಯೊಂದಿಗೆ ಸಂಯೋಜಿಸುವ ಮೂಲಕ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಈಗಾಗಲೇ ಸಾಂಸ್ಕೃತಿಕ ಹೆಬ್ಬಾಗಿಲು ಎಂದು ಗುರುತಾಗಿದೆ. ಈ ಕಲಾಕೃತಿಯ ಸ್ಥಾಪನೆ ಇದಕ್ಕೆ ಮತ್ತಷ್ಟು ಮೆರುಗು ನೀಡಿದೆ. ಸ್ಕೈಟ್ರ್ಯಾಕ್ಸ್‌ನ 2026ರ 'ವಿಶ್ವದ ಅತ್ಯುತ್ತಮ ಕಲಾ ವಿಮಾನ ನಿಲ್ದಾಣ' ಶ್ರೇಯಾಂಕ ಪಟ್ಟಿಯಲ್ಲಿ 8ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಜಿಗಿದಿದೆ.

ಭಾರತದಲ್ಲಿನ ಸ್ಪೇನ್ ರಾಯಭಾರಿ ಜುವಾನ್ ಆಂಟೋನಿಯೊ ಮಾರ್ಚ್ ಪೂಜೋಲ್ ಈ ಕಲಾಕೃತಿಯನ್ನು ಅನಾವರಣಗೊಳಿಸಿದರು. ಸಚಿವ ಪ್ರಿಯಾಂಕ್ ಖರ್ಗೆ, ಬಯೋಕಾನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹರಿ ಮರಾರ್ ಮತ್ತು ಕಲಾಕೃತಿ ರೂವಾರಿ ಜೌಮೆ ಪ್ಲೆನ್ಸಾ ಉಪಸ್ಥಿತರಿದ್ದರು.

ಕಲಾಕೃತಿಯ ವೈಶಿಷ್ಟ್ಯ

ಬಣ್ಣ ಬಳಿದಿರುವ ಸ್ಟೇನ್ಲೆಸ್ ಸ್ಟೀಲ್ ಲೋಹದಿಂದ ಈ ಕಲಾಕೃತಿ ರೂಪಿಸಲಾಗಿದೆ. ಇದು 500X319X375 ಸೆಂ.ಮೀ ಗಾತ್ರ ಹೊಂದಿದೆ. ಬೆಂಗಳೂರು ನಗರವು ಹೇಗೆ ಭಿನ್ನ-ವಿಭಿನ್ನ ಸಂಸ್ಕೃತಿಗಳು, ನಾವೀನ್ಯತೆ ಹಾಗೂ ಸೃಜನಶೀಲತೆಯ ಸಂಗಮವಾಗಿದೆ ಎಂಬುದನ್ನು ಈ ಕಲಾಕೃತಿ ಪ್ರತಿನಿಧಿಸುತ್ತದೆ.

ಬಯೋಕಾನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಮಾತನಾಡಿ, ''ನಗರವೊಂದರ ಅಭಿವೃದ್ಧಿ ಎಂದರೆ ಕೇವಲ ಮೂಲ ಸೌಕರ್ಯಗಳಲ್ಲಿ ಹೂಡಿಕೆ ಮಾಡುವುದಲ್ಲ, ಕಲೆ ಮತ್ತು ಸಂಸ್ಕೃತಿಯಲ್ಲೂ ಹೂಡಿಕೆ ಮಾಡುವುದು ಅತ್ಯಗತ್ಯ ಎಂಬುದು ಬಯೋಕಾನ್ ಫೌಂಡೇಷನ್‌ನ ನಂಬಿಕೆಯಾಗಿದೆ. ಇಂತಹ ಸಾರ್ವಜನಿಕ ಕಲಾಕೃತಿಗಳು ನಾಗರಿಕರು ಬಳಸುವ ಸ್ಥಳಗಳಿಗೆ ಮಾನವೀಯತೆಯ ಸ್ಪರ್ಶ ನೀಡುತ್ತವೆ,'' ಎಂದರು.

'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್' ಸಮಾರೋಪದಲ್ಲಿ ಡಾ. ಸೆಲ್ವಕುಮಾರ್

ದೇಶದ ಜಿಡಿಪಿಯಲ್ಲಿ ಕೃಷಿ ಪಾಲು ಹೆಚ್ಚಲಿ

■ **ವಿಕ ಸುದ್ದಿಲೋಕ** ಬೆಂಗಳೂರು

''ದೇಶದ ಶೇ.55 ರಷ್ಟು ಜನರು ಕೃಷಿಯಲ್ಲಿ ತೊಡಗಿದ್ದರೂ ಜಿಡಿಪಿಯಲ್ಲಿ ಕೃಷಿಯ ಪಾಲು ಶೇ.15 ರಿಂದ 18 ಮಾತ್ರ'' ಎಂದು ವಾಣಿಜ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿಐ), ರಾಜ್ಯ ಕೃಷಿ ಇಲಾಖೆ, ಕೆಪೆಕ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸೇರಿದಂತೆ ನಾನಾ ಸಂಸ್ಥೆಗಳ ಸಹಯೋಗದೊಂದಿಗೆ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 'ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್' ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.

''ದೇಶದ ಜಿಡಿಪಿಯಲ್ಲಿ ಕೃಷಿ ಪಾಲು ಹೆಚ್ಚಳವಾದರೆ ರೈತರು, ಉದ್ಯಮಿಗಳು, ಗ್ರಾಹಕರಿಗೂ ಅನುಕೂಲವಾಗುತ್ತದೆ. ರೈತರು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ ಅಧಿಕ ಲಾಭ ಗಳಿಸಬೇಕು. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯಗಳು, ತೋಟಗಾರಿಕಾ ವಿವಿಗಳು, ಪಶು ಸಂಗೋಪನೆ, ಕೃಷಿ ಸೇರಿದಂತೆ ಸರಕಾರದ ಇಲಾಖೆಗಳು, ಸಂಘ-ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಸಹಕಾರ ನೀಡಬೇಕು. ಇದರಲ್ಲಿ ಕೆಪೆಕ್ ಪಾತ್ರ ಬಹಳ ಮುಖ್ಯವಾಗಿದೆ. ಕೃಷಿ ಇಲಾಖೆಯಿಂದ ನಾವು ಅಗತ್ಯ ಪ್ರೋತ್ಸಾಹ ನೀಡುತ್ತಿದ್ದೇವೆ,'' ಎಂದು ಸ್ಪಷ್ಟಪಡಿಸಿದರು.

ಕೃಷಿಯಲ್ಲಿ ತಾಂತ್ರಿಕತೆ ಬಳಕೆಯಾಗಬೇಕು: ''ಕಡಿಮೆ ವೆಚ್ಚದಲ್ಲಿ ತಾಂತ್ರಿಕತೆಯನ್ನು ರೈತರಿಗೆ ನೀಡಿದರೆ ಅವರು ಲಾಭಾಂಶ ಹೆಚ್ಚಿಸಿಕೊಳ್ಳುತ್ತಾರೆ. ಜತೆಗೆ, ಹೆಚ್ಚು ಉತ್ಪಾದನೆಗೂ ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿ ಪೂರಕ ಸಂಸ್ಥೆಗಳು ಅಗತ್ಯ ನೆರವು ನೀಡಬೇಕು,'' ಎಂದರು.

ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಡಾ. ಬಿ.ಸಿ. ಮುದ್ದುಗಂಗಾಧರ್, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು.

ಕಳೆದ ಮೂರು ದಿನಗಳಿಂದ ನಡೆದ ಸಮ್ಮೇಳನದಲ್ಲಿ ರಾಜ್ಯದ ನಾನಾ ಭಾಗಗಳಿಂದ ರೈತ ಸಂಸ್ಥೆಗಳು, ಉದ್ಯಮಿಗಳು, ನಾನಾ ಇಲಾಖೆ ಮತ್ತು ಸಂಸ್ಥೆಗಳು, ಸ್ವ ಸಹಾಯ ಸಂಘಗಳು ಮಳಿಗೆಗಳನ್ನು ತೆರೆದಿದ್ದವು. ಕೃಷಿ ಕೆಲಸಗಳಿಗೆ ಬೇಕಾದ ಯಂತ್ರೋಪಕರಣಗಳು, ಸ್ಟಾರ್ಟಪ್‌ಗಳೂ ಸೇರಿದಂತೆ ಹಲವು ಆಕರ್ಷಣೆಗಳಿದ್ದವು. ಭಾನುವಾರ ರಜೆಯಿದ್ದುದರಿಂದ ಸಹಸ್ರಾರು ಸಂಖ್ಯೆಯಲ್ಲಿ ಜನ ಆಗಮಿಸಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ-2 ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ಗೆ ನೋಂದಾಯಿಸಿಕೊಂಡು ಶೇ.75ಕ್ಕಿಂತ ಕಡಿಮೆ ಹಾಜರಾತಿ ಹಿನ್ನೆಲೆಯಲ್ಲಿ ಪರೀಕ್ಷೆ ಬರೆಯದ ಅಭ್ಯರ್ಥಿಗಳಿಗೆ ಪರೀಕ್ಷೆ-2ಗೆ ನೋಂದಾಯಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅವಕಾಶ ನೀಡಿದೆ.

ಹಾಜರಾತಿ ಕೊರತೆಯಿಂದ ಪರೀಕ್ಷೆ-1ಗೆ ಹಾಜರಾಗದ ವಿದ್ಯಾರ್ಥಿಗಳು, ಎಸ್ಸೆಸ್ಸೆಲ್ಸಿ ಪರೀಕ್ಷೆ-2ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ ನೋಂದಾಯಿಸಲು ಅವಕಾಶ ಇರಲಿದೆ ಎಂದು ಮಂಡಳಿ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

ಶೇ.75ಕ್ಕಿಂತ ಕಡಿಮೆ ಹಾಜರಾತಿ

2026ರ ಮಾ.1ಕ್ಕೆ 15 ವರ್ಷ ವಯೋಮಿತಿ ಪೂರೈಸಿದವರು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆ-2ಗೆ ನೋಂದಾಯಿಸಿಕೊಳ್ಳಲು ಅವಕಾಶ ಇದೆ. ಅಂತಹವರು ಸರಕಾರಿ/ಸರಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಾಲೆಗಳಿಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಬಹುದು. 15 ವರ್ಷ ತುಂಬದ ಅಭ್ಯರ್ಥಿ ನೋಂದಾಯಿಸಿದರೆ ಪರೀಕ್ಷೆಗೆ ಅವಕಾಶವಿರುವುದಿಲ್ಲ ಎಂದು ಮಂಡಳಿ ಸ್ಪಷ್ಟಪಡಿಸಿದೆ. 2026ರ ಪರೀಕ್ಷೆ-2ರಲ್ಲಿ ನೋಂದಾಯಿತ ಅಭ್ಯರ್ಥಿಗಳಿಗೆ ಇದು ಪ್ರಥಮ ಪ್ರಯತ್ನವಾಗಿರುತ್ತದೆ. ಈ ಪರೀಕ್ಷೆಯಿಂದ ಸತತ ಆರು ಪ್ರಯತ್ನಗಳ ಒಳಗಾಗಿ ಉತ್ತೀರ್ಣ ಹೊಂದಲು ಅವಕಾಶ ಇರಲಿದೆ. ಎಲ್ಲಾ ಪ್ರಯತ್ನಗಳಲ್ಲೂ ವಿಫಲವಾಗುವ ಅಭ್ಯರ್ಥಿ, ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ ವಿಷಯಗಳ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಮಂಡಳಿ ತಿಳಿಸಿದೆ.

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	7	6	0	1	13	+1.333
ಬೆಂಗಳೂರು	7	5	2	0	10	+1.101
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಗುಜರಾತ್	8	4	4	0	08	-0.475
ಚೆನ್ನೈ	8	3	5	0	06	0.121
ಡೆಲ್ಲಿ	7	3	4	0	06	-0.184
ಕೋಲ್ಕೊತಾ	8	2	5	1	05	-0.751
ಮುಂಬಯಿ	7	2	5	0	04	-0.736
ಲಖನೌ	8	2	6	0	04	-1.106

380 ರನ್ **ಅಭಿಷೇಕ್ ಶರ್ಮ** ರಾಜಸ್ಥಾನ ರಾಯಲ್ಸ್

14 ವಿಕೆಟ್ **ಅಂಶುಲ್ ಕಾಂಬೋಜ್** ಚೆನ್ನೈ ಸೂಪರ್ ಕಿಂಗ್ಸ್

ಸಾವೆ ಮ್ಯಾರಥಾನ್ ವಿಶ್ವ ದಾಖಲೆ



ಲಂಡನ್: ಕೀನ್ಯಾದ ಸಬಾಸ್ಟಿಯನ್ ಸಾವೆ ಅಧಿಕೃತ ಪೂರ್ಣ ಮ್ಯಾರಥಾನ್ ಓಟವನ್ನು 2 ಗಂಟೆಯ ಒಳಗೆ ಪೂರ್ಣಗೊಳಿಸಿದ ಮೊದಲ ಅಥ್ಲೀಟ್ ಎಂಬ ಹಿರಿಮೆಗೆ ಭಾಜನರಾಗಿದ್ದಾರೆ. ಭಾನುವಾರ ಲಂಡನ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಅವರು 1 ಗಂಟೆ 59 ನಿಮಿಷ 30 ಸೆಕೆಂಡ್‌ಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟಿದರು. ಇದರೊಂದಿಗೆ 2023ರ ಚಿಕಾಗೊ ಮ್ಯಾರಥಾನ್‌ನಲ್ಲಿ ಕೀನ್ಯಾದ ಕೆಲ್ವಿನ್ ಕಿಪ್ಟುಮ್ ನಿರ್ಮಿಸಿದ್ದ 2.00: 35 ಸೆ.ಗಳ ವಿಶ್ವ ದಾಖಲೆಯನ್ನು ಅಳಿಸಿ ಹೊಸ ದಾಖಲೆ ಬರೆದರು. ಗಮನಾರ್ಹ ಸಂಗತಿ ಎಂದರೆ ಇಥಿಯೋಪಿಯಾದ ಯೊಮಿಫ್ ಕೆಜೆಲ್ಚಾ (1.59.41:) ಮತ್ತು ಉಗಾಂಡದ ಜಾಕೋಬ್ ಕಿಪ್ಲಿಮೊ (2.00.28 ಸೆ.) ವಿಶ್ವದಾಖಲೆ ಹಿಂದಿಕ್ಕಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಶೂಟಿಂಗ್ ವಿಶ್ವಕಪ್: ಭಾರತಕ್ಕೆ ಅಗ್ರಸ್ಥಾನ

ಕೈರೊ: ಹೇಮಂತ್ ಬರ್ಮನ್ ಪುರುಷರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರೆ, ಟ್ರ್ಯಾಪ್ ಮಿಶ್ರ ತಂಡ ವಿಭಾಗದ ಸ್ಪರ್ಧೆಯಲ್ಲಿ ಜುಹೈರ್ ಖಾನ್ ಮತ್ತು ಆದ್ಯ ಕತ್ಯಾಲ್ ಜೋಡಿ ಕಂಚಿನ ಪದಕ ಜಯಿಸಿತು. ಇದರೊಂದಿಗೆ ಭಾರತ ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನಲ್ಲಿ ಒಟ್ಟಾರೆ 16 ಪದಕಗಳೊಂದಿಗೆ(5 ಚಿನ್ನ, 6 ಬೆಳ್ಳಿ ಮತ್ತು 5 ಕಂಚು) ಅಭಿಯಾನ ಕೊನೆಗೊಳಿಸಿತು. ಕೂಟದ ಅಂತಿಮ ದಿನವಾದ ಭಾನುವಾರ ಬರ್ಮನ್ 351.7 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಗಳಿಸಿದರು. ಈ ಮಧ್ಯೆ, ಜುಹೈರ್ ಮತ್ತು ಆದ್ಯಾ ಜೋಡಿ 19 ಅಂಕಗಳೊಂದಿಗೆ ಮೂರನೇ ಸ್ಥಾನ ಗಳಿಸಿತು.

ಕೊನೆ ದಿನವೂ ದಾಖಲೆಗಳ ಪತನ

ತುಮಕೂರು: ಅಭಯ್ ಸಿಂಗ್ ಸೇರಿದಂತೆ ಅನೇಕ ಅಥ್ಲೀಟ್‌ಗಳು ಇಲ್ಲಿ ಮುಕ್ತಾಯಗೊಂಡ 24ನೇ ರಾಷ್ಟ್ರೀಯ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಫೆಡರೇಷನ್ ಸ್ಪರ್ಧೆಯ ಅಂತಿಮ ದಿನವೂ ದಾಖಲೆಗಳನ್ನು ಮೀರಿದ ಪ್ರದರ್ಶನ ನೀಡಿದರು. ಪದಕ ವಿಜೇತ ಬಹುತೇಕರು ತಮ್ಮತಮ್ಮ ಸ್ಪರ್ಧೆಗಳಲ್ಲಿ ಏಷ್ಯನ್ ಜೂನಿಯರ್ ಅರ್ಹತಾ ಮಾನದಂಡವನ್ನು ಮೀರಿದರು. ಭಾನುವಾರ ನಡೆದ ಪುರುಷರ 200 ಮೀ. ಸ್ಪರ್ಧೆಯಲ್ಲಿ ಅಭಯ್ 20.82 ಸೆ.ಗಳಲ್ಲಿ ಗುರಿ ಮುಟ್ಟಿ ದಾಖಲೆ ಬರೆದರು. ಇದರೊಂದಿಗೆ 2021ರಲ್ಲಿ ಎನ್. ಶ್ರೀನಿವಾಸ್ ನಿರ್ಮಿಸಿದ್ದ 21.02 ಸೆ.ಗಳ ದಾಖಲೆಯನ್ನು ಅಳಿಸಿದರು. ಪುರುಷರ ಹೈಜಂಪ್‌ನಲ್ಲಿ ಬಸಂತ್(2.21 ಮೀ.) ಚಿನ್ನ ಗೆದ್ದು ಅಜಯ್ ಕುಮಾರ್ ಅವರ 2.19 ಮೀ. ದಾಖಲೆಯನ್ನು ಹಿಂದಿಕ್ಕಿದರು.

ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ಕ್ಯಾಪಿಟಲ್ಸ್‌ಗೆ ರಾಯಲ್ ಚಾಲೆಂಜರ್ಸ್ ಸವಾಲು

ಆರ್‌ಸಿಬಿಗೆ ಸೇಡು ತೀರಿಸುವ ತವಕ

ಹೊಸದಿಲ್ಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಸೋಮವಾರ ನಡೆಯಲಿರುವ ಐಪಿಎಲ್‌ನ 39ನೇ ಪಂದ್ಯದಲ್ಲಿ ಪೈಪೋಟಿ ನಡೆಸಲಿವೆ. ತನ್ನ ಹಿಂದಿನ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಗೆದ್ದು ಗೆಲುವಿನ ಲಯಕ್ಕೆ ಮರಳಿರುವ ರಾಯಲ್ ಚಾಲೆಂಜರ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಹಿಂದಿನ ಸೋಲಿಗೆ ಮುಯ್ಯಿ ತೀರಿಸಿಕೊಳ್ಳಲು ಹವಣಿಸುತ್ತಿದೆ.

ವಿರಾಟ್ ಕೊಹ್ಲಿ ಮತ್ತು ದೇವದತ್ ಪಡಿಕ್ಕಲ್ ಫಾರ್ಮ್‌ಗೆ ಮರಳಿದ ಬಳಿಕ ಗೆಲುವಿನ ಲಯ ಕಂಡುಕೊಂಡಿರುವ ಕಳೆದ ಬಾರಿಯ ಚಾಂಪಿಯನ್ ಆರ್‌ಸಿಬಿ, ಜೇಟ್ಲಿ ಕ್ರೀಡಾಂಗಣದಲ್ಲಿ ತನ್ನ ಅಬ್ಬರವನ್ನು ಅನಾವರಣಗೊಳಿಸಲು ಸಜ್ಜಾಗಿದೆ. ಸದ್ಯ ಹತ್ತು ಅಂಕಗಳನ್ನು ಹೊಂದಿರುವ ರಜತ್ ಪಾಟೀದಾರ್ ಬಳಗ, ಸ್ಥಿರ ಪ್ರದರ್ಶನ ದೊಂದಿಗೆ ಪ್ಲೇಆಫ್ ಹಂತವನ್ನು ಸುಗಮ ಮಾಡಿಕೊಳ್ಳುವ ಗುರಿಯಲ್ಲಿದೆ. ಏಪ್ರಿಲ್ 18ರಂದು ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಡೆಲ್ಲಿ ಎದುರು ಮಂಡಿಯೂರಿದ್ದ ಆರ್‌ಸಿಬಿ, ಈಗ ಹಿಂದಿನ ಸೋಲಿಗೆ ತಿರುಗೇಟು ನೀಡುವ ಅವಕಾಶವನ್ನು ಹೊಂದಿದೆ. ಆದರೆ ಇದರಲ್ಲಿ ಯಶಸ್ವಿಯಾಗುತ್ತದೆಯೋ ಎಂಬುದು ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ.

ದೇವದತ್ ಪಡಿಕ್ಕಲ್


ಕೆ.ಎಲ್. ರಾಹುಲ್

ಅತ್ತ ಪಂಜಾಬ್ ಕಿಂಗ್ಸ್ ವಿರುದ್ಧ 264 ರನ್ ಗಳಿಸಿಯೂ ಪಂದ್ಯ ಉಳಿಸಿಕೊಳ್ಳುವಲ್ಲಿ ವಿಫಲಗೊಂಡಿರುವ ಅಕ್ಷರ್ ಪಟೇಲ್ ಸಾರಥ್ಯದ ಡೆಲ್ಲಿ, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸ್ಥಿರ ಪ್ರದರ್ಶನ ನೀಡುತ್ತಿರುವ ಆರ್‌ಸಿಬಿಯನ್ನು ಕಟ್ಟಿಹಾಕುವ ಒತ್ತಡದಲ್ಲಿದೆ. ನಿತೀಶ್ ರಾಣಾ ಮತ್ತು ಕೆ.ಎಲ್. ರಾಹುಲ್ ದ್ವಿತೀಯ ವಿಕೆಟ್‌ಗೆ ದಾಖಲೆಯ 220 ರನ್ ಗಳಿಸಿದರು. ಆದರೆ ನಿಸ್ತೇಜ ಬೌಲಿಂಗ್ ಪ್ರದರ್ಶನದಿಂದಾಗಿ ಡೆಲ್ಲಿ 4ನೇ ಸೋಲಿಗೆ ಗುರಿಯಾಗಿದೆ.

34	13	20
ಮುಖಾಮುಖಿ	ಡೆಲ್ಲಿ ಗೆಲುವು	ಆರ್‌ಸಿಬಿ ಜಯ

01 ಫಲಿತಾಂಶ ರಹಿತ

ತನ್ನ ಹಿಂದಿನ ಐದು ಪಂದ್ಯಗಳ ಪೈಕಿ ನಾಲ್ಕು ಸೋಲು ಮತ್ತು 1ರಲ್ಲಿ ಮಾತ್ರ ಗೆದ್ದಿರುವ ಕ್ಯಾಪಿಟಲ್ಸ್, ಮುಂದಿನ ಹಾದಿಯನ್ನು ಸುಗಮ ಮಾಡಿಕೊಳ್ಳಬೇಕಾದರೆ ಆಲ್‌ರೌಂಡ್ ಪ್ರದರ್ಶನ ನೀಡುವುದರ ಜತೆಗೆ ಗೆಲುವಿನ ಹಾದಿಗೆ ಮರಳಬೇಕಿದೆ. ಒಟ್ಟಾರೆ ಆರ್‌ಸಿಬಿ ಎದುರಿನ ಪಂದ್ಯದ ಡೆಲ್ಲಿ ತಂಡಕ್ಕೆ ನೈಜ ಪರೀಕ್ಷೆಯಾಗಿದೆ. ಉಭಯ ತಂಡಗಳು 34ರಲ್ಲಿ ಮುಖಾಮುಖಿಯಾಗಿದ್ದು, ಡೆಲ್ಲಿ 13 ಮತ್ತು ಆರ್‌ಸಿಬಿ 20ರಲ್ಲಿ ಜಯ ಸಾಧಿಸಿವೆ. ಜೇಟ್ಲಿ ಕ್ರೀಡಾಂಗಣ ಬ್ಯಾಟಿಂಗ್ ಸ್ನೇಹಿಯಾಗಿದ್ದು, ರನ್ ಮಳೆ ಸುರಿಯುವ ನಿರೀಕ್ಷೆಯಿದೆ.

ಪಂದ್ಯ ಆರಂಭ: ರಾತ್ರಿ 7.30

ಸ್ಥಳ: ಅರುಣ್ ಜೇಟ್ಲಿ ಕ್ರೀಡಾಂಗಣ, ಹೊಸದಿಲ್ಲಿ

ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಜಯದ ಹಳಿಗೆ ಮರಳಿದ ಟೈಟನ್ಸ್

ಬ್ಯಾಟಿಂಗ್ ವೈಫಲ್ಯಕ್ಕೆ ದಂಡ ತೆತ್ತ ಚೆನ್ನೈ ಸೂಪರ್ ಕಿಂಗ್ಸ್

ಸಾಯಿ ಸುದರ್ಶನ್

ಚೆನ್ನೈ: ಕಗಿಸೊ ರಬಾಡ ಅವರ ಮಾರಕ ಬೌಲಿಂಗ್ ದಾಳಿಯ ನಂತರ ಸಾಯಿ ಸುದರ್ಶನ್ ಅವರ ಮಿಂಚಿನ ಅರ್ಧಶತಕದ ಸೊಬಗಿನಿಂದ ಗುಜರಾತ್ ಟೈಟನ್ಸ್ ತಂಡ 8 ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಬಗ್ಗು ಬಡಿಯಿತು. ಇದರೊಂದಿಗೆ ಸತತ ಎರಡು ಸೋಲುಗಳ ನಂತರ ಹೊರಬಂದ ಟೈಟನ್ಸ್, ಟೂರ್ನಿಯಲ್ಲಿ ನಾಲ್ಕನೇ ಜಯ ಗಳಿಸಿತು. ಅತ್ತ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಚೆನ್ನೈ, ಐದನೇ ಸೋಲಿಗೆ ಗುರಿಯಾಯಿತು.

ಎಂ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಡಬಲ್ ಹೆಡರ್‌ನ ಮೊದಲ ಪಂದ್ಯದಲ್ಲಿ 159 ರನ್‌ಗಳ ಸ್ಪರ್ಧಾತ್ಮಕ ರನ್‌ಗಳ ಗುರಿ ಬೆನ್ನಟ್ಟಿದ ಗುಜರಾತ್, ಕೇವಲ 16.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 162 ರನ್ ಪೇರಿಸಿತು. ಸಾಯಿ ಸುದರ್ಶನ್ 46 ಎಸೆತಗಳಲ್ಲಿ 4 ಫೋರ್, 7 ಸಿಕ್ಸರ್ ಒಳಗೊಂಡ 87 ರನ್ ಕೊಡುಗೆ ನೀಡಿದರೆ, ನಾಯಕ ಶುಬ್ಮನ್ ಗಿಲ್(33) ಮತ್ತು ಬಟ್ಲರ್(39*) ತಂಡವನ್ನು ಸುಲಭವಾಗಿ ಗೆಲುವಿನ ದಡ ಸೇರಿಸಿದರು.

ಇದಕ್ಕೂ ಮುನ್ನ ಕಗಿಸೊ ರಬಾಡ(25ಕ್ಕೆ 3) ಮತ್ತು ಅರ್ಷದ್ ಖಾನ್(43ಕ್ಕೆ 2) ಅವರ ದಾಳಿಗೆ ನಲುಗಿದ 5 ಬಾರಿಯ ಚಾಂಪಿಯನ್ ಸಿಎಸ್‌ಕೆ, ಸವಾಲಿನ ಮೊತ್ತ ಗಳಿಸಲು ವಿಫಲಗೊಂಡಿತು. ಮತ್ತೆ ಧೋನಿ ಅವರ ಅನುಪಸ್ಥಿತಿಯಲ್ಲಿ ಆಡಿದ ಚೆನ್ನೈಗೆ ಸಂಜು ಸ್ಯಾಮ್ಸನ್ ನಿರಾಸೆ ಮೂಡಿಸಿದರು. ಆದರೆ ನಾಯಕ ಋತುರಾಜ್ ಗಾಯಕ್ವಾಡ್ (74; 60 ಎಸೆತ) ಏಕಾಂಗಿ ಹೋರಾಟ ನಡೆಸಿ ತಂಡದ ಪರ ಗರಿಷ್ಠ ರನ್ ಗಳಿಸಿದರು. ಮಧ್ಯಮ ಹಾಗೂ ಕೆಳ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಕಂಡಿದ್ದು, ತಂಡದ ಯೋಜನೆಗೆ ಹಿನ್ನಡೆಯಾಯಿತು.

ಸಂಕ್ಷಿಪ್ತ ಸ್ಕೋರ್

ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 158 (ಋತುರಾಜ್ ಗಾಯಕ್ವಾಡ್ 74, ಶಿವಂ ದುಬೆ 22, ಜೇಮಿ ಓವರ್ಟನ್ 18; ರಬಾಡ 25ಕ್ಕೆ 3, ಅರ್ಷದ್ 43ಕ್ಕೆ 2).

ಗುಜರಾತ್ ಟೈಟನ್ಸ್: 16.4 ಓವರ್‌ಗಳಲ್ಲಿ 2 ವಿಕೆಟ್‌ಗೆ 162 (ಸಾಯಿ ಸುದರ್ಶನ್ 87, ಬಟ್ಲರ್ 39*, ಶುಬ್ಮನ್ 33; ನೂರ್ ಅಹ್ಮದ್ 29ಕ್ಕೆ 1).

ಕ್ವಿಜೆರಾ, ಫ್ಲಾರೆನ್ಸ್ ಬೆಂಗಳೂರು ವಿಶ್ವ 10ಕೆ ಚಾಂಪಿಯನ್ಸ್

■ ವಿಕ ಸುದ್ದಿಲೋಕ ಬೆಂಗಳೂರು

ಭಾರತೀಯರ ಪೈಕಿ ಸಂಜೀವನಿ, ಹರ್ಮನ್‌ಜೋತ್‌ಗೆ ಪ್ರಶಸ್ತಿ

ಕೀನ್ಯಾ, ಇಥಿಯೋಪಿಯಾ ಅಥ್ಲೀಟ್‌ಗಳ ತುರುಸಿನ ಪೈಪೋಟಿ ಮತ್ತು ಚುರುಗುಟ್ಟುವ ಬಿಸಿಲಿನ ನಡುವೆಯೂ ಬುರುಂಡಿಯಾದ ರೋಡ್ರಿಗಸ್ ಕ್ವಿಜೆರಾ ಮತ್ತು ರುವಾಂಡಾದ ಫ್ಲಾರೆನ್ಸ್ ನಿಯೋಂಕುರು ಟಿಸಿಎಸ್ ವಿಶ್ವ 10 ಕೆ ಬೆಂಗಳೂರು ಓಟದ ಅಂತಾರಾಷ್ಟ್ರೀಯ ಎಲೈಟ್ ವಿಭಾಗದಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ನೂತನ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ನಗರದ ಮಾಣೆಕ್ ಶಾ ಮೈದಾನದಲ್ಲಿ ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೇಸ್‌ನ 18ನೇ ಆವೃತ್ತಿಯಲ್ಲಿ 26 ವರ್ಷದ ಕ್ವಿಜೆರಾ 27 ನಿಮಿಷ 31 ಸೆಕೆಂಡ್‌ಗಳಲ್ಲಿ ಅಗ್ರಸ್ಥಾನಿಯಾಗಿ ಗುರಿ ತಲುಪಿದರು. ಇದರೊಂದಿಗೆ 2022ರಲ್ಲಿ ಕೀನ್ಯಾದ ನಿಕೋಲಸ್ ಕಿಪ್ಕೊರಿರ್ ನಿರ್ಮಿಸಿದ್ದ 27 ನಿಮಿಷ 38 ಸೆಕೆಂಡ್‌ಗಳ ಕೂಟ ದಾಖಲೆಯನ್ನು ಅಳಿಸಿ ಹೊಸ ದಾಖಲೆ ಬರೆದರು. ಮೂರು ವರ್ಷಗಳ ಹಿಂದೆ ಅಗ್ರಸ್ಥಾನ ಪಡೆಯುವ ಅವಕಾಶವನ್ನು ಕಳೆದುಕೊಂಡಿದ್ದ ರೋಡ್ರಿಗಸ್ ವಿಶ್ವ 10ಕೆ ಬೆಂಗಳೂರು ಓಟದಲ್ಲಿ ಇದೇ ಮೊದಲ ಬಾರಿ ಪ್ರಶಸ್ತಿಗೆ ಕೊರಳೊಡ್ಡಿದರು.

ರೋಡ್ರಿಗಸ್ ಕ್ವಿಜೆರಾ

ಫ್ಲಾರೆನ್ಸ್ ನಿಯೋಂಕುರು

ಅಂತಾರಾಷ್ಟ್ರೀಯ ಮಹಿಳೆಯರ ಎಲೈಟ್ ವಿಭಾಗದಲ್ಲಿ 25 ವರ್ಷದ ಫ್ಲಾರೆನ್ಸ್ 30 ನಿಮಿಷ 45 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟಿ ಚೊಚ್ಚಲ ಪ್ರಶಸ್ತಿಗೆ ಭಾಜನರಾದರು. ಭಾರತೀಯ ಮಹಿಳೆಯರ ಪೈಕಿ ಸಂಜೀವನಿ ಜಾಧವ್ ಸತತ 3ನೇ ಬಾರಿ ಚಿನ್ನ ಗೆದ್ದು ಹೊಸ ದಾಖಲೆ ನಿರ್ಮಿಸಿದರೆ, ಹರ್ಮನ್‌ಜೋತ್ ಸಿಂಗ್ ಪುರುಷರ ವಿಭಾಗದಲ್ಲಿ ಸ್ವರ್ಣಕ್ಕೆ ಮುತ್ತಿಟ್ಟರು. ಆದರೆ ಕೂದಲೆಳೆಯ ಅಂತರದಲ್ಲಿ ಕೂಟ ದಾಖಲೆ ನಿರ್ಮಿಸುವ ಅವಕಾಶವನ್ನು ಹರ್ಮನ್‌ಜೋತ್ ಕಳೆದುಕೊಂಡರು.

ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಅಂತಾರಾಷ್ಟ್ರೀಯ ರಾಯಭಾರಿ ಬ್ಲಾಂಕಾ ವ್ಲೆಸಿಕ್, ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರು 36 ಸಾವಿರಕ್ಕೂ ಅಧಿಕ ಸ್ಪರ್ಧಿಗಳು ಪಾಲ್ಗೊಂಡ ರೇಸ್‌ಗೆ ಚಾಲನೆ ನೀಡಿದರು. ಜಮ್ಮು ಮತ್ತು ಕಾಶ್ಮೀರ ಸಿಎಂ ಉಮರ್ ಅಬ್ದುಲ್ಲಾ, ಮೈಸೂರು ಸಂಸದ ಯದುವೀರ್ ಶ್ರೀಕಂಠದತ್ತ ಒಡೆಯರ್ ಸೇರಿ ಹಲವು ಗಣ್ಯರು ಕೂಟದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಪ್ರಶಸ್ತಿ ವಿಜೇತರು

ಅ.ರಾಷ್ಟ್ರೀಯ ಎಲೈಟ್ ಮಹಿಳೆಯರು

ಫ್ಲಾರೆನ್ಸ್ ನಿಯೋಂಕುರು (30.45 ಸೆ. (ಕೂಟ ದಾಖಲೆ) / ರುವಾಂಡಾ); **ಬ್ರೆಂಡಾ ಜೆಪ್ಚಿರ್ಚಿರ್** (30.59 ಸೆ. / ಕೀನ್ಯಾ); **ಚಲ್ತು ಡಿದಾ ಡಿರಿಬಾ** (31.03 ಸೆ. / ಇಥಿಯೋಪಿಯಾ)

ಅಂ. ರಾಷ್ಟ್ರೀಯ ಎಲೈಟ್ ಪುರುಷರು

ರೋಡ್ರಿಗಸ್ ಕ್ವಿಜೆರಾ (27.31 ಸೆ. / ಬುರುಂಡಿ); **ಹಾರ್ಬರ್ಟ್ ಕಿಬೆಟ್** (27.39 ಸೆ. / ಉಗಾಂಡ); **ಗಿಲ್ಬರ್ಟ್ ಕಿಪ್ಕೋಸ್ಗೆಯ್ ಕಿಪ್ರೊಟಿಚ್** (27.43 / ಕೀನ್ಯಾ)

ಪ್ರಶಸ್ತಿ ಗೆದ್ದ ಭಾರತೀಯರು

ಮಹಿಳೆಯರ ವಿಭಾಗ: ಸಂಜೀವನಿ ಜಾಧವ್(35.01 ಸೆ.); **ಸೋನಿಯಾ** (35.31 ಸೆ.); **ಭಾಗೀರಥಿ**(35.32 ಸೆ.)

ಪುರುಷರ ವಿಭಾಗ: ಹರ್ಮನ್‌ಜೋತ್ ಸಿಂಗ್(29.13 ಸೆ.); **ಶೈಲೇಶ್ ಕುಶ್ವಾಹ** (29.21 ಸೆ.); **ದೀಪಕ್ ಭಟ್** (29.52 ಸೆ.).

ಕೆಕೆಆರ್‌ಗೆ ಸೂಪರ್ ಜಯ

ಲಖನೌ: ಪ್ರಸಕ್ತ ಐಪಿಎಲ್ ಋತುವಿನಲ್ಲಿ ಮೊದಲ ಬಾರಿಗೆ ನಡೆದ ಸೂಪರ್ ಓವರ್ ಪಂದ್ಯದಲ್ಲಿ ಲಖನೌ ಸೂಪರ್ ಜಯಂಟ್ಸ್ ನೀಡಿದ 2 ರನ್‌ಗಳ ಗುರಿಯನ್ನು ಮೆಟ್ಟಿನಿಂತ ಕೋಲ್ಕೊತಾ ನೈಟ್ ರೈಡರ್ಸ್, ಸತತ ಎರಡನೇ ಜಯ ದಾಖಲಿಸಿತು.

ಕೆಕೆಆರ್ ಪರ ಸೂಪರ್ ಓವರ್ ಬೌಲಿಂಗ್ ಮಾಡಿದ ಸುನಿಲ್ ನರೈನ್ 3 ಎಸೆತಗಳಲ್ಲಿ 1 ರನ್ ನೀಡಿ 2 ವಿಕೆಟ್ ಕಬಳಿಸಿದರು. ಬಳಿಕ ರಿಂಕು ಸಿಂಗ್ ಮೊದಲ ಎಸೆತದಲ್ಲೇ ಬೌಂಡರಿ ಬಾರಿಸಿ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು. ಇದಕ್ಕೂ ಮುನ್ನ 156 ರನ್ ಗುರಿ ಬೆನ್ನಟ್ಟಿದ ಲಖನೌ, ಪಂತ್(42) ಅವರ ಹೋರಾಟದ ಫಲವಾಗಿ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿ ಸಮಬಲ ಸಾಧಿಸಿತು. ಕೆಕೆಆರ್ ಪರ ರಿಂಕು ನಾಲ್ಕು ಕ್ಯಾಚ್ ಹಿಡಿದು ಗಮನ ಸೆಳೆದರು.

ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಲಖನೌ ತಂಡದ ನಾಯಕ ರಿಷಭ್ ಪಂತ್ ಅವರ ನಿಲುವನ್ನು ಬೌಲರ್‌ಗಳು ಪ್ರಬಲವಾಗಿ ಸಮರ್ಥಿಸಿಕೊಂಡರು. ಅದರಲ್ಲೂ ಮೊಹ್ಸಿನ್ ಖಾನ್ ಮೂರು ಬಾರಿಯ ಚಾಂಪಿಯನ್ ಕೋಲ್ಕೊತಾ ತಂಡಕ್ಕೆ ಇನ್ನಿಲ್ಲದಂತೆ ಕಾಡಿದರು.

ಈ ಮಧ್ಯೆ, ಕ್ಯಾಮರೂನ್ ಗ್ರೀನ್ 34 ರನ್‌ಗಳ ಕೊಡುಗೆ ನೀಡಿದರು. 15 ಓವರ್‌ಗಳಲ್ಲಿ 7 ವಿಕೆಟ್‌ಗೆ 93 ರನ್‌ಗಳಿಗೆ ಕುಸಿದಿದ್ದ ಕೋಲ್ಕೊತಾ, 120ರ ಗಡಿ ದಾಟುವುದು ಅನುಮಾನ ಎನಿಸಿತು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಎಚ್ಚರಿಕೆ ಹಾಗೂ ಏಕಾಂಗಿ ಹೋರಾಟ ನಡೆಸಿದ ರಿಂಕು ಸಿಂಗ್ 51 ಎಸೆತಗಳಲ್ಲಿ 7 ಫೋರ್, 5 ಸಿಕ್ಸರ್ ಸಹಿತ ಅಜೇಯ 83 ರನ್ ಗಳಿಸಿ ತಂಡದ ಪೈಪೋಟಿ ಮೊತ್ತಕ್ಕೆ ಸಾಕ್ಷಿಯಾದರು.

ಸಂಕ್ಷಿಪ್ತ ಸ್ಕೋರ್: ಕೋಲ್ಕೊತಾ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 155(ರಿಂಕು ಸಿಂಗ್ 83*, ಕ್ಯಾಮರೂನ್ ಗ್ರೀನ್ 34; ಮೊಹ್ಸಿನ್ ಖಾನ್ 23ಕ್ಕೆ 5). **ಲಖನೌ :** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 155(ಪಂತ್ 42, ಬದೋನಿ 24, ಮಾರ್ಕ್ರಂ 31; ವೈಭವ್ 24ಕ್ಕೆ 2, ವರುಣ್ 33ಕ್ಕೆ 2).

ಸಂಧಿವಾತಕ್ಕೆ ಸರಳ ಪರಿಹಾರ

ಸಂಧಿವಾತ ಸಮಸ್ಯೆ 40ರಿಂದ 50ರ ವಯೋಮಾನದಲ್ಲಿ ಸಹಜ. ಆದರೆ ಪ್ರಸ್ತುತ ಜೀವನಶೈಲಿಯಿಂದಾಗಿ ಇದು ಚಿಕ್ಕ ವಯಸ್ಸಿನವರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿದೆ. ಮೂಲತಃ ಇದು ಕೀಲುಗಳಿಗೆ ಸಂಬಂಧಪಟ್ಟ ಸಮಸ್ಯೆ. ಈ ಸಮಸ್ಯೆಯಲ್ಲಿ ಮೂಳೆಗಳಲ್ಲಿನ ಕಾರ್ಟಿಲೇಜ್‌ಗಳು ಕ್ಷೀಣಗೊಳ್ಳುತ್ತವೆ. ಹಾಗೆಯೇ ಮೂಳೆಗಳ ಸವೆತ ಉಂಟಾಗುತ್ತದೆ. ಇದರಿಂದ ಆಸ್ಟಿಯೋಫೈಟ್‌ನಂತಹ ರಚನೆಗಳು ಬದಲಾವಣೆಗೆ ಒಳಗಾಗುತ್ತವೆ. ಇದರ ಪರಿಣಾಮ ಸೈನೋವಿಯಲ್ ದ್ರವ ಕಡಿಮೆಯಾಗುವುದನ್ನು ನೋಡಬಹುದು. ಇದರಿಂದ ಮೂಳೆಗಳ ಉಜ್ಜುವಿಕೆ ಮತ್ತು ಸವೆತ ಕಾಣಿಸಿಕೊಳ್ಳಬಹುದು. ಇದು ಹೆಚ್ಚಾಗಿ ಭಾರ ಬೀಳುವಂತಹ ಮಂಡಿಗಳಲ್ಲಿ ಬರುತ್ತದೆ.

ಕಾರಣ: ಅತಿಯಾದ ತೂಕ ಆಸ್ಟಿಯೋ ಆರ್ಥ್ರೈಟಿಸ್‌ಗೆ ಕಾರಣ. ಹೆಚ್ಚು ಸಮಯ ನಿಂತು ಕೆಲಸ ನಿರ್ವಹಿಸುವುದು, ನಿರಂತರ ಮೆಟ್ಟಿಲುಗಳನ್ನು ಹತ್ತುವುದು, ಗಂಟುಗಳಿಗೆ ಮತ್ತು ಮೂಳೆಗಳ ಸಂದುಗಳಿಗೆ ಏಟಾಗುವುದು, ಅಪಘಾತದಂತಹ ಕಾರಣಗಳಿಂದ ಸಂಧಿವಾತ ಉಂಟಾಗಬಹುದು. ಬ್ಯಾಕ್ಟೀರಿಯಾ ಮತ್ತು ಇತರೆ ಸೋಂಕುಗಳಿಂದಲೂ ಕಾಣಿಸಿಕೊಳ್ಳಬಹುದು.

ಡಾ. ಶ್ರೀಕಾಂತ್ ಮೋರ್ಲಾವರ್
ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಕ್ಷ

ಲಕ್ಷಣಗಳು: ಕೀಲುಗಳಲ್ಲಿ ನೋವು ಊತ ಅಥವಾ ಉರಿ, ಮಣಿಕಟ್ಟು ನೋವು ಕಾಣಿಸಿಕೊಳ್ಳಬಹುದು. ಸಂದುಗಳು ಕೆಂಪಾಗುವುದು, ಊತ, ಏಳಲು ಮತ್ತು ಕೂರಲು ಕಷ್ಟವಾಗುವುದು, ನಿಲ್ಲುವಾಗ, ಕೈ ಕಾಲುಗಳಿಗೆ ಜೋಮು ಹಿಡಿಯುವುದು ಇತ್ಯಾದಿ.

ಪರಿಣಾಮಗಳು: ಇದು ಗಂಟುಗಳಲ್ಲಿ ಬಿಗಿತ ಉಂಟುಮಾಡಬಹುದು ಮತ್ತು ನಡೆದಾಡಲು ತೊಂದರೆ ಕೊಡಬಹುದು.

ರುಮಟಾಯ್ಡ್ ಸಂಧಿವಾತ: ಹದಿಹರೆಯದವರಲ್ಲಿ ಮತ್ತು ಮಧ್ಯವಯಸ್ಕರಲ್ಲಿ ಕಂಡುಬರುವ ಸಂಧಿವಾತವನ್ನು ರುಮಟಾಯ್ಡ್ ಸಂಧಿವಾತ ಎನ್ನುತ್ತಾರೆ. ನಮ್ಮ ದೇಶದಲ್ಲಿ ಶೇ. 15ರಷ್ಟು ಮಂದಿಯಲ್ಲಿ ಸಂಧಿವಾತ ಕಂಡು ಬರುತ್ತದೆ. ಇದರಿಂದ ಬಳಲುತ್ತಿರುವ ಹದಿಹರೆಯದವರು ನಿರಾಸೆ, ಏಕಾಂಗಿತನ ಅನುಭವಿಸುತ್ತಾರೆ.

ಇದೊಂದು ಆಟೋ ಇಮ್ಯೂನ್ ಸಮಸ್ಯೆ. ದುರ್ಬಲ ಜೀನ್‌ಗಳನ್ನು ಹೊಂದಿರುವವರಲ್ಲಿ ಕಂಡು ಬರುತ್ತದೆ. ಕೆಲವೊಮ್ಮೆ ಬ್ಯಾಕ್ಟೀರಿಯಾ ಅಥವಾ ವೈರಸ್ ಸೋಂಕಿನಿಂದ ಹೆಚ್ಚಾಗಬಹುದು. ರೋಗನಿರೋಧಕ ವ್ಯವಸ್ಥೆಯು ಕೀಲುಗಳನ್ನು ರಕ್ಷಿಸುವ ಬದಲಾಗಿ, ಅಸಮರ್ಪಕವಾಗಿ ಕಾರ್ಯನಿರ್ವಹಿಸಬಹುದು. ಇದರಿಂದಾಗಿ ಕೀಲುಗಳಲ್ಲಿ ಊತ ಮತ್ತು ನೋವು ಕಾಣಿಸಿಕೊಳ್ಳುತ್ತದೆ ಎಂದು ಹೋಮಿಯೋಕೇರ್ ಸಂಸ್ಥೆಯ ತಜ್ಞರು ಹೇಳಿದ್ದಾರೆ.

ಹೋಮಿಯೋಕೇರ್‌ನಲ್ಲಿನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನದಿಂದ ಈ ಸಮಸ್ಯೆಯಿಂದಾಗುವ ತೊಂದರೆ ಹಾಗೂ ಪರಿಣಾಮಗಳನ್ನು ನಿವಾರಿಸಬಹುದು. ರೋಗಿಯ ಅನಾರೋಗ್ಯದ ವಿವರ ಮಾತ್ರವಲ್ಲದೇ, ಮಾನಸಿಕ, ದೈಹಿಕ ಪರಿಸ್ಥಿತಿ ಅವಲೋಕಿಸಿ ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಚಿಕಿತ್ಸೆ ನೀಡಲಾಗುವುದು. ಇದರೊಂದಿಗೆ ರೋಗಿಯ ದೈಹಿಕ ಆರೋಗ್ಯ ಸುಧಾರಿಸುವುದಲ್ಲದೆ ರೋಗನಿರೋಧಕ ಶಕ್ತಿಯು ಸುಧಾರಿಸಲ್ಪಡುತ್ತದೆ.

ಮುನ್ನೆಚ್ಚರಿಕೆ

ದಿನನಿತ್ಯ ವ್ಯಾಯಾಮ ಮತ್ತು ಸವೆತ ಆಗುತ್ತಿರುವ ಸಂಧಿಗಳಿಗೆ ಹೆಚ್ಚಿನ ಭಾರ ಅಥವಾ ಒತ್ತಡ ಬೀಳದಂತೆ ನೋಡಿಕೊಳ್ಳಿ. ಬೊಜ್ಜು ಇದ್ದವರು ದೇಹದ ತೂಕ ಕಡಿಮೆ ಮಾಡಿಕೊಳ್ಳಿ. ಕ್ಯಾಲ್ಸಿಯಂ ಸಮೃದ್ಧ ಆಹಾರ ಸೇವಿಸಿ. ಮಾನಸಿಕ ಒತ್ತಡಗಳಿಂದ ದೂರವಿರಿ. ಕೀಲುಗಳಿಗೆ ಹೆಚ್ಚಿನ ಭಾರ ಹಾಕಬೇಡಿ. ನಾರಿನ ಅಂಶ ಇರುವ ಆಹಾರ ಬಳಕೆ, ನೀರನ್ನು ಸರಿಯಾದ ಪ್ರಮಾಣದಲ್ಲಿ ಕುಡಿಯಿರಿ. ಮಂಡಿ-ಕ್ಯಾಪ್ ಇತ್ಯಾದಿ ವಸ್ತುಗಳನ್ನು ಅಗತ್ಯವಿದ್ದಲ್ಲಿ ಬಳಸಿ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಕರ್ನಾಟಕದಲ್ಲಿನ ಶಾಖೆಗಳು: ಬೆಂಗಳೂರು (ಜಯನಗರ, ಮಲ್ಲೇಶ್ವರ, ಇಂದಿರಾನಗರ, ಎಚ್‌ಎಸ್ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಕಲಬುರಗಿ, ಶಿವಮೊಗ್ಗ, ತುಮಕೂರು, ಹಾಸನ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೇರಿ. ■

ಉಚಿತ ಸಮಾಲೋಚನೆ: 9550001133

ಉಚಿತ ಕರೆ: 1800 108 1212

ವೆಬ್‌ಸೈಟ್: www.homeocare.in

(ಈ ಕ್ಷೇತ್ರದಲ್ಲಿ ತಜ್ಞರ ತಿಳಿವಳಿಕೆಯನ್ನು ಆಧರಿಸಿದ ಬರಹ)

ಲವಲVK ಫಿಟ್ನೆಸ್ ಫಂಡಾ

ತೂಕ ಇಳಿಕೆಗಿಂತ ಆರೋಗ್ಯ ಮುಖ್ಯ

ಇತ್ತೀಚಿನ ದಿನಗಳಲ್ಲಿ ಫಿಟ್ನೆಸ್ ಎಂದರೆ ಬಹುತೇಕ ಜನರಿಗೆ ತೂಕ ಇಳಿಕೆ ಎನ್ನುವ ಕಲ್ಪನೆ ಇದೆ. ಆದರೆ ನಿಜವಾಗಿ ಫಿಟ್ನೆಸ್ ಎಂದರೆ ದೇಹದ ಒಟ್ಟಾರೆ ಆರೋಗ್ಯ. ತೂಕ ಕಡಿಮೆ ಮಾಡುವುದು ಅದರ ಒಂದು ಭಾಗ ಮಾತ್ರ. ಅದುವೇ ಸಂಪೂರ್ಣ ಗುರಿ ಅಲ್ಲ.

ನಮ್ಮ ದೇಹಕ್ಕೆ ಬಲ, ಸಹನೆ ಮತ್ತು ಚೈತನ್ಯ ಬೇಕು. ಇವುಗಳನ್ನು ಪಡೆಯಲು ನಿಯಮಿತ ವ್ಯಾಯಾಮ, ಸರಿಯಾದ ಆಹಾರ ಮತ್ತು ಸಾಕಷ್ಟು ವಿಶ್ರಾಂತಿ ಅವಶ್ಯಕ. ಜಿಮ್‌ಗೆ ಹೋಗುವುದು ಮಾತ್ರ ಫಿಟ್ನೆಸ್ ಅಲ್ಲ, ನಡಿಗೆ, ಯೋಗ, ಸೈಕ್ಲಿಂಗ್ ಅಥವಾ ಮನೆಯಲ್ಲೇ ಮಾಡುವ ವ್ಯಾಯಾಮಗಳೂ ಸಮಾನವಾಗಿ ಪರಿಣಾಮಕಾರಿ.

ಇಂದಿನ ವೇಗದ ಜೀವನದಲ್ಲಿ ಜನರು ತಕ್ಷಣ ಫಲಿತಾಂಶಗಳನ್ನು ಬಯಸುತ್ತಾರೆ. ಆದರೆ ಫಿಟ್ನೆಸ್ ಒಂದು ಮ್ಯಾರಥಾನ್, ಸ್ಪ್ರಿಂಟ್(ವೇಗದ ಓಟ)ಅಲ್ಲ, ನಿಧಾನವಾಗಿ, ಸ್ಥಿರವಾಗಿ ಮಾಡಿದ ಪ್ರಯತ್ನಗಳು ದೀರ್ಘಕಾಲಿಕ ಫಲಿತಾಂಶಗಳನ್ನು ನೀಡುತ್ತವೆ.

ಮತ್ತೊಂದು ಮುಖ್ಯ ವಿಷಯ ಎಂದರೆ ಮಾನಸಿಕ ಆರೋಗ್ಯ. ವ್ಯಾಯಾಮವು ಕೇವಲ ದೇಹಕ್ಕೆ ಮಾತ್ರವಲ್ಲ, ಮನಸ್ಸಿಗೂ ಶಾಂತಿ ನೀಡುತ್ತದೆ. ಒತ್ತಡ ಕಡಿಮೆಯಾಗುತ್ತದೆ, ಆತ್ಮವಿಶ್ವಾಸ ಹೆಚ್ಚುತ್ತದೆ.

ಹೀಗಾಗಿ, ಫಿಟ್ನೆಸ್ ಅನ್ನು ಕೇವಲ ತೂಕದ ಅಂಕೆಗಳಿಗೆ ಸೀಮಿತಗೊಳಿಸದೆ, ಆರೋಗ್ಯಕರ ಜೀವನಶೈಲಿಯಾಗಿ ನೋಡೋಣ. ಸಣ್ಣ ಬದಲಾವಣೆಗಳಿಂದ ದೊಡ್ಡ ಫಲಿತಾಂಶಗಳು ಸಾಧ್ಯ. ■

ವನಿತಾ ಅಶೋಕ್
ಫಿಟ್ ಇಂಡಿಯಾ ರಾಯಭಾರಿ

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.
ದೂ: 9513747474

ಮಿಥುನ, ಕನ್ಯಾ, ಮೀನ-ಈ ರಾಶಿಯವರಿಗೆ ಉನ್ನತ ಅಧಿಕಾರ ಪ್ರಾಪ್ತಿ ಯೋಗ

ಮೇಷ: ಪ್ರಯತ್ನಪೂರ್ವಕವಾಗಿ ಮಗನಿಗೆ ಹೇಳಿದ ವಿದ್ಯಾ ಮಾರ್ಗದಿಂದ ಮಗನು ಹಿಂದಿರುಗುವ ಸಾಧ್ಯತೆ ಇದೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಬೇಕಾದ ಸಂದರ್ಭ ಎದುರಾಗುವುದು. **ಶುಭ ಸಂಖ್ಯೆ : 5, ಬಣ್ಣ: ನೀಲಿ**
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಮನೋಭಿಲಾಷೆಗೆ ಪೆಟ್ಟು ಬೀಳುವ ಕಾರಣದಿಂದ ಪ್ರೀತಿಪಾತ್ರರು ದೂರವಾಗುವ ಸಂಭವವಿದೆ. ಡಿಸೈನಿಂಗ್ ಕ್ಷೇತ್ರದವರಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ. **ಶುಭ ಸಂಖ್ಯೆ : 8, ಬಣ್ಣ: ಹಸಿರು**
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಹಿರಿಯರ ಮಾರ್ಗದರ್ಶನದಂತೆ ಧಾರ್ಮಿಕ ಕೆಲಸ ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ, ಸಂಪ್ರದಾಯಬದ್ಧವಾಗಿ ನಡೆಯುವುದು. ಆಸ್ತಿ ಖರೀದಿ ವಿಚಾರದಲ್ಲಿ ಸಮಂಜಸ ನಿರ್ಧಾರ ಕೈಗೊಳ್ಳುವಿರಿ. **ಶುಭ ಸಂಖ್ಯೆ : 2, ಬಣ್ಣ: ಹಳದಿ**
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಸಹೋದರರಲ್ಲಿನ ಭಿನ್ನಾಭಿಪ್ರಾಯಗಳು ಪ್ರೀತಿಯ ಮಾತುಗಳಿಂದ ದೂರವಾಗಲಿವೆ. ದಿಟ್ಟ ನಿಲುವನ್ನು ತೆಗೆದುಕೊಳ್ಳಲು ಈ ದಿನ ಸೂಕ್ತವಲ್ಲ, ವಾಹನದಲ್ಲಿ ಚಲಿಸುವಾಗ ಜಾಗ್ರತೆ ಇರಲಿ. **ಶುಭ ಸಂಖ್ಯೆ : 9, ಬಣ್ಣ: ಖಾಕಿ**
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ವೃತ್ತಿ ನಿಪುಣತೆಯಿಂದ ಹೆಚ್ಚು ವರಮಾನ ಬರುವ ಕೆಲಸಕ್ಕೆ ಪ್ರಯತ್ನಿಸುವ ಸಲಹೆ ಬರುವುದು. ಜವಾಬ್ದಾರಿ ಹೆಚ್ಚಿರುವುದರಿಂದ ಸೃಜನಾತ್ಮಕ ಕಾರ್ಯನಿರ್ವಹಣೆ ಅಗತ್ಯವಾಗುವುದು. **ಶುಭ ಸಂಖ್ಯೆ : 6, ಬಣ್ಣ: ಬಿಳಿ**
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನ ಸಂಪಾದಿಸಿಕೊಳ್ಳುವಂತೆ ನಿಮ್ಮ ವ್ಯಕ್ತಿತ್ವ ಇರಲಿ. ಅವಶ್ಯಕತೆಗೆ ಮೀರಿ ಕೆಲಸ ಮಾಡಬೇಕಾದ ಅನಿವಾರ್ಯತೆ ನಿಮಗಿಲ್ಲ. **ಶುಭ ಸಂಖ್ಯೆ : 3, ಬಣ್ಣ: ಗುಲಾಬಿ**
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಕೆಲಸ ಕಾರ್ಯಗಳು ವಿಳಂಬ ನೀತಿ ತೊರೆದು ಸರಾಗವಾಗಿ ನಡೆದು ಆರ್ಥಿಕವಾಗಿ ಮುನ್ನಡೆಯಲಿವೆ. ಸಣ್ಣಪುಟ್ಟ ವಿಷಯಗಳಿಗೂ ಮಹತ್ವ ಕೊಡಬೇಕಾಗುವುದು. ನಿರಂತರ ಕೆಲಸಗಳಿಂದಾಗಿ ವಿಶ್ರಾಂತಿ ಬೇಕೆನಿಸಲಿದೆ. **ಶುಭ ಸಂಖ್ಯೆ : 7, ಬಣ್ಣ: ಕಪ್ಪು**
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೇ ಸೊರಗಿರುವ ನಿಮಗೆ ಋಣಾತ್ಮಕ ಯೋಚನೆಗಳು ಬರಲಿವೆ. ಸಿಟ್ಟು, ಒರಟುತನ ಒಂಟಿತನಕ್ಕೆ ಮುಖ್ಯ ಕಾರಣ. ವಾಣಿಜ್ಯೋದ್ಯಮಿಗಳು ಭದ್ರತೆಯ ಬಗ್ಗೆ ಗಮನ ಹರಿಸಿ. **ಶುಭ ಸಂಖ್ಯೆ : 4, ಬಣ್ಣ: ಕೆಂಪು**
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಧಾರ್ಮಿಕ ಕ್ಷೇತ್ರದ ಆಡಳಿತ ವ್ಯಕ್ತಿಗೆ ಅಥವಾ ವ್ಯವಸ್ಥಾಪಕರಿಗೆ ನಿಂದನೆಯ ಭೀತಿ. ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶ ಎದುರಾಗಬಹುದು. ಕಟ್ಟಡಗಳನ್ನು ಬಾಡಿಗೆಗೆ ಕೊಡುವುದರಿಂದ ಆರ್ಥಿಕ ಅಭಿವೃದ್ಧಿ ಕಂಡುಬರುವುದು. **ಶುಭ ಸಂಖ್ಯೆ :1, ಬಣ್ಣ: ಆಕಾಶ**
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಕಾರ್ಯರಂಗದಲ್ಲಿ ಧೈರ್ಯ, ಪ್ರಯತ್ನ ಬಲ, ಆತ್ಮವಿಶ್ವಾಸದ ಪ್ರವೃತ್ತಿಯಿಂದ ಅಭಿವೃದ್ಧಿ ಹೊಂದಿದರೂ ಜನರ ಕೆಟ್ಟ ದೃಷ್ಟಿಗೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ಗೆಳೆಯರ ಸೂಕ್ತ ಪ್ರತಿಕ್ರಿಯೆ ದೊರೆಯಲಿದೆ. **ಶುಭ ಸಂಖ್ಯೆ : 5, ಬಣ್ಣ: ಕಿತ್ತಳೆ**
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನ ಪ್ರಯೋಗಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ಆಹಾರದಲ್ಲಿನ ಬದಲಾವಣೆಯಿಂದಾಗಿ ದೇಹದಲ್ಲಿನ ಉಷ್ಣವ್ಯಾಧಿ ನಿವಾರಣೆಯಾಗುವುದು. **ಶುಭ ಸಂಖ್ಯೆ : 2, ಬಣ್ಣ: ಕಂದು**
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಹೊಸ ವ್ಯಾಪಾರವನ್ನು ಅಥವಾ ಏಜೆನ್ಸಿಯನ್ನು ಪ್ರಾರಂಭಿಸುವ ಯೋಚನೆ ಇರುವವರಿಗೆ ಪೂರ್ವ ತಯಾರಿ ನಡೆಸಲು ಸೂಕ್ತ ವ್ಯಕ್ತಿಯ ಮಾರ್ಗದರ್ಶನ ಸಿಗಲಿದೆ. ಸೌಹಾರ್ದದಿಂದ ವರ್ತಿಸಿ. **ಶುಭ ಸಂಖ್ಯೆ : 8, ಬಣ್ಣ: ಗಾಢ ನೀಲಿ**
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ವೆಲ್ನೆಸ್ ಟಿಪ್ಸ್

ನೇರಳೆ ಹಣ್ಣಿನ ಬೀಜದ ಪುಡಿಯಲ್ಲಿದೆ ಪ್ರಯೋಜನ

ಬೇಸಿಗೆಯ ಜನಪ್ರಿಯ ಹಣ್ಣುಗಳಲ್ಲಿ ನೇರಳೆ ಹಣ್ಣು ಕೂಡ ಒಂದು. ಇದರ ರುಚಿ ಎಷ್ಟು ಅದ್ಭುತವೋ, ಅಷ್ಟೇ ಅದ್ಭುತವಾದ ಔಷಧೀಯ ಗುಣಗಳು ಇದರ ಬೀಜದಲ್ಲಿದೆ. ವಿಶೇಷವಾಗಿ ಈ ಬೀಜದ ಪುಡಿಯನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ಹಲವಾರು ಲಾಭಗಳಿವೆ.



ನೇರಳೆ ಬೀಜದಲ್ಲಿರುವ ನೈಸರ್ಗಿಕ ಗುಣಗಳು ಅಜೀರ್ಣ, ಆಮ್ಲೀಯತೆ ಮತ್ತು ಹೊಟ್ಟೆ ಉಬ್ಬರದಿಂದ ಪರಿಹಾರ ನೀಡುತ್ತವೆ. ನಿಯಮಿತ ಮಲ ವಿಸರ್ಜನೆಗೆ ಸಹಕರಿಸುತ್ತವೆ. ನೇರಳೆ ಬೀಜದ ಪುಡಿಯಲ್ಲಿ ನಾರಿನಂಶ ಹೆಚ್ಚಾಗಿದ್ದು, ಕ್ಯಾಲೊರಿ ಕಡಿಮೆ ಇರುತ್ತದೆ. ಹೊಟ್ಟೆ ತುಂಬಿದ ಅನುಭವ ನೀಡುವುದರಿಂದ ತೂಕ ಇಳಿಸಿಕೊಳ್ಳಲು ಸಹಕಾರಿ.

ಇದರಲ್ಲಿರುವ ಉತ್ಕರ್ಷಣ ವಿರೋಧಿ ಗುಣಗಳು ಲಿವರ್‌ನಲ್ಲಿರುವ ವಿಷಕಾರಿ ಅಂಶಗಳನ್ನು ಹೊರಹಾಕಲು ಮತ್ತು ಲಿವರ್ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ.

ದೇಹದ ಒಳಗಿನ ಕಲ್ಮಶಗಳನ್ನು ಹೊರಹಾಕುವುದರಿಂದ, ಇದು ಚರ್ಮದ ಮೇಲಿನ ಮೊಡವೆಗಳನ್ನು ಕಡಿಮೆ ಮಾಡಿ, ತ್ವಚೆಯು ನೈಸರ್ಗಿಕವಾಗಿ ಹೊಳೆಯುವಂತೆ ಮಾಡುತ್ತದೆ.

ಇದು ಕೆಟ್ಟ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುವ ಮೂಲಕ ಹೃದಯದ ಆರೋಗ್ಯವನ್ನು ರಕ್ಷಿಸುತ್ತದೆ.

ನೇರಳೆ ಬೀಜದ ಪುಡಿಯಲ್ಲಿ ಬ್ಯಾಕ್ಟೀರಿಯಾ ವಿರೋಧಿ ಗುಣಗಳಿದ್ದು, ಇದು ವಸಡುಗಳ ಆರೋಗ್ಯ ಮತ್ತು ಹಲ್ಲಿನ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿ. ■

ವಿಜಯಬಂಧ – 7928



ಎಡದಿಂದ ಬಲಕ್ಕೆ

1 ಉದಾರವಾಗಿ ಮಾಡಿದ ದೇಶದ ಅಭಿವೃದ್ಧಿ 3
4 ನಾಕಲೋಕವನ್ನೇ ಒಳಗೊಂಡಂತಹ ಅರಣ್ಯ 3
6 ನಾವು ಹಾಕಿದರೂ ಕಷ್ಟ ಕಾರ್ಪಣ್ಯಗಳನ್ನು ಸಹಿಸಿಕೊಳ್ಳುವಾಕೆ 5
9 ಸುಳ್ಳು ಹೇಳದಿರುವುದೊಂದೆ ಜಯ ಪಡೆಯುತ್ತದೆ 2
10 ಬಸವನಗುಡಿ ಪಕ್ಕ ನಿರ್ಮಿಸಿದ ಜೈನರ ಪವಿತ್ರ ಸ್ಥಳ 3
12 ವಿರೋಧಿಸಿದರೂ ಅನುಭವಿಸಲೇಬೇಕಾದ ಬ್ರಹ್ಮಲಿಖಿತ 2
13 ಉದ್ದವನ್ನು ಲೆಕ್ಕ ಹಾಕಿದಾಗ ಬಂದ ಅಗಲ 2
14 ಹಾವಿಗೆ ಆಶ್ರಯ ನೀಡುವ ಗೆದ್ದಲು ನಿರ್ಮಿಸುವ ವಲ್ಮೀಕ 2
15 ವಿಶ್ವಾಸಕ್ಕೆ ಪಾತ್ರವಾಗಿರುವ ಜಗತ್ತು 2
16 ಸರ ನೀಡಿ ತಂದ ಸಾಮಗ್ರಿ 3
19 ಬಾರಳು ಎಂದರೂ ಬಂದು ನಡೆಸಿದ ಜೀವನ 2
20 ನಾಗನ ಜೊತೆಯಲ್ಲಿ ಬಂದವನಿಗೆ ಸಂಸ್ಕೃತಿಯು ಅರಿವಿದೆ 5
23 ತಡವರಿಸಿ ಮಾಡಿದ ಉತ್ಪಾದನೆ 3
24 ನೇರ ಕೊರಳ ಬಳಿ ಬಿದ್ದ ಛಾಯೆ 3

ಮೇಲಿನಿಂದ ಕೆಳಕ್ಕೆ

1 ಅಪಾಯವಾಗದಂತೆ ದೇವರನ್ನು ಆರಾಧಿಸಿದ ಬಗೆ 4
2 ವಿರಸ ಇರುವಾಗ ಸಿಕ್ಕ ಸತ್ವಯುತ ದ್ರವ 2
3 ಮೇಷ ಮೊದಲಾದರೆ ಕೊನೆಯು ರಾಶಿ 2
4 ಕಾಯುವಾಗ ತೋಟದಲ್ಲಿ ಸಿಕ್ಕ ಫಲ ಇನ್ನೂ ಹಣ್ಣಾಗಿಲ್ಲ 2
5 ಕುಬೇರ ಹೊಂದಿದ ಒಂಬತ್ತು ಐಶ್ವರ್ಯಗಳು 4
7 ಹಳದಿ ಬಣ್ಣ ಇಷ್ಟಪಡುವ ಪುರಾತನ ಕಾಲದವ 3
8 ಸೀದಾ ಹೋದರೆ ಸಿಗುವ ಮುಸಲ್ಮಾನರ ಪ್ರಾರ್ಥನಾ ಮಂದಿರ 3
11 ಮರದ ಕೆಳಗೆ ನಡೆದ ಯುದ್ಧ 3
12 ನಾವಿತ್ತ ಹಣವೆಲ್ಲ ಸೇರಿಸಿ ಸರಕಾರ ರಚಿಸಿಕೊಂಡ ಇಲಾಖೆ 2
13 ಆಶ್ವಾಸನೆಯಂತೆ ಕೊಂಡು ತಂದ ಕುದುರೆ 2
15 ಪರಿಪರಿಯಾಗಿ ಉಪವೀತ ಧರಿಸಿದವನದು ಅತಿ ಆಯಿತು 4
16 ಸರಿಯಾಗಿ ಅಗ ನಡೆದದ್ದು ಸಲೀಸು 3
17 ಕೋಗಿಲೆ ಕೂಗಿದ ರೀತಿಯದೇ ಆದ ಅಣಕ 3
18 ಶ್ರೀಮಂತರ ಸೇವಕರು ಧಾನ್ಯವನ್ನೂ ಹೊತ್ತರು 4
20 ನಾಗರಿಕ ಈ ಹೆಣ್ಣನ್ನು ಬಲ್ಲ 2
21 ವ್ಯತಿರಿಕ್ತವಾದ ಕಡೆ ಎಲ್ಲವೂ ಖಾಲಿ ಖಾಲಿ 2
22 ಆತನೆ ತಂದ ಧಾನ್ಯದ ಹೊಡೆ 2

ವಿಜಯಬಂಧ | 7927

ಎಡದಿಂದ ಬಲಕ್ಕೆ: 2.ಗವಾರ 5.ಜನನಾಡಿ 7.ಸಾವಧಾನ 9.ಪಾಳೆಯ 10.ಕಾರುಬಾರು 12.ನವತನ 15.ಕರಗತ 18.ಬನಗಿರಿ 20.ಯಾಚಕ 21.ನಾಗಪುರ 22.ರಾಜಕುಲ 24.ಕಣಜ.

ಮೇಲಿನಿಂದ ಕೆಳಕ್ಕೆ: 1.ಭುಜ 2.ಗಡಿಪಾರು 3.ರಸಾಯನ 4.ಗಾನ 6.ನವಿರು 8.ಧಾವಂತ 10.ಕಾರ್ತೀಕ 11.ಬಾಸಿಂಗ 13.ವಚನ 14.ನಗಾರಿ 16.ರತ್ನಾಂಗ 17.ತಯಾರಕ 18.ಬಕರಾಜ 19.ಗಿಟಕು 21.ನಾಡು 23.ಲಗ್ನ.

ಅ.ನಾ. ಪ್ರಹ್ಲಾದರಾವ್

LOVE VK ❤ LOVE LIFE

ಸೋಮವಾರ, 27 ಏಪ್ರಿಲ್ 2026 | ADVERTORIAL, ENTERTAINMENT INDUSTRY PROMOTIONAL FEATURE

ಲವಲVK

ನಟಿ ರಶ್ಮಿಕಾ ಅವರು ಕೇರಳದಲ್ಲಿ 15ದಿನಗಳ ಕಾಲ ಕೇಚಾ ಖಂಫಕ್ದೀ ಸಾಹಸ ನಿರ್ದೇಶನದಲ್ಲಿ ನಡೆಯಲಿರುವ ‘ಮೈಸಾ’ ಸಿನಿಮಾ ಆ್ಯಕ್ಷನ್ ಸನ್ನಿವೇಶಗಳಲ್ಲಿ ಭಾಗವಹಿಸಲಿದ್ದಾರೆ.

ನಟ ಸಂಜಯ್ ದತ್ ಅಭಿನಯದ 1993ರ ಸೂಪರ್ ಹಿಟ್ ಸಿನಿಮಾ ‘ಖಳ್‌ನಾಯಕ್’ ಸೀಕ್ವೆಲ್ ‘ಖಳ್‌ನಾಯಕ್ ರಿಟರ್ನ್ಸ್’ ಅನೌನ್ಸ್ ಆಗಿದ್ದು, ಟೀಸರ್ ಬಿಡುಗಡೆಯಾಗಿದೆ.

2000 ಕೋಟಿ ರೂ. ಸನಿಹದಲ್ಲಿ ಧುರಂಧರ್-2

ಲವಲvk ಸುದ್ದಿ ಲೋಕ
feedbacklvk@vijaykarnataka.com

ಆದಿತ್ಯ ಧರ್ ನಿರ್ದೇಶನದ, ರಣ್‌ವೀರ್‌ಸಿಂಗ್ ಅಭಿನಯದ ‘ಧುರಂಧರ್2: ದಿ ರಿವೇಂಜ್’ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ತನ್ನ ಆಧಿಪತ್ಯವನ್ನು ಮುಂದುವರಿಸಿದೆ, ಭಾರತೀಯ ಸಿನಿಮಾ ಇತಿಹಾಸದಲ್ಲಿ ಹೊಸ ದಾಖಲೆ ಸೃಷ್ಟಿಸುವತ್ತ ಮುನ್ನುಗ್ಗುತ್ತಿದೆ. ಮಾರ್ಚ್ 19, 2026ರಂದು ತೆರೆಕಂಡ ಈ ಚಿತ್ರವು ಪ್ರಸ್ತುತ ಅತಿ ಹೆಚ್ಚು ಗಳಿಕೆ ಕಂಡ ಭಾರತೀಯ ಸಿನಿಮಾಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಈವರೆಗೆ ವಿಶ್ವಾದ್ಯಂತ ಬರೋಬ್ಬರಿ 1,772 ಕೋಟಿ ರೂಪಾಯಿಗಳನ್ನು ಬಾಚಿಕೊಂಡಿರುವ ಸಿನಿಮಾ ರಾಜಮೌಳಿ ನಿರ್ದೇಶನದ ‘ಬಾಹುಬಲಿ-2’ ದಾಖಲೆಯನ್ನು ಹಿಂದಿಕ್ಕಲು ಕೆಲವೇ ಕೋಟಿ ಕಲೆಕ್ಷನ್ ಬಾಕಿ ಇದೆ. ಈ ದಾಖಲೆಯೊಂದಿಗೆ ವಿಶ್ವದ ಎರಡನೇ ಅತಿದೊಡ್ಡ ಭಾರತೀಯ ಸಿನಿಮಾ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಲಿದೆ. ಅಲ್ಲದೆ ಇಂಡಿಯನ್ ಮಾರ್ಕೆಟ್‌ನಲ್ಲಿ ಇನ್ನೂ 100 ಕೋಟಿ ರೂ. ಗಳಿಕೆ ಮಾಡಿದರೆ ಅಲ್ಲು ಅರ್ಜುನ್ ಅವರ ‘ಪುಷ್ಪ 2’ ದಾಖಲೆಯನ್ನು ಮುರಿದು ಭಾರತ ದೇಶದೊಳಗೆ ಅತ್ಯಂತ ಹೆಚ್ಚು ಗಳಿಕೆ ಮಾಡಿದ ಇಂಡಿಯನ್ ಸಿನಿಮಾ ಎಂಬ ಕಿರೀಟ ಧರಿಸಲಿದೆ.

ಚೀನಾ ಅಥವಾ ಗಲ್ಫ್ ರಾಷ್ಟ್ರಗಳಲ್ಲಿ ಬಿಡುಗಡೆಯಾಗದಿದ್ದರೂ ಈ ಮಟ್ಟದ ಸಾಧನೆ ಮಾಡಿರುವುದು ಈ ಚಿತ್ರದ ವಿಶೇಷ. ಪ್ರಸ್ತುತ ಐಪಿಎಲ್ ಹಾವಳಿ ಇದ್ದರೂ, ಬಾಲಿವುಡ್‌ನ ಅನೇಕ ಬಿಗ್‌ಸ್ಟಾರ್ ಸಿನಿಮಾಗಳು ತೆರೆಕಂಡರೂ ಆರನೇ ವಾರಾಂತ್ಯದಲ್ಲೂ ಚಿತ್ರವು ಭರ್ಜರಿ ಪ್ರದರ್ಶನ ಕಾಣುತ್ತಿದೆ. ತೆರೆಕಂಡ ಮೂರೇ ವಾರದಲ್ಲಿ ದೇಶಾದ್ಯಂತ 1,000 ಕೋಟಿ ರೂ. ಗಳಿಕೆ ಮಾಡಿದ ಮೊದಲ ಹಿಂದಿ ಸಿನಿಮಾ ಎಂಬ ಇತಿಹಾಸ ಸೃಷ್ಟಿಸಿದರೆ, ಪಾರ್ಟ್-1 ಹಾಗೂ ಪಾರ್ಟ್-2 ಸಿನಿಮಾಗಳ ಒಟ್ಟು ಗಳಿಕೆ 3000 ಕೋಟಿ ರೂ. ಕಲೆಕ್ಷನ್ ಮಾಡುವ ಮೂಲಕ ಮತ್ತೊಂದು ದಾಖಲೆ ಬರೆದಿದೆ. ಸದ್ಯ ಚಿತ್ರ 2000 ಕೋಟಿ ರೂ.ಗಡಿ ದಾಟುವ ಮುನ್ಸೂಚನೆ ನೀಡಿದ್ದು, ಆ ಮೂಲಕ ಅತ್ಯಧಿಕ ಗಳಿಕೆ ಮಾಡಿದ ಸಿನಿಮಾ ‘ದಂಗಲ್’ ಅನ್ನು ಸರಿಗಟ್ಟಲು ಇನ್ನು ಎರಡು ವಾರ ಬೇಕಾಗಬಹುದೆಂಬುದು ತಜ್ಞರ ಅಭಿಪ್ರಾಯ. ■

ನವ ದಿಗಂತದೆಡೆಗೆ ದೂಢ್ ಪೇಡ?

ಲವಲVK INTERVIEW

ಸ್ಫುರದ್ರೂಪಿ ನಟ ದಿಗಂತ್ ಕನ್ನಡ ಚಿತ್ರರಂಗದ ಸದ್ಯದ ಪರಿಸ್ಥಿತಿ, ಸಿನಿಮಾ ಅವಕಾಶ, ತೆಲುಗು ಇಂಡಸ್ಟ್ರಿ ಬಗ್ಗೆ ಕುತೂಹಲಭರಿತ ವಿಷಯಗಳನ್ನು ಲವಲvkಯೊಂದಿಗೆ ಹಂಚಿಕೊಂಡಿದ್ದಾರೆ.

ಕಿರಣ್ ಚಂದ್ರ
kiran.b@timesofindia.com

ದಿಗಂತ್ ಬಹಳ ದಿನಗಳ ನಂತರ ‘ಮಾ ಇಂಟಿ ಬಂಗಾರಂ’ ಎಂಬ ಸಿನಿಮಾ ಮೂಲಕ ಟಾಲಿವುಡ್ ಕದ ತಟ್ಟಿದ್ದಾರೆ. ಜತೆಗೆ ಈಗ ಕನ್ನಡ ಸಿನಿಮಾ ‘ರುದ್ರಕಾಲ’ ದ ಚಿತ್ರೀಕರಣದಲ್ಲಿ ತೊಡಗಿದ್ದಾರೆ. ಈ ಮಧ್ಯೆ ಕನ್ನಡದ ಈ ಸ್ಟಾರ್ ನಟ ನಟನೆಯನ್ನೇ ಬಿಟ್ಟು ಬೇರೆ ಉದ್ಯೋಗ ಮಾಡುವ ಆಲೋಚನೆ ಮಾಡಿದ್ದರು ಎಂಬ ವಿಷಯ ಸದ್ಯದ ಕನ್ನಡ ಚಿತ್ರರಂಗದ ನಿಜಸ್ಥಿತಿಯ ಅನಾವರಣ ಮಾಡುತ್ತದೆ. ಈ ಬಗೆಗೆ ಅವರಿಲ್ಲಿ ಮಾತನಾಡಿದ್ದಾರೆ.

ಕಳೆದ ವರ್ಷ ರಿಲೀಸ್ ಆದ ‘ಎಡಗೈ ಅಪಘಾತಕ್ಕೆ ಕಾರಣ’ ಸಿನಿಮಾದ ಬಳಿಕ ನಿಮ್ಮ ಸಿನಿಮಾ ಅಪ್‌ಡೇಟ್ಸ್ ಕೇಳಿಬರಲಿಲ್ಲ, ಏನು ಮಾಡುತ್ತಿದ್ದಿರಿ?

ಎರಡು ಸಿನಿಮಾ ಸೈನ್ ಮಾಡಿದ್ದೆ, ಒಂದು ಹಾರರ್ ಕಾಮಿಡಿ, ಮತ್ತೊಂದು ಫ್ರೆಂಡ್ಸ್‌ನ ಎಂಟರ್‌ಟೈನಿಂಗ್ ಚಿತ್ರ. ಆದರೆ, ಯಾವುದೂ ಟೇಕಾಫ್ ಆಗಲಿಲ್ಲ. ‘ಸದ್ಯ ಚಿತ್ರರಂಗದ ಪರಿಸ್ಥಿತಿ ಹೀಗಿದೆ, ಮಾರ್ಕೆಟ್ ಸುಧಾರಿಸಲಿ’ ಅಂತೆಲ್ಲಾ ಹೇಳಲು ನಿರ್ಮಾಪಕರು ಶುರು ಮಾಡಿದರು. ಆಗಲೇ ನನಗೆ ಸಂಶಯ ಮೂಡಿತ್ತು. ಬೇರೆ ಏನಾದರೂ ವೃತ್ತಿ ಹುಡುಕಿಕೊಳ್ಳಬೇಕಾ ಎನ್ನಿಸಿತ್ತು. ನನ್ನ ಸಾಕಷ್ಟು ಸಿನಿಮಾ ಸ್ನೇಹಿತರದ್ದು ಇದೇ ಕಥೆ. ಏನಾದರೂ ಹೊಸದನ್ನು ಪ್ರಾರಂಭ ಮಾಡಬೇಕಾ ಎಂದೆಲ್ಲಾ ಯೋಚಿಸಲು ಶುರು ಮಾಡಿದೆ. ತೀರ್ಥಹಳ್ಳಿಗೆ ಹೋಗಿ ನನ್ನ ತೋಟ ನೋಡಿಕೊಳ್ಳಬೇಕಾ ಎಂದುಕೊಳ್ಳುವಾಗಲೇ ಈ ‘ರುದ್ರಕಾಲ’ ಸಿನಿಮಾ ಅವಕಾಶ ಬಂತು.

ಬೇರೆ ವೃತ್ತಿ ಅಂದರೆ, ನಿಮ್ಮ ಯೋಚನೆ ಏನಿದೆ?

ತೀರ್ಥಹಳ್ಳಿಗೆ ಹೋಗುವ ಮೊದಲು ಕೃಷಿಗೆ ಸಂಬಂಧಿಸಿದಂತೆ ಹೈಡ್ರೋಪೋನಿಕ್ ಫಾರ್ಮಿಂಗ್ ಬಗ್ಗೆ ಎಲ್ಲಾ ಕೋರ್ಸ್ ಕಲಿಯಲು ಪ್ಲಾನಿಂಗ್ ಕೂಡ ಮಾಡಿಕೊಂಡಿದ್ದೆ. ನನ್ನ ಇಪ್ಪತ್ತು ವರ್ಷದ ಸಿನಿಬದುಕಲ್ಲಿ ಇಂಥಾ ಯೋಚನೆ ಬಂದಿದ್ದು ಇದೇ ಮೊದಲು. ಕಳೆದೆರಡು ವರ್ಷ ನಾನು ತುಂಬಾ ಬಿಝಿ ಇದ್ದೆ. ಸಿನಿಮಾ ಹಿಟ್ ಆಯ್ತೋ, ಫ್ಲಾಪ್ ಆಯ್ತೋ ವರ್ಷಕ್ಕೆ ನಾಲ್ಕೈದು ಸಿನಿಮಾಗಳಂತೂ ಬರುತ್ತಿದ್ದವು. ಈ ನಡುವೆ ಸುಮ್ಮನೆ ಮುಂಬಯಿಗೆ ಹೋಗಿ ಮತ್ತೆ ಆಡಿಷನ್ ಎಲ್ಲಾ ಕೊಟ್ಟು ಮಾಡೆಲಿಂಗ್ ಅಥವಾ ವೆಬ್ ಸೀರೀಸ್ ಟ್ರೈ ಮಾಡೋಣ ಅಂತಲೂ ಯೋಚಿಸಿದ್ದೆ.

ಟಾಲಿವುಡ್‌ನಲ್ಲಿ ಅವಕಾಶ ಸಿಕ್ಕಿದ್ದು ಹೇಗೆ?

ಗೆಳೆಯ ಲೂಸಿಯಾ ಪವನ್ ಅವರಿಗೆ ನಂದಿನಿ ರೆಡ್ಡಿ ಪರಿಚಯ, ಅವರಿಗೆ ನನ್ನ ಅಭಿನಯದ ‘ಲೈಫು ಇಷ್ಟೇನೆ’ ಸಿನಿಮಾ ಇಷ್ಟವಾಗಿ, ‘ಮಾ ಇಂಟಿ ಬಂಗಾರಂ’ ಸಿನಿಮಾದ ಆಫರ್ ನೀಡಿದರು. ಎಲ್ಲಾ ಭಾಷೆಗಳಿಂದ ಒಬ್ಬೊಬ್ಬರನ್ನು ಆಯ್ಕೆ ಮಾಡುವ ಟ್ರೆಂಡ್‌ನಲ್ಲಿ, ನನಗೆ ಈ ಅವಕಾಶ ಸಿಕ್ಕಿತು. ಅಲ್ಲಿ ಸ್ಯಾಂಡಲ್‌ವುಡ್ ರೀತಿ ಸಂಕಷ್ಟವಿಲ್ಲ, ಅನ್ನಪೂರ್ಣ ಸ್ಟುಡಿಯೋದಲ್ಲಿ ಸಾಕಷ್ಟು ಸಿನಿಮಾಗಳ ಚಿತ್ರೀಕರಣ ನಡೆಯುತ್ತಲೇ ಇದ್ದವು. ನೋಡಿ ನನಗೆ ಅಚ್ಚರಿ ಆಯಿತು. ತೆಲುಗು ಜನರು ಪ್ರತಿ ಶುಕ್ರವಾರ ಒಂದಲ್ಲ ಒಂದು ಸಿನಿಮಾ ನೋಡುತ್ತಾರೆ. ಕೆಲವರು ರಿಲೀಸ್ ಆದ ಮೂರು ಸಿನಿಮಾಗಳನ್ನೂ ನೋಡುತ್ತಾರೆ. ಅಲ್ಲಿನ ಜನರೇ ಹಾಗೆ. ವಾರದ ದಿನ ನಾವು ದೇವಸ್ಥಾನಕ್ಕೆ ಹೋಗುವಂತೆ, ಥಿಯೇಟರ್‌ಗೆ ಹೋಗುತ್ತಾರೆ.

20 ವರ್ಷಗಳಿಂದ ಇಲ್ಲದ ಸಮಸ್ಯೆ ಈಗೇಕೆ?

ನನ್ನ ಅನಿಸಿಕೆ ಪ್ರಕಾರ, ನಾವು ಒಳ್ಳೆ ಸಿನಿಮಾಗಳನ್ನು ಕೊಡದೆ ಇರುವುದರಿಂದ ನಮ್ಮ ಪರಿಸ್ಥಿತಿ ಹೀಗಾಗಿದೆ. ‘ಸು ಫ್ರಮ್ ಸೋ’, ‘ಲವ್ ಮಾಕ್‌ಟೇಲ್-3’ ಹಿಟ್ ಆದವು. ಬೇರೆ ಸಿನಿಮಾಗಳು ಏಕೆ ಗೆಲ್ಲುತ್ತಿಲ್ಲ ಎಂದರೆ, ನಾವು ಜನರಿಗೆ ಇಷ್ಟವಾಗುವ ಕಂಟೆಂಟ್ ಕೊಡುತ್ತಿಲ್ಲ ಅಷ್ಟೆ, ನಮಗೆ ಯಾವುದೇ ಒಟಿಟಿ ಪ್ಲಾಟ್‌ಫಾರ್ಮ್‌ಗಳು ಸಪೋರ್ಟ್ ಮಾಡುತ್ತಿಲ್ಲ, ಟಾಲಿವುಡ್‌ನಲ್ಲಿ ಹೀರೋ, ಹಿರೋಯಿನ್ ಫಿಕ್ಸ್ ಆಗುತ್ತಿದ್ದಂತೆ ಎಲ್ಲಾ ಬಿಸ್ನೆಸ್‌ಗಳು ಶುರುವಾಗುತ್ತವೆ. ಆದರೆ ಇಲ್ಲಿ ಯಾರ ಬೆಂಬಲವೂ ಇಲ್ಲ, ಥಿಯೇಟರ್‌ನಲ್ಲಿ ಸಿನಿಮಾ ಗೆದ್ದರಷ್ಟೆ, ಒಟಿಟಿ, ಸ್ಯಾಟಲೈಟ್ ರೈಟ್‌ಗೆ ಖರೀದಿಸುತ್ತಾರೆ.

ಥಿಯೇಟರ್‌ಗೆ ಜನ ಬಾರದಿರಲು ಕಾರಣವೇನು?

ಒಂದು ಕಂಟೆಂಟ್, ಮತ್ತೊಂದು ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ವೀಕ್ಷಣೆ ಈಗ ದುಬಾರಿ. ಸಿಂಗಲ್ ಸ್ಕ್ರೀನ್‌ಗಳು ಸದ್ಯ ಕಷ್ಟದ ಪರಿಸ್ಥಿತಿಯಲ್ಲಿವೆ. ಒಂದು ಸಿನಿಮಾ ನೋಡಲು ಫ್ಯಾಮಿಲಿಯ ನಾಲ್ಕೈದು ಜನರ ಜತೆ ನಾನೇ ಮಲ್ಟಿಪ್ಲೆಕ್ಸ್‌ಗೆ ಹೋಗಿದ್ದೆ. ನಾಲ್ಕು ಸಾವಿರ ಖರ್ಚಾಯಿತು. ಸಿನಿಮಾ ಎಂದಿಗೂ ದುಬಾರಿಯಾಗಬಾರದು. ಅದು ಸಾಮಾನ್ಯ ಜನರಿಗೆ ಕೈಗೆಟಕುವಂತಿರಬೇಕು. ಹಾಗಾಗಿ ಜನ ಒಟಿಟಿಯಲ್ಲೇ ನೋಡುತ್ತೇವೆ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಥಿಯೇಟರ್‌ನಲ್ಲೇ ಸಿನಿಮಾ ಸಕ್ಸಸ್ ಆಗಿಲ್ಲ ಎಂದರೆ ಚಿತ್ರ ಒಟಿಟಿಗೆ ಬರುವುದೇ ಇಲ್ಲ. ■

ದಿಗಂತ್ ಹೋಮ್‌ಸ್ಟೇ

ನಂದಿ ಬೆಟ್ಟದ ಬಳಿಯಲ್ಲಿ ನಮಗೆಂದೇ ಒಂದು ಪುಟ್ಟ ಕಾಟೇಜ್ ಮಾಡಿಕೊಂಡಿದ್ದೆವು. ಅದನ್ನು ನಾವೀಗ ಹೋಮ್ ಸ್ಟೇಗೆ ಎಂದು ದಿನದ ಬಾಡಿಗೆಗೆ ಕೊಡುತ್ತಿದ್ದೇವೆ. ಅದರ ಮೇಲೂ ನಾವು ಅವಲಂಬಿತರಾಗಿದ್ದೇವೆ ಎಂದರೆ ನಾವು ಹೇಗೆಲ್ಲಾ ಯೋಚಿಸುತ್ತಿದ್ದೇವೆ ಅಂದಾಜು ಮಾಡಿ.

ಮದುಮಗಳ ಅಲಂಕಾರದಲ್ಲಿ ಮಿನಿಮಲಿಸ್ಟಿಕ್ ಸೀರೆ

ಮದುಮಗಳ ಉಡುಪಿನಲ್ಲಿ ಸರಳತೆಯೇ ಈಗ ಫ್ಯಾಷನ್ ಆಗಿದ್ದು, ಮಿನಿಮಲಿಸ್ಟಿಕ್ ಸೀರೆ ಟ್ರೆಂಡಿಂಗ್‌ನಲ್ಲಿದೆ.

ಶುಭಾ ವಿಕಾಸ್
shubha.hegde@timesofindia.com

ಮೈತುಂಬ ಜರಿ, ಹರಳು, ಕಸೂತಿ ಒಳಗೊಂಡ ದೊಡ್ಡ ಬಾರ್ಡರ್‌ನೊಂದಿಗೆ ಸಿಂಗಾರಗೊಂಡ ಸೀರೆಗೂ ನವ ವಧುವಿನ ಕಳೆ. ಪ್ರತಿ ಮನೆಯ ಮಗಳನ್ನು ಮದುಮಗಳನ್ನಾಗಿಸುವ ಈ ರೇಷ್ಮೆ ನೂಲಿನೊಂದಿಗೆ ಬೆರೆತ ಸಂಪ್ರದಾಯ ಆಧುನಿಕ ಫ್ಯಾಷನ್‌ನಲ್ಲಿ ಒಂದಷ್ಟು ಬದಲಾವಣೆಗೆ ತನ್ನನ್ನು ಒಗ್ಗಿಸಿಕೊಂಡಿದೆ. ಬದಲಾದ ಅಭಿರುಚಿಯೊಂದಿಗೆ ಮದುಮಗಳ ಸೀರೆ ಅದ್ದೂರಿತನವನ್ನು ಕಳಚಿಟ್ಟು ಸರಳಗೊಂಡಿದೆ. ಅದೇ ಈಗ ಮಿನಿಮಲಿಸ್ಟ್ ಸೀರೆ ಹೆಸರಲ್ಲಿ ಗಮನ ಸೆಳೆದಿದೆ. ಈ ಕಲ್ಪನೆಯಡಿ ವಧುವು ಕೇವಲ ಬಟ್ಟೆಯ ಭಾರವನ್ನು ಹೊರುವುದಿಲ್ಲ, ಬದಲಾಗಿ ತನ್ನ ವ್ಯಕ್ತಿತ್ವವನ್ನು ಸರಳತೆಯ ಮೂಲಕ ಪ್ರತಿಬಿಂಬಿಸುತ್ತಾಳೆ. ಈ ಮಿನಿಮಲಿಸ್ಟ್ ಸೀರೆ ಕೇವಲ ಫ್ಯಾಷನ್ ಮಾತ್ರವಲ್ಲ, ಅದು ಆತ್ಮವಿಶ್ವಾಸ ಮತ್ತು ಆಧುನಿಕತೆಯ ಸಂಕೇತ.

ಮಿನಿಮಲಿಸ್ಟಿಕ್ ಲುಕ್

ಸರಳತೆ ಮತ್ತು ಗಾಂಭೀರ್ಯವನ್ನೇ ಮೈವೆತ್ತಂತೆ ಕಾಣುವ ಮಿನಿಮಲಿಸ್ಟಿಕ್ ಶೈಲಿಯು ಆಡಂಬರವಿಲ್ಲದ ಆದರೆ ಅದೇ ವೈಭವದ ಸಂಕೇತವಾಗಿ ಹೊರಹೊಮ್ಮಿದೆ. ಈ ನಿಟ್ಟಿನಲ್ಲಿ ಟಿಶ್ಯೂ ಸಿಲ್ಕ್ ಸೀರೆಗಳು ವಧುಗಳ ಮೊದಲ ಆಯ್ಕೆ. ಸಣ್ಣ ಬಾರ್ಡರ್ ಇರುವ ಕಾಂಜೀವರಂ ಸೀರೆಗಳು ಟ್ರೆಂಡ್‌ನಲ್ಲಿವೆ. ಪ್ಲೇನ್ ಶಿಫಾನ್ ಮತ್ತು ಜಾರ್ಜೆಟ್ ಸೀರೆಗಳು ಯಾವುದೇ ವರ್ಕ್ ಇಲ್ಲದೆ ಎಲಿಗೆಂಟ್ ಆಗಿ ಕಾಣುತ್ತವೆ. ಹಗುರ ಮತ್ತು ಪಾರದರ್ಶಕ ಆರ್ಗನ್ಜಾ ಸೀರೆಗಳಲ್ಲಿ ಸಣ್ಣದಾದ ಫ್ಲೋರಲ್ ಪ್ರಿಂಟ್ಸ್ ಮಿನಿಮಲಿಸ್ಟಿಕ್ ಲುಕ್ ನೀಡುತ್ತವೆ. ನೈಸರ್ಗಿಕ ಲುಕ್ ಬಯಸುವವರಿಗೆ ಲಿನನ್ ಅತ್ಯುತ್ತಮ. ಹೆಚ್ಚು ವರ್ಕ್ ಇಲ್ಲದಿದ್ದರೂ ಬಣ್ಣದಲ್ಲೇ ರಾಯಲ್ ಲುಕ್ ನೀಡುವ ಗೋಲ್ಡ್ ಅಥವಾ ಸಿಲ್ವರ್ ಟಿಶ್ಯೂ ಸೀರೆಗಳು ಪ್ರಸಿದ್ಧ.

ಉಡುವ ಸೀರೆಯಲ್ಲಿ ಹೊಸತನ

ಸೀರೆಯನ್ನು ಉಡುವ ರೀತಿ ಹಾಗೂ ಅದಕ್ಕೆ ಬಳಸುವ ಆ್ಯಕ್ಸೆಸರಿಯಲ್ಲೂ ಒಂದಷ್ಟು ಹೊಸತನ ಬೆರೆತಿದೆ. ಸಾಂಪ್ರದಾಯಿಕ ಒಡ್ಯಾಣದ ಬದಲಾಗಿ ಸಣ್ಣನೆಯ ಮೆಟಲ್ ಬೆಲ್ಟ್, ಲೇಸ್ ಬೆಲ್ಟ್ ಬಳಕೆ ಈಗಿನ ಸ್ಟೈಲ್. ಇದು ವಧುವಿಗೆ ಸಪೂರ ಮತ್ತು ಎತ್ತರದ ನೋಟವನ್ನು ನೀಡುತ್ತದೆ. ಅದೇ ರೀತಿ ಸೀರೆಯಲ್ಲಿ ಪ್ರಿ-ಡ್ರೇಪ್ಡ್ ಸೀರೆಗಳು ಸಹ ಮದುಮಗಳ ನೆಚ್ಚಿನ ಆಯ್ಕೆಯಾಗಿ ಬದಲಾಗಿವೆ. ■

ಕಡಿಮೆ ಅಲಂಕಾರದಲ್ಲೂ ಹೆಚ್ಚು ಆಕರ್ಷಣೆ ನೀಡುವುದೇ ಮಿನಿಮಲಿಸ್ಟಿಕ್ ಫ್ಯಾಷನ್‌ನ ಗುಟ್ಟು. ಈ ಫ್ಯಾಷನ್‌ನಲ್ಲಿ ಸೀರೆಯ ಬಣ್ಣ, ಗುಣಮಟ್ಟ, ಶೈಲಿ ಮುಖ್ಯ.

-ಜಾನಕಿ ಪಿ.
ವಸ್ತ್ರವಿನ್ಯಾಸಕಿ

ಆಭರಣಗಳ ಆಯ್ಕೆ

ಸೀರೆಗೆ ಪೂರಕವಾಗಿ ಆಭರಣದತ್ತಲೂ ವಿಶೇಷ ಗಮನ ನೀಡಬೇಕು. ಮಿನಿಮಲಿಸ್ಟ್ ಫ್ಯಾಷನ್‌ನ ಮುಖ್ಯ ಸೂತ್ರವೆಂದರೆ ಕಡಿಮೆ ಆಭರಣ. ಭರ್ಜರಿಯಾದ ಚೋಕರ್ ಧರಿಸಿದರೆ, ಕಿವಿ ಓಲೆಗಳು ಸಣ್ಣದಿರಲಿ. ಒಂದು ವೇಳೆ ದೊಡ್ಡದಾದ ಜುಮುಕಿ ಅಥವಾ ಚಾಂದ್‌ಬಾಲಿ ಧರಿಸಿದರೆ ಕುತ್ತಿಗೆ ಖಾಲಿ ಇರಲಿ. ಸರಳ ಸೀರೆಗೆ ಗುಂಡಿನ ಸರ ಅಥವಾ ಮುತ್ತಿನ ಹಾರವನ್ನು ಧರಿಸಬಹುದು. ಮಿನಿಮಲಿಸ್ಟ್ ಸೀರೆಗೆ ಅತಿಯಾದ ಮೇಕಪ್ ಹೊಂದುವುದಿಲ್ಲ, ನೋ-ಮೇಕಪ್ ಲುಕ್ ಅಥವಾ ನೈಸರ್ಗಿಕ ಹೊಳಪಿನ ಮೇಕಪ್ ಇದಕ್ಕೆ ಪೂರಕ.

ಲವಲVK Fashion ಗುರು

ಪ್ರಸಕ್ತ ವರ್ಷ ಶಿಕ್ಷಣ ಕ್ಷೇತ್ರವು ಕೃತಕ ಬುದ್ಧಿಮತ್ತೆ(ಎಐ) ಮತ್ತು ಕೌಶಲಾಧರಿತ ಶಿಕ್ಷಣದ ಮೇಲೆ ಭಾರಿ ಬದಲಾವಣೆ ಕಾಣಲಿದೆ ಎಂದಿದ್ದಾರೆ ಶಿಕ್ಷಣ ತಜ್ಞರು.

VK ಎಜುಕೇಷನ್

ಒಳ್ಳೆಯ ನಾಳೆಗಳಿಗಾಗಿ

ADVERTORIAL, EDUCATION PROMOTIONAL FEATURE

ಸಾಂಪ್ರದಾಯಿಕ ಪದವಿಗಳಿಗಿಂತ ನಿರ್ದಿಷ್ಟ ಕೌಶಲ ಆಧರಿತ ಸಣ್ಣ ಅವಧಿಯ ಕೋರ್ಸ್‌ಗಳಿಗೆ (ಮೈಕ್ರೋ- ಕ್ರೆಡೆನ್ಷಿಯಲ್ಸ್) ಬೇಡಿಕೆ ಹೆಚ್ಚಾಗಲಿದೆ.

ಎಂಬಿಎ ಉದ್ಯಮ ಲೋಕವನ್ನು ರೂಪಿಸುವ ನಾಯಕತ್ವದ ಮಾರ್ಗ

ಬಿಸ್ನೆಸ್ ಅಡ್ಮಿನಿಸ್ಟ್ರೇಶನ್ ಶಿಕ್ಷಣವನ್ನು ಪಡೆದು ಉದ್ಯಮ ವಲಯದಲ್ಲಿ ಬಹುದೊಡ್ಡ ಹೆಸರು ಮಾಡಿದ ಅನೇಕರಿದ್ದಾರೆ. ತಮ್ಮ ಪ್ರತಿಭೆ ಹಾಗೂ ಶಿಕ್ಷಣದ ಬಲದಿಂದ ಜಗತ್ತಿನ ಗಮನ ಸೆಳೆದ ಸಾಧಕರ ವಿವರಗಳು ಇಲ್ಲಿವೆ.

ಸುಂದರ್ ಪಿಚೈ | ಸತ್ಯ ನಾದೆಲ್ಲ | ಅಶ್ನೀರ್ ಗ್ರೋವರ್ | ಅಮನ್ ಗುಪ್ತಾ | ಶರಣ್ ಹೆಗ್ಡೆ

ಎಂಬಿಎ (ಮಾಸ್ಟರ್ ಆಫ್ ಬಿಸ್ನೆಸ್ ಅಡ್ಮಿನಿಸ್ಟ್ರೇಶನ್) ಇಂದಿನ ಯುಗದಲ್ಲಿ ಉದ್ಯಮ ಮತ್ತು ಆರ್ಥಿಕ ವ್ಯವಸ್ಥೆಯನ್ನು ಮುನ್ನಡೆಸುವ ಪ್ರಮುಖ ಶಿಕ್ಷಣವಾಗಿದೆ. ಈ ಶಿಕ್ಷಣವು ನಾಯಕತ್ವ ಮತ್ತು ಮಾರುಕಟ್ಟೆ ಅರಿವು ಬೆಳೆಸುವ ಮೂಲಕ ವ್ಯಕ್ತಿಗಳನ್ನು ಯಶಸ್ವಿ ನಾಯಕರಾಗಿ ರೂಪಿಸುತ್ತದೆ. ಜಾಗತಿಕ ಮಟ್ಟದಲ್ಲಿ ಬೆಳೆದ ಅನೇಕ ಗಣ್ಯರು ತಮ್ಮ ಯಶಸ್ಸಿಗೆ ಈ ಶಿಕ್ಷಣವೇ ಮೂಲವೆಂದು ತೋರಿಸಿದ್ದಾರೆ.

ಸುಂದರ್ ಪಿಚೈ: 2015ರಿಂದ ಗೂಗಲ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ 2019ರಿಂದ ಅದರ ಮಾತೃಸಂಸ್ಥೆ ಅಲ್ಫಾಬೆಟ್ ಕಂಪನಿ ಎರಡನ್ನೂ ಒಂದೇ ಸಮಯದಲ್ಲಿ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ.

ಸತ್ಯ ನಾದೆಲ್ಲ: ನಾವೀನ್ಯ ಮತ್ತು ನಾಯಕತ್ವದ ಮೂಲಕ ಮೈಕ್ರೋಸಾಫ್ಟ್ ಸಂಸ್ಥೆಗೆ ಹೊಸ ಚೈತನ್ಯ ನೀಡಿದ್ದಾರೆ. ಅವರು 2014ರಿಂದ ಮೈಕ್ರೋಸಾಫ್ಟ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಶ್ನೀರ್ ಗ್ರೋವರ್: 2018ರಲ್ಲಿ, ಭಾರತ್ ಪೇ ಸಹ-ಸಂಸ್ಥಾಪಕರಾಗಿ, ಹಣಕಾಸು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳನ್ನು ತಂದು ಉದ್ಯಮದಲ್ಲಿ ಯಶಸ್ಸು ಸಾಧಿಸಿದ್ದಾರೆ. ಭಾರತ್ ಪೇ ಮೂಲಕ ಸಣ್ಣ ವ್ಯಾಪಾರಿಗಳಿಗೆ ಡಿಜಿಟಲ್ ಪಾವತಿ ಸೇವೆಗಳನ್ನು ಒದಗಿಸಿ ದೊಡ್ಡ ಯಶಸ್ಸು ಗಳಿಸಿದವರು ಅವರು.

ಅಮನ್ ಗುಪ್ತಾ: ಇವರು ಬೋಟ್ ಕಂಪನಿಯ ಸಹ-ಸ್ಥಾಪಕರಾಗಿದ್ದಾರೆ. 2016ರಲ್ಲಿ ಸ್ಥಾಪನೆಯಾಗಿರುವ ಈ ಕಂಪನಿ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಹೆಡ್‌ಫೋನ್ಸ್, ಇಯರ್‌ಫೋನ್ಸ್ ಮತ್ತು ಸ್ಪೀಕರ್‌ಗಳನ್ನು ನೀಡುವ ಮೂಲಕ ಯುವಕರಲ್ಲಿ ಬಹಳ ಜನಪ್ರಿಯವಾಗಿದೆ.

ಶರಣ್ ಹೆಗ್ಡೆ: ಭಾರತದ ಹಣಕಾಸು ಶಿಕ್ಷಣ ಕ್ಷೇತ್ರದಲ್ಲಿ ಪ್ರಸಿದ್ಧ ಉದ್ಯಮಿ ಮತ್ತು ಕಂಟೆಂಟ್ ಕ್ರಿಯೇಟರ್ ಆಗಿದ್ದಾರೆ. ಅವರು 2022ರಲ್ಲಿ ಸ್ಥಾಪಿಸಿದ ದಿ 1% ಕ್ಲಬ್ ಮೂಲಕ ಯುವಜನರಿಗೆ ಹೂಡಿಕೆ, ಉಳಿತಾಯ ಮತ್ತು ಹಣಕಾಸು ಜ್ಞಾನವನ್ನು ಸರಳವಾಗಿ ಬೋಧಿಸುತ್ತಿದ್ದಾರೆ.

ವಾರ್ಷಿಕ ಆದಾಯ

- **ಸುಂದರ್ ಪಿಚೈ:** ವರ್ಷಕ್ಕೆ ಸುಮಾರು 1500-1800 ಕೋಟಿ ರೂ.
- **ಸತ್ಯ ನಾದೆಲ್ಲ:** ವರ್ಷಕ್ಕೆ ಸುಮಾರು 400-500 ಕೋಟಿ ರೂ.
- **ಅಶ್ನೀರ್ ಗ್ರೋವರ್-** ಸುಮಾರು 900 ಕೋಟಿ ರೂ.
- **ಅಮನ್ ಗುಪ್ತಾ -** ಸುಮಾರು 720 ಕೋಟಿ ರೂ.
- **ಶರಣ್ ಹೆಗ್ಡೆ -** ಸುಮಾರು 400 ಕೋಟಿ ರೂ.

ಎಂಬಿಎ ಶಿಕ್ಷಣ ಈ ಎಲ್ಲ ಗಣ್ಯರಿಗೆ ಸಮಸ್ಯೆಯ ಪರಿಹಾರ, ಸಂವಹನ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿದೆ. ಇದರಿಂದ ಅವರು ತಮ್ಮ ಕ್ಷೇತ್ರಗಳಲ್ಲಿ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದ್ದಾರೆ. ■

RNI No. KARKAN/2016/71628

Vol. 11 Issue no. 116

This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.